


ದುಡಿವ ಜನರ ಪ್ರಾಣ ಮಿತ್ರ

ಐಕ್ಯರಂಗ


ಸಂಪುಟ 25 ಸಂಚಿಕೆ 47
ನವಂಬರ್ 23, 2003 ಬೆಲೆ ರೂ. 3.00

ಶ್ರೀಲಂಕಾ ಬಿಕ್ಕಟ್ಟು : ಪರಿಹಾರವೇನು?



ಆನೇಕಲ್ : ಮಂಜುಳಾ ಆತ್ಮಹತ್ಯೆ ಬಿಜೆಪಿ ಶಾಸಕನೆಲ್ಲಿ?





'ದ ಹಿಂದೂ' ಪ್ರಕರಣ

ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲೆ ನಿರಂಕುಶ ಧಾಳಿ



Inspirational leaders Mahatma Gandhi, Nelson Mandela and Mother Teresa, too, found a place.

ಬಾಂಧವ್ಯ ಬೆಸೆದ ಕ್ರೀಡಾಕೂಟ

ಇಟಲಿ ಸರ್ಕಾರ ಪದಚ್ಯುತಿಯತ್ತ?

ವಿಮೋಚನಾ ಸಮರದಲ್ಲಿ....

ಮೇಜರ್ ಜಯಪಾಲ್ ಸಿಂಗ್



ಆತ್ಮಕಥನ

51

ಹಿಂದೆ ಸೊಳ್ಳೆಗಳು, ಜಿಗಣೆಗಳು, ವಿಷಯುಕ್ತ ಕ್ರಿಮಿಕೀಟಗಳು, ಹಾವುಗಳು ತುಂಬಿರುವ ಬೆಟ್ಟದಲ್ಲಿ ಮಳೆ, ಚಳಿ ನಡುವೆ ಕಳೆದ ಅಪಾಯಕಾರಿ ರಾತ್ರಿಗಳು, ತಮ್ಮ ಸಾಧನೆಗೆ ಯಾರದೇ ಮೆಚ್ಚುಗೆ ನಿರೀಕ್ಷಿಸದೆ; ಟೀಕೆಗಳನ್ನು ಸ್ಫೂರ್ತಿಯಿಂದ ಸ್ವೀಕರಿಸಿ ಸರ್ವಶಕ್ತ ಹೋರಾಟ ನಡೆಸಿದ ತರುಣರು ಮತ್ತು ಅವರ ಇರುವಿಕೆಯನ್ನು ಶತ್ರುಗಳಿಗೆ ಬಿಟ್ಟುಕೊಡದ ದನದಾಹಿಗಳು, ರೈತರು.. ಈ ಬಗ್ಗೆ ಓದಿರುವಿರಿ. ಮುಂದೆ.....



ಕನ್ನಡಕ್ಕೆ: ವಿಶ್ವ ಕುಂದಾಪುರ

ಕುರಿಗಾಹಿ ಬಾಲಕನ ಆಸಕ್ತಿ

ವೈರಿಗಳ ಕಾವಲಿನ ಬಗ್ಗೆ ನಮಗೆ ತಿಳಿಸಲು ಮೈಲಿಗಟ್ಟಲೆ ದೂರ ಓಡಿಬರುತ್ತಾರೆ. ಇಲ್ಲಿನ 'ಹೊರಗಡೆಯ' ನಮ್ಮ ಸಂಗಾತಿಗಳು ಹೇಳುವಂತೆ ನಾವು ನಿಜವಾಗಿಯೂ ಜನರಿಂದ ಪ್ರತ್ಯೇಕಗೊಂಡಿದ್ದೇವೆಯೇ ನೀವೇ ಹೇಳಿ. ಆ ಗುಡಿಸಲು, ತಂತಿಬೇಲಿ ಮತ್ತು ಅದರ ಆವರಣದಲ್ಲಿರುವ ಹಳ್ಳಿಗಳನ್ನು ನೋಡಿ. ಅದೊಂದು ಮಿಲಿಟರಿ ಶಿಬಿರ. ಅದು ಒಂದೇ ಅಲ್ಲ. ನಾವು ಈ ಬೆಟ್ಟದಲ್ಲಿ ವೈರಿ ಶಿಬಿರಗಳ ನಡುವಿನಲ್ಲಿ ನಿಂತಿದ್ದೇವೆ. ಈ ಜಾಗದಿಂದ ಒಂದರಿಂದ ಮೂರು ಮೈಲುಗಳ ಅಂತರದಲ್ಲಿ ವೈರಿ ಶಿಬಿರಗಳಿವೆ. ಈ ಶಿಬಿರಗಳಿಂದ ಸೈನಿಕರು ಕಾವಲಿಗೆ ಹೊರಡುತ್ತಾರೆ. ಅವರು ಎಲ್ಲ ಬೆಟ್ಟಗಳನ್ನು ಜಾಲಾಡುತ್ತಾರೆ, ಆದರೆ ಹೇಗೋ ಏನೋ ನಾವಿರುವ ಪ್ರದೇಶಗಳನ್ನು ತಪ್ಪುತ್ತಾರೆ. ಹಾಗಾಗುವುದು ಆಕಸ್ಮಿಕವಲ್ಲ ಅಥವಾ 'ಅದೃಷ್ಟ'ವೂ ಅಲ್ಲ. ಈ ದನಗಾಹಿಗಳು, ಕುರಿಗಾಹಿಗಳು ಮತ್ತು ರೈತರು ನಮ್ಮ ಸುತ್ತ ಸಾಗರದಂತೆ ಇದ್ದು ನಮ್ಮನ್ನು ರಕ್ಷಿಸುತ್ತದೆ. ಮರುದಿನ ಬೆಳಿಗೆ ಶತ್ರುಗಳು ಯಾವ ಬೆಟ್ಟದಲ್ಲಿ ಹುಡುಕಾಡುತ್ತಾರೆ ಎಂಬುದು ಮುಂಚಿನ ದಿನ ಸಂಜೆಯೇ ನಮಗೆ ಗೊತ್ತಾಗುತ್ತಿತ್ತು. ಜನರ ಬೆಂಬಲ ಇಲ್ಲದಿದ್ದರೆ ಒಂದು ದಿನವೂ ಇರಲು ನಮಗೆ ಸಾಧ್ಯವಾಗುತ್ತಿರಲಿಲ್ಲ; ಅದನ್ನು ಸ್ವತಃ ನೀವೇ ನೋಡಬಹುದಾಗಿದೆ" ಎಂದು ಸಾಗರ್ ಮಾತು ಮುಗಿಸಿದರು.

ಹೌದು, ನನಗದು ಕಾಣಿಸುತ್ತಿತ್ತು. ಕೆಳಗಿನ ಕಣಿವೆಯಲ್ಲಿ ಜೀಪು ಹಾಗೂ ಮೂರು ಟನ್ ಲಾರಿಗಳು ಸಾಗಿದ ಗುರುತುಗಳಿದ್ದವು. ಎಲ್ಲೆಡೆ ಹರಡಿರುವ ಈ ಗುಂಪು ನೋಡಿದರೆ ಬೃಹತ್ ಸೇನೆಯೊಂದು ಈ ಭಾಗಗಳಲ್ಲಿ ಈಚೆಗೆ ನಿಯೋಜಿತವಾದಂತೆ ಭಾಸವಾಗುತ್ತಿತ್ತು.

ಏರಿಯಾ ಹೆಡ್‌ಕ್ವಾರ್ಟರ್‌ಗೆ ಕರೆದೊಯ್ಯುವರೆಂದು ನಾವು ಕಾಯುತ್ತಿದ್ದಾಗ 'ಜೇನುಗಾರ' ಜೇನಿಗಾಗಿ ಪೊರೆಯನ್ನು ಕಡಿದು ರುಚಿರುಚಿಯಾದ ಜೇನುತುಪ್ಪವನ್ನು ತಂದುಕೊಟ್ಟ.

ಕುರಿಗಾಹಿ ಹುಡುಗನೊಬ್ಬ ನಮ್ಮಿಂದ ಕೆಲವೇ ಯಾರ್ಡುಗಳ ದೂರದಲ್ಲಿ ಹಾದುಹೋದ. ಅವನು ನಮ್ಮನ್ನು ನೋಡುವುದು ನಮಗೆ ಇಷ್ಟವಿರಲಿಲ್ಲ. ಹೀಗಾಗಿ ಮರೆಯೊಂದರ ಹಿಂದೆ ಅಡಗಿ ನಿಲ್ಲಲು ಯತ್ನಿಸಿದೆವು. ಆದರೆ "ನಾವು ನಿಮ್ಮನ್ನು ನೋಡಿದೆ ಕಾಮ್ರೇಡ್ಸ್.... ನಾನು ನಿಮ್ಮನ್ನು ನೋಡಿದೆ...." ಎಂದು ಆತ ಕಣ್ಣಾಮುಚ್ಚಾಲೆ ಆಟವಾಡುವ ಚಿಕ್ಕ ಮಕ್ಕಳಂತೆ ಕೂಗಿದ.

"ರೆಡ್ ಸೆಲ್ಯೂಟ್ ಕಾಮ್ರೇಡ್ಸ್" - ಆ ಹುಡುಗನೆಂದ. ಇಲ್ಲಿರುವವರು ಯಾರೆಂಬುದು ನನಗೆ ಖಚಿತವಾಗಬೇಕು- ಎಂದನಾತ. "ಈ ಕೋಪೋದ್ರಿಕ್ತ 'ಕಾಮ್ರೇಡ್' ನಾನು ಅನುಮಾನಿಸುವಂತೆ ಮಾಡಿದ. ಪೊಲೀಸ್ ಪಡೆ ಇಲ್ಲೆಲ್ಲೋ ಅಡಗಿಕೊಂಡಿರಬಹುದೆಂದು ನಾನು ಭಾವಿಸಿದೆ. ನೀರು ಇರುವ ಜಾಗದಲ್ಲಿ ಅವರು ಯಾವಾಗಲೂ ಅಡಗಿಕೊಂಡಿರುತ್ತಾರೆ. ಹೀಗಾಗಿ ನನ್ನ ಕುರಿಗಳನ್ನು ಈ ಕಡೆ ಬಿಟ್ಟು ಖಚಿತಪಡಿಸಿಕೊಂಡೆ. ಈಗಷ್ಟೇ ಆ ಬೆಟ್ಟದ ಮೇಲೆ 20 ಸಂಗಾತಿಗಳಿದ್ದರು. ನೀವು ಪೊಲೀಸ ಪಡೆಯವರಾಗಿದ್ದರೆ ನಾನು ನನ್ನ ಕುರಿಗಳನ್ನು ಅಲ್ಲಿಗೆ ತೆಗೆದುಕೊಂಡು ಹೋಗಿ ಅವರನ್ನು ಎಚ್ಚರಿಸುತ್ತಿದ್ದೆ" ಎಂದು ಕೋಲಿನ ಮೇಲೆ ಊರಿಕೊಂಡಿದ್ದ ಆ ಹುಡುಗ ಹೇಳಿದ. 'ಈ ಸಂಗಾತಿಗಳು ಯಾರು' ಎಂದು ಆತ ಜೇನುಗಾರನನ್ನು ಪ್ರಶ್ನಿಸಿದ.

"ಹೋಗಾಚೆ, ಆಡಿನ ಮಗನೆ" ಎಂದು ಜೇನುಗಾರ ಕೂಗಾಡಿದ. ತಾಂತ್ರಿಕ ನಿಯಮಗಳನ್ನು ಮುರಿಯುವುದು ಆತನಿಗೆ ಇಷ್ಟವಿರಲಿಲ್ಲ.

ಮೂರ್ಖನೇ, ಈ ಸಂಗಾತಿಗಳು ಯಾರೆಂಬುದನ್ನು ಕೇಳುವುದು ಸರಿಯಲ್ಲವೆಂದು ಆತನಿಗೆ ಸರಿಯಾಗಿ ವಿವರಿಸಿ. ತಾಂತ್ರಿಕ ನಿಯಮಗಳ ಬಗ್ಗೆ ಆತನಿಗೇನು ಗೊತ್ತಿದೆ? ಆತ ಪಕ್ಷದ ಸದಸ್ಯನಲ್ಲ" - ಹೀಗೆಂದು ತಂಡದ ಕಮಾಂಡರ್ ಜೇನುಗಾರನಿಗೆ ಮಾರುತ್ತರ ನೀಡಿದ. ಕಮಾಂಡರ್ ಎದ್ದುನಿಂತು ಕುರಿಕಾಯುವ ಹುಡುಗನನ್ನು ಒಂದು ಬದಿಗೆ ಕರೆದುಕೊಂಡು ಹೋಗಿ ಕಿವಿಯಲ್ಲೇನೋ ಉಸುರಿದ.

"ಓಹೋ ಅವರು ಪಟ್ಟಣ ದಿಂದ ಬಂದಿದ್ದಾರೆಯೇ? ದಯವಿಟ್ಟು ನನಗೂ ಅವರ ಜತೆ ಮಾತನಾಡಲು ಬಿಡಿ" - ಪುಟ್ಟ ಬಾಲಕ ಅಂಗಲಾಚಿದ. ಪ್ರಾಂತೀಯ ಸಮಿತಿ ಕಾರ್ಯದರ್ಶಿ ಮಧ್ಯಪ್ರವೇಶಿಸಿದರು, ಆ ಹುಡುಗನ ಜತೆ ಮಾತನಾಡಲು ಮುಂದಾದರು.

ಅವರು ಹೊಸ ಕ್ರಾಂತಿಕಾರಿ ಶಕ್ತಿಯೊಂದಿಗೆ ಕ್ರಿಯಾಶೀಲರಾಗಿದ್ದರು. ಕಪ್ಪು ಚರ್ಮದಡಿಯಿಂದ ಎದ್ದು ಕಾಣುತ್ತಿದ್ದ ಪ್ರತಿಯೊಂದು ನೀಲಿ-ಕಪ್ಪು ನರನಾಡಿ ತಮ್ಮ ಮನೆಗಳು ಹಾಗೂ ಸಂತೋಷವನ್ನು ನಾಶಪಡಿಸಿದವರ ಬಗ್ಗೆ ಆಕ್ರೋಶ ವ್ಯಕ್ತಪಡಿಸುವಂತೆ ಪುನರುಜ್ಜೀವನಗೊಂಡ ರಕ್ತದ ಮಹತ್ವವನ್ನು ತೋರ್ಪಡಿಸುತ್ತಿತ್ತು.

ಜನರ ಜತೆ ಸರಿಯಾಗಿ ವರ್ತಿಸಬೇಕು.

ಪ್ರಾಂತೀಯ ಕಾರ್ಯದರ್ಶಿ ಬಾಲಕನ ಬೆನ್ನು ತಟ್ಟಿದರು. ಅವನ ಜತೆ ಜೇನುಗಾರ ವರ್ತಿಸಿದ ರೀತಿ ಕಾರ್ಯದರ್ಶಿಗೆ ಸರಿಬಂದಿರಲಿಲ್ಲ. ಕುರಿಕಾಯುವ ಹುಡುಗನ ಮುಂದೆಯೇ ಜೇನುಗಾರನನ್ನು ಅವರು ಟೀಕಿಸಿದರು. ಜನರ ಜತೆ ವರ್ತಿಸುವಾಗ ಗೆರಿಲ್ಲಾಗಳು ಅನುಸರಿಸಬೇಕಾದ ನಿಯಮಗಳನ್ನು ಜೇನುಗಾರ ಪಾಲಿಸಲಿಲ್ಲವೆಂದು ಹೇಳಿ ಬಾಲಕನ ಕ್ಷಮೆ ಕೋರುವಂತೆ ಜೇನುಗಾರನಿಗೆ ಕಾರ್ಯದರ್ಶಿ ಸೂಚಿಸಿದರು. ಸ್ವಯಂ ವಿಮರ್ಶೆ ಮಾಡಿಕೊಳ್ಳುವಂತೆಯೂ ಹೇಳಿದರು. ಜೇನುಗಾರ ಹುಡುಗನ ಕ್ಷಮೆ ಕೇಳಿದ. ಅದಾದ ನಂತರ ಇಂಥ ಪ್ರಶ್ನೆಗಳನ್ನು ಕೇಳುವುದು ಅಪಾಯಕರವಾದ್ದರಿಂದ ಈ ರೀತಿಯಲ್ಲಿ ಕೇಳಬಾರದು ಎಂದು ಕಾರ್ಯದರ್ಶಿ ಹುಡುಗನಿಗೆ ವಿವರಿಸಿದರು. ಸಂಗಾತಿಗಳ ಗುರುತು ವೈರಿಗಳಿಗೆ ಗೊತ್ತಾದರೆ ಶತ್ರುಗಳಿಗೆ ಯಾವ ರೀತಿ ಸಹಾಯವಾಗುತ್ತದೆ ಎಂಬುದನ್ನು ಸ್ವತಃ ತನ್ನ ಅನುಭವದ ಆಧಾರದಲ್ಲಿ ಅರ್ಥ ಮಾಡಿಕೊಳ್ಳಬೇಕೆಂದು ಹುಡುಗನಿಗೆ ತಿಳಿಸಿದರು.

"ಶತ್ರುಗಳಿಗೆ ನೆರವಾಗುವುದು ನನ್ನ ಉದ್ದೇಶವಲ್ಲ. ಈ ಬೇವರ್ಶಿಗಳು ನಿನ್ನೆ ನನ್ನ ಎರಡು ಕುರಿಮರಿಗಳನ್ನು ಬಲವಂತದಿಂದ ತೆಗೆದುಕೊಂಡು ಹೋದರು..... ಹಂದಿಗಳು' ಎಂದು ಬೈದಾಡಿದ ಬಾಲಕ ಧುತ್ ಎಂದು ಉಗಿದ.

'ಶತ್ರುಗಳಿಗೆ ನೆರವಾಗುವುದು ನಿನ್ನ ಬಯಕೆಯಲ್ಲವಾದರೆ ಈ ಸಂಗಾತಿಗಳು ಯಾರೆಂದು ಪ್ರಶ್ನಿಸಬೇಡ" - ಹೀಗೆಂದು ಜೇನುಗಾರ ಗೊಣಗಿದ.

'ಇದು ತುಂಬಾ ಸರಳ, ಅಲ್ಲವೆ? ' ಎಂದು ಕಾಯದರ್ಶಿ ನಕ್ಕರು. ಎಲ್ಲರೂ ಅವರೊಂದಿಗೆ ಸೇರಿ ನಕ್ಕರು. 'ಸ್ವ-ವಿಮರ್ಶೆ'ಯ ಬಿಗುವಾನದ ವಾತಾವರಣ ಶೀಘ್ರವೇ ಕರಗಿಹೋಯಿತು.

"ಬರ್ಮಾದಲ್ಲಿ ನಮ್ಮ ಸಂಗಾತಿಗಳು ಹೇಗೆ ಕಾರ್ಯಾಚರಿಸುತ್ತಿದ್ದಾರೆಂದು ನನಗೆ ಹೇಳಿ" - ಕೋಲನ್ನು ಕೆಳಗೆಸೆದು ನಯವಾದ ಕಲ್ಲೊಂದರ ಮೇಲೆ ಕುಳಿತ ಹುಡುಗ ಕೇಳಿದ.

"ಹೋರಾಟ ಮುಂದುವರಿದಿದೆ' ಎಂದು ಕಾರ್ಯದರ್ಶಿ ಉತ್ತರಿಸಿದ.

''ರೂಸ್ ಸಾಹಿಬ್‌ಗಳು ಏನು ಮಾಡುತ್ತಿದ್ದಾರೆ? ಏರಿಯಾ ಹೆಡ್‌ಕ್ವಾರ್ಟರ್ ಕಚೇರಿಯಲ್ಲಿ ನಿನ್ನೆ ಕೆಲವು ರೂಸ್ ಸಾಹಿಬ್'ಗಳ ಚಿತ್ರಗಳನ್ನು ನಾನು ನೋಡಿದೆ. ರೈತ ' ಸಾಹೇಬರೂ ಕಾರುಗಳನ್ನು ಹೊಂದಿದ್ದಾರೆಯೇ?' - ಕುರಿಕಾಯುವ ಹುಡುಗನ ಪ್ರಶ್ನೆ ಮುಂದುವರಿದಿತ್ತು.

''ಅವರು ಸಾಹಿಬ್‌ಗಳು ಅಲ್ಲ. ಅವರು ನಮ್ಮ ಕಾಮ್ರೇಡ್‌ಗಳು. ಅವರು ಕೂಡ ನಮ್ಮಂತೆ ಹೋರಾಡಿ ಶೋಷಕರನ್ನು ಪದಚ್ಯುತಗೊಳಿಸಿದರು. ನಾವೀಗ ಅನುಭವಿಸುತ್ತಿರುವಂತೆ ಅವರು ಕೂಡ ತಮ್ಮ ವಿಮೋಚನೆಗಾಗಿ ಭಾರಿ ಬೆಲೆ ತೆತ್ತರು; ಇಂದವರು ತಮ್ಮ ದೇಶಮುಖ್‌ಗಳು ಮತ್ತು ಸಾಹುಕಾರರಿಂದ ಸ್ವತಂತ್ರವಾಗಿ ತಮ್ಮ ಶ್ರಮದ ಫಲ ಅನುಭವಿಸುತ್ತಿದ್ದಾರೆ."

'ಚೀನಾದಲ್ಲಿ ಕೂಡ ಕಾರ್ಮಿಕರು ಮತ್ತು ರೈತರು ತಮ್ಮನ್ನು ತಾವು ವಿಮೋಚನೆಗೊಳಿಸಿಕೊಂಡರು. ಇಂಡೋಚೀನಾದಲ್ಲಿ ಹಾಗೂ ಬರ್ಮಾದಲ್ಲಿ ಹೋರಾಟ ಮುಂದುವರಿದಿದೆ" - ಜೇನುಗಾರ ಹೇಳಿದ.

ಅಧ್ಯಯನ ವೃತ್ತ

ಹಾಜರಿದ್ದ ಸಂಗಾತಿಗಳ ನಡುವೆ ಒಂದು ಕ್ರಿಯಾಶೀಲ ಅಧ್ಯಯನ ವೃತ್ತ ಆರಂಭವಾಯಿತು. ಇನ್ನೂ ನಾಲ್ಕು ರೈತರು ಬಂದು ಅವರನ್ನು ಸೇರಿಕೊಂಡರು. ಸಂತರು, ಪ್ರವಾದಿಗಳು, ದಂತಕತೆಗಳ ನಾಯಕರು ಮತ್ತು 'ಮಹಾನ್ ವ್ಯಕ್ತಿಗಳ' ಹೆಸರುಗಳನ್ನು ಎಷ್ಟೊಂದು ಭಕ್ತಿಗೌರವದಿಂದ ಕರೆಯುತ್ತಾರೋ ಅಷ್ಟೇ ಭಕ್ತಿಯಿಂದ ಸ್ಟಾಲಿನ್, ಮಾವೋತ್ಸೆ ತುಂಗರ ಹೆಸರುಗಳನ್ನು ಅವರು ಉಚ್ಚರಿಸಿದರು.

ಬರ್ಮಾ ಮತ್ತು ಇಂಡೋಚೀನಾದ ರೈತರು ಹೇಗೆ ಹೋರಾಡುತ್ತಿದ್ದಾರೆ ಎಂಬ ವಿಚಾರದಲ್ಲಿ ಅವರಿಗೂ ಆಸಕ್ತಿಯಿತ್ತು. ಚೀನಾದ ರೈತರು ತಮ್ಮ ಹೊಸ ಜೀವನವನ್ನು ಹೇಗೆ ಕಟ್ಟುತ್ತಿದ್ದಾರೆ. ತೆಲಂಗಾಣದ ಬಗ್ಗೆ ದೇಶದ ಉಳಿದ ಭಾಗಗಳ ಜನರು ಏನು ಸೂಚಿಸುತ್ತಿದ್ದಾರೆ ಎಂಬ ಬಗ್ಗೆಯೂ ಅವರಿಗೆ ಕುತೂಹಲವಿತ್ತು.

ನಾನು ಈ ರೈತರನ್ನು ಗಮನಿಸಿದೆ. ತೆಲಂಗಾಣ ರೈತರ ಈ ದೇಹಗಳು ತಲೆತಲಾಂತರದಿಂದ ಪಾಳೇಗಾರಿ ಶೋಷಕರ ಅನ್ಯಾಯಕ್ಕೆ ಸಾಕ್ಷಿಭೂತರಂತಿದ್ದರು, ಆದರೆ ಇಂದು ಅವರು ಹೊಸ ಕ್ರಾಂತಿಕಾರಿ ಶಕ್ತಿಯೊಂದಿಗೆ ಕ್ರಿಯಾಶೀಲರಾಗಿದ್ದರು. ಕಪ್ಪು ಚರ್ಮದಡಿಯಿಂದ ಎದ್ದು ಕಾಣುತ್ತಿದ್ದ ಪ್ರತಿಯೊಂದು ನೀಲಿ-ಕಪ್ಪು ನರನಾಡಿ ತಮ್ಮ ಮನೆಗಳು ಹಾಗೂ ಸಂತೋಷವನ್ನು ನಾಶಪಡಿಸಿದವರ ಬಗ್ಗೆ ಆಕ್ರೋಶ ವ್ಯಕ್ತಪಡಿಸುವಂತೆ ಪುನರುಜ್ಜೀವನಗೊಂಡ ರಕ್ತದ ಮಹತ್ವವನ್ನು ತೋರ್ಪಡಿಸುತ್ತಿತ್ತು. ತಮ್ಮ ಶ್ರಮದ ಫಲವನ್ನು ಕಿತ್ತುಕೊಂಡವರ, ಈಗ ತಮ್ಮ ತಲೆಯನ್ನು ಒಡೆಯುತ್ತಿರುವ, ತಮ್ಮ ಎದೆಗಳನ್ನು ಸೀಳುತ್ತಿರುವ, ತಮ್ಮ ಕೈಕಾಲುಗಳನ್ನು ಕತ್ತರಿಸುತ್ತಿರುವ, ತಮ್ಮ ಮಹಿಳೆಯರ ಮೇಲೆ ಅತ್ಯಾಚಾರ ನಡೆಸುತ್ತಿರುವ ಮತ್ತು ತಮ್ಮ ಹಳ್ಳಿಗಳನ್ನು ನಾಶಮಾಡುತ್ತಿರುವ ಜನರ ವಿಚಾರದಲ್ಲಿ ಅವರ ರಕ್ತ ಕೊತಕೊತನೆ ಕುದಿಯುತ್ತಿತ್ತು.

ಮುಂದುವರಿಯುವುದು

ಇಂದಿಗಾಗಿ ನಾಳಿನ ಕಾರ್ಯಕ್ರಮಗಳು

- **ನವೆಂಬರ್ 28,2003**
  ಬಳ್ಳಾರಿ ಜಿಲ್ಲಾ ಸಿಐಟಿಯುನಿಂದ 'ಬೇಡಿಕೆ ದಿನ' ಸಿಐಟಿಯು ಜಿಲ್ಲಾ ಸಮ್ಮೇಳನದ ಕರೆ.
- **ನವೆಂಬರ್ 29-2003**
  ಎಸ್.ಎಫ್.ಐ. ದ.ಕ. ಜಿಲ್ಲಾ ಸಮ್ಮೇಳನ, ಮಂಗಳೂರು.
- **ನವೆಂಬರ್ 29,30-2003**
  ಕರ್ನಾಟಕ ಸಮಾಜಿಕ ವೇದಿಕೆ (ಕೆ.ಎಸ್.ಎಫ್) ರಾಜ್ಯ ಮಟ್ಟದ ಸಮ್ಮೇಳನ ಇಂದಿರಾ ಗಾಜಿನ ಮನೆ, ಹುಬ್ಬಳ್ಳಿ.
- **ಡಿಸೆಂಬರ್ 2, 2003.**
  ಬಾಬಾ ಬುಡನ್‌ಗಿರಿ ದತ್ತಪೀಠದ ಕೋಮು ಸೌಹಾರ್ದತೆ ಸಾರಲು, ಸಂಘಪರಿವಾರದ ದತ್ತಮಾಲೆ, ದತ್ತ ಜಯಂತಿ ಆಚರಣೆ ನಿರ್ಬಂಧಕ್ಕೆ ಆಗ್ರಹಿಸಿ, ರಾಜ್ಯದಾದ್ಯಂತ ಧರಣಿ.
- **ಡಿಸೆಂಬರ್ 2, 2003.**
  ದಕ್ಷಿಣ ಭಾರತ ವಿದ್ಯುತ್ ನೌಕರರ ಹಾಗೂ ಇಂಜಿನಿಯರುಗಳ ಸಮನ್ವಯ ಸಮಿತಿ. ಕೇಂದ್ರ ವಿದ್ಯುತ್ ಮಸೂದೆ - 2003 ರ ಜನವಿರೋಧಿ ಅಂಶಗಳನ್ನು ವಿರೋಧಿಸಿ ಪ್ರತಿಭಟನೆ.
- **ಡಿಸೆಂಬರ್ 6, 2003**
  ಎಸ್.ಎಫ್.ಐ. ಉಡುಪಿ ಜಿಲ್ಲಾ ಸಮ್ಮೇಳನ, ಹೋಟೆಲ್ ಶ್ರೀರಾಮ್ ರೆಸಿಡೆನ್ಸಿ, ಉಡುಪಿ.
- **ಡಿಸೆಂಬರ್ 9 ರಿಂದ 13, 2003**
  ಸಿಐಟಿಯು ಅಖಿಲ ಭಾರತ ಸಮ್ಮೇಳನ ರಾಮಲಕ್ಷ್ಮಿ ಪ್ಯಾರಡೈಸ್, ನಂ. 174 ಜಿ.ಎನ್.ಟಿ.ರಸ್ತೆ, ಮಾಧವರಾಮ್ ಚೆನ್ನೈ-600110.
- **ಡಿಸೆಂಬರ್ 11, 2003**
  ಖಾಸಗಿ ವಿದ್ಯಾಸಂಸ್ಥೆಗಳಲ್ಲಿ ಶುಲ್ಕ ಮತ್ತು ಪ್ರವೇಶವನ್ನು ಕ್ರಮಬದ್ಧಗೊಳಿಸಲು ಕೇಂದ್ರ ಶಾಸನಕ್ಕೆ ಆಗ್ರಹಿಸಿ ವಿದ್ಯಾರ್ಥಿಗಳ ಪ್ರಜಾಪ್ರಭುತ್ವ ಹಕ್ಕುಗಳಿಗೆ ಒತ್ತಾಯಿಸಿ ಅಖಿಲ ಭಾರತ ವಿದ್ಯಾರ್ಥಿ ಮುಷ್ಕರ

ಬಿಜೆಪಿಯ ಸಂಘರ್ಷ ಯಾತ್ರೆ :ಗೋಣಗಾಟದಿಂದ ಹೆಣಗಾಟದತ್ತ!

ಕೃಷ್ಣರವರ ಜನಸ್ಪಂದನ ಯಾತ್ರೆಗೆ ಪ್ರತಿಯಾಗಿ 'ಜನಸಂಘರ್ಷ ಯಾತ್ರೆ' ನಡೆಸಲು ಬಿಜೆಪಿ ಮುಂದಾಗಿತ್ತು. ಕೇಂದ್ರದಲ್ಲಿ ಎನ್‌ಡಿಎ ಸರ್ಕಾರದ ಆರ್ಥಿಕ ನೀತಿಗಳಿಂದ ದೇಶವೇ ದಿವಾಳಿಯೇಳುತ್ತಿದೆ. ಅದೇ ನೀತಿಗಳನ್ನೇ ಪಾಚುತಪ್ಪದೇ ಜಾರಿಗೊಳಿಸಿದ ಕೃಷ್ಣರ ಕಾಂಗ್ರೆಸ್ ಸರ್ಕಾರವೂ ರಾಜ್ಯವನ್ನು ಅಧೋಗತಿಗೆ ಇಳಿಸಿರುವಾಗ ಈ ಯಾತ್ರೆಯಲ್ಲಿ ಜನರಿಗೇನು ಹೇಳೋದು ಎಂದು ಗೊಂದಲದಲ್ಲೇ ಯಾತ್ರೆ ಆರಂಭಿಸಿದ ಅನಂತಕುಮಾರ್, ಕೊನೆಗೆ ವೀರಪ್ಪನ್, ರೈತರ ಸಾವು, ಭ್ರಷ್ಟಾಚಾರ ಎಂಬಂತಹ ಸಂಗತಿಗಳ ಸುತ್ತ ಗಿರಕಿ ಹೊಡೆದದ್ದನ್ನು ಕರ್ನಾಟಕದ ಜನ ಕಂಡರು. ಈ ಯಾತ್ರೆಯಲ್ಲಿ ನಿಜವಾಗಿ ಸಂಘರ್ಷವೇ ಮಾಯವಾಗಿತ್ತು. ಜನರ ಬಿಡುವೆ ಅಂತಹ ಹೇಳಿಕೊಳ್ಳುವ ಸ್ಪಂದನ ಸಿಗದೇ ಇರುವಾಗ ಪತ್ರಿಕಾಗೋಷ್ಠಿಯ ಅಳಲಿಗೆ ಮಾತ್ರ ಸೀಮಿತಗೊಳಿಸಿ ಮನೆಗೆ ವಾಪಸಾಯಿತು ಬಿಜೆಪಿ ನಾಯಕ ಗಣ.

ನಡವಳಿಕೆಯನ್ನು ಬುಡಮೇಲು ಮಾಡದೇ ವಿಶ್ರಾಂತಿ ಪಡೆಯುವುದಿಲ್ಲವೆಂದು ಮತ್ತೆ ಜನಸಂಘರ್ಷ ಯಾತ್ರೆ - ಭಾಗ ಎರಡರ ಧಾರಾವಾಹಿ ಆರಂಭಿಸಲಾಗಿದೆ.

ಕಾಂಗ್ರೆಸ್ ವಿರುದ್ಧದ ಮತದಾರರನ್ನು ಸೆಳೆದುಕೊಳ್ಳುವುದು, ಮೂರನೇ ಸೆಕ್ಯುಲರ್ ಪರ್ಯಾಯದ ರಾಜಕೀಯ ಪ್ರಾಧಾನತೆ ಪಡೆಯುವ ಮೊದಲೇ ತಾವೇ ಪರ್ಯಾಯವೆಂದು ತೋರಿಸಲು ಹೆಣಗುತ್ತಿರುವುದೇ ಬಿಜೆಪಿಯ ಇಂದಿನ ಸ್ಥಿತಿ. 'ಹರಿಜನರ' ಕೇರಿಯಿಂದಲೇ ಯಾತ್ರೆ ಪ್ರತಿ ಊರಿನಲ್ಲಿ ಆರಂಭಗೊಳ್ಳಬೇಕೆಂದೇ ತೀರ್ಮಾನವಂತೆ. ಹರ್ಯಾಣದಲ್ಲಿ ಹಸುವಿನ ಚರ್ಮದ ವ್ಯಾಪಾರ ಮಾಡುತ್ತಿದ್ದ ದಲಿತರನ್ನು ಹಾಡುಹಗಲೇ ಹೊಡೆದು ಕೊಂದ ಇದೇ ಮನುವಾದಿಗಳ, ಬಿಜೆಪಿಯ ದಲಿತ ಕಾಳಜಿ ಎಂತಹದೆಂದು ಜನ ಪ್ರಶ್ನಿಸದೇ ಇರಬಹುದೇ? ಸಂಕಷ್ಟಗಳ ಹೊರೆ ಹೇರುತ್ತಿರುವ ಇವರನ್ನು ಸಂಕಷ್ಟ ಪರಿಹಾರದ ಬಗ್ಗೆ ಮಾತನಾಡುವುದರ ವಂಚನೆ ಪ್ರಶ್ನಿಸದೆ ಇರಬಾರದು ಜನ. ಈ ನಾಟಕ ಆದೆಷ್ಟು ದಿನ?

ಈ ವಾರ ಕರ್ನಾಟಕ
ಒಂದು ನೋಟ
ಎಸ್.ವೈ.ಗುರುಶಾಂತ್



ಜನಸಂಘರ್ಷ ಅಂದ್ರೆ ಜನರ ಜೊತೆ ಸಂಘರ್ಷ ಅಂತ ಅರ್ಥವಾ ಬುದ್ದಿ?

'ಏನಾದರೊಂದು ಮಾಡುತಿರೋ ತಮ್ಮ' ಎಂಬ ಕವಿವಾಣಿಯನ್ನು ತಮ್ಮ ಮನೋಭಿಲಾಷೆಗೆ ಬದಲಾಯಿಸಿಕೊಂಡು ಅದರಿಂದ ಕೀತರಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ ಚೆಡ್ಡಿ ಚತುರರು. ಬಜರಂಗದಳ, ವಿಹಿಂಪ ಗೂಂಡಾ ಪಡೆಗಳನ್ನು ಕರಾವಳಿ-ಕೊಡಗು, ಮೈಸೂರುಗಳಲ್ಲಿ ಹಾರಾಡಲು ಪ್ರೇರೇಪಿಸಿ, ಬಾಬಾಬುಡನ್ ಗಿರಿಯನ್ನು ಇನ್ನೊಂದು ಅಯೋಧ್ಯಾ ಮಾಡುವುದಾಗಿ ಬೆದರಿಕೆ ಒಡ್ಡಿದ್ದಾರೆ ಬಿಜೆಪಿಯ ಅಧ್ಯಕ್ಷ ಅನಂತಕುಮಾರ್. ಕರ್ನಾಟಕದಲ್ಲಿರುವ ಶಾಂತಿ, ಸಾಮರಸ್ಯ-ಸೌಹಾರ್ದತೆ ಮತ್ತು ನಾಗರಿಕ

ಅನಂತಕುಮಾರ್ - ಕರ್ನಾಟಕದ ಮೋದಿಯೇ?

'ಗುಜರಾತ್ ಕೇಸರಿಯಲ್ಲ ಭಾರತ ಕೇಸರಿ' ಹಿಂದುತ್ವದ ಸಂಕೇತ' ಪರುದಸ್ಸಿಯಲ್ಲಿ ಗುಜರಾತ್‌ನ ಕುಖ್ಯಾತ ಮುಖ್ಯಮಂತ್ರಿ ನರೇಂದ್ರಮೋದಿಯನ್ನು ಹೊಗಳುತ್ತಿದ್ದರು ಬಿಜೆಪಿ ಅಧ್ಯಕ್ಷ ಅನಂತಕುಮಾರ್. ವಿಮಾನ ನಿಲ್ದಾಣದಲ್ಲಿ ಮೈಸೂರು ಪೇಟ ಇಟ್ಟು (...) ಅವರು ಆಡಿದ ಮಾತಿನಲ್ಲಿ ಸ್ವಾಗತಿಸುವ ಸಂಭ್ರಮವಿರಲಿಲ್ಲ ಬದಲಾಗಿ ಅಮಾನವೀಯತೆ, ದುಷ್ಟತನ, ಕ್ರೌರ್ಯಗಳಿಗೆ ಸಹಮತವಿತ್ತು.

ಈಚೆಗೆ 'ಕರ್ನಾಟಕದ ಬಂಡವಾಳಗಾರರೇ ಗುಜರಾತ್‌ಗೆ ಬನ್ನಿ' ನಿಮಗೆ ಅಲ್ಲಿ ಸುರಕ್ಷಿತತೆ' ಇದೆಯೆಂದು ಬಂಡವಾಳಿಗರನ್ನು ಆಹ್ವಾನಿಸಲು ಬಂದಿದ್ದನಂತೆ ಮೋದಿ. ದುಡಿಯುವರ್ಗ, ಅಲ್ಪಸಂಖ್ಯಾತರು, ದಲಿತರು-ಮಹಿಳೆಯರು ಈ ಫ್ಯಾಸಿಸ್ಟ್ ಸಂತತಿಯ ಥಾಳಿಯಿಂದ ಕಂಗಾಲಾಗಿ ಜೀವ ಹಿಡಿದು ಕಾಲ ನೂಕುತ್ತಾ ಅತಂತ್ರ, ಭಯದಲ್ಲಿದ್ದಾರೆ ತಾನೇ, ಬಂಡವಾಳಗಾರರ ಲಗ್ಗಿಲ್ಲದ ಸುಲಿಗೆ, ಶೋಷಣೆ - ರಕ್ತ ಹೀರುವ ದಾಹ ತಣಿಯಬಹುದು! ಇದನ್ನೇ ಗುಜರಾತ್ ಸುರಕ್ಷಿತ ಎಂದು ಮೋದಿ ಹೇಳುತ್ತಿದುದು - ಆಗ ಗುಜರಾತ್‌ನ ಅಹ್ಮದಾಬಾದ್ ಮುಂತಾದೆಡೆ ಕೋಮು ದಳ್ಳುರಿ ಅಮಾಯಕರನ್ನು ಬಲಿತೆಗೆದುಕೊಳ್ಳುತ್ತಿತ್ತು. ಇಂತಹ ನರಹಂತಕನಿಗೆ, ಕೇಸರಿ ಪಟ್ಟ, ಮೈಸೂರು ಪೇಟಾ ತೊಡಿಸಿ ಜೈಕಾರ ಹಾಕುತ್ತಿರುವ ಚೆಡ್ಡಿ ಪಡೆಗಳಿಗೆ ಅದೆಷ್ಟು ಜನರ ಪ್ರಾಣ-ಆಸ್ತಿ ಹರಣ ಮಾಡುವ ಆಸೆ. ಈ ಹಿಂದಲ್ಲೇ ಅನಂತಕುಮಾರ್ ತಾನೊಬ್ಬ ಸಂಸತ್ ಸದಸ್ಯ, ಜವಾಬ್ದಾರಿಯುತ ಅಧ್ಯಕ್ಷ ಎಂಬ ಪರಿವೇ ಇಲ್ಲದೇ ಕೂಗಿದ್ದು ಬಾಬಾಬುಡನ್‌ಗಿರಿ ದಕ್ಷಿಣ ಅಯೋಧ್ಯೆಯನ್ನಾಗಿಸಲಾಗುವುದು ಎಂದು! [illegible] ಕರ್ನಾಟಕದ [illegible] ಮೋದಿ [illegible] ವರಹಾಕಿದ್ದು ಪ್ರಾಸಂಗಿಕವಲ್ಲ. ಇಂತಹ ಸವಾಲನ್ನು ಸವಾಲಾಗಿ ಸ್ವೀಕರಿಸಲು ರಾಜ್ಯದ ಪ್ರಜ್ಞಾವಂತರು ನಿರ್ಧರಿಸಿದ್ದಾರೆ.

ಅನಂತಕುಮಾರ್ ಹೇಳಿಕೆಗೆ ಖಂಡನೆ

"ಕರ್ನಾಟಕದ ಶಾಂತಿ, ನೆಮ್ಮದಿ ಕಲಕುವವರಿಗೆ ಸೂಕ್ತ ಪಾಠ ಕಲಿಸಬೇಕಾದೀತು" ಬುದ್ಧಿಜೀವಿಗಳ ಎಚ್ಚರ

ಭಾರತೀಯ ಜನತಾಪಕ್ಷದ ಕರ್ನಾಟಕ ಅಧ್ಯಕ್ಷರೂ, ಮಾಜಿ ಕೇಂದ್ರ ಸಚಿವರೂ ಆದ ಶ್ರೀ ಅನಂತಕುಮಾರ್ ಅವರು ಕಳೆದ ವಾರ ಬಾಬಾಬುಡನ್‌ಗಿರಿ ದತ್ತ ಪೀಠದ ವಿವಾದದ ಸಂದರ್ಭದಲ್ಲಿ ವ್ಯಕ್ತಪಡಿಸಿರುವ ಅಭಿಪ್ರಾಯ ತೀರಾ ಕಳವಳಕಾರಿಯಾಗಿದೆ. ಕೇಂದ್ರ ಸಚಿವರಾಗಿ ಅವರು ಕರ್ನಾಟಕಕ್ಕೆ ನೀಡಿರು ಕೊಡುಗೆಯನ್ನು ಅಥವಾ ಮುಂದೆ ಕರ್ನಾಟಕದ ಆರ್ಥಿಕ ಅಭಿವೃದ್ಧಿಗಾಗಿ ಅವರು ಇರಿಸಿಕೊಂಡಿರುವ ಯೋಜನೆಗಳನ್ನು ಜನತೆಯ ಮುಂದೆ ಮಂಡಿಸಿ, ಚುನಾವಣೆಯಲ್ಲಿ ಓಟು ಕೇಳುವುದು ಸೂಕ್ತವಾದ ವಿಚಾರ. ರಾಜ್ಯದಲ್ಲಿ ಆಡಳಿತದಲ್ಲಿರುವ ಮತ್ತು ಹಿಂದೆ ಆಡಳಿತ ನಡೆಸಿದವರ ಕೊರತೆಗಳನ್ನು ಟೀಕಿಸುವುದು ಅವರ ಹಕ್ಕು. ಹೀಗೆ ರಾಜಕೀಯ ಮತ್ತು ಆರ್ಥಿಕ ವಿಚಾರಗಳನ್ನು ಬಿಟ್ಟು ಭಾವನಾತ್ಮಕವಾಗಿ ಧಾರ್ಮಿಕ ವಿಚಾರಗಳನ್ನು ಜನತೆಯಲ್ಲಿ ಪ್ರಚೋದಿಸಿ ಚುನಾವಣೆ ಲಾಭ ಮಾಡಿಕೊಳ್ಳಲು ಅವರು ಮನಸ್ಸು ಮಾಡಿದರೆ ನಾಡಿನ ಪ್ರಜ್ಞಾವಂತರು ಎಚ್ಚರ ವಹಿಸಬೇಕಾಗುತ್ತದೆ.

ದತ್ತಪೀಠವನ್ನು ದಕ್ಷಿಣ ಅಯೋಧ್ಯೆಯನ್ನಾಗಿಸುವುದಾಗಿ ಹೇಳಿಕೊಂಡಿರುವ ಅನಂತ ಕುಮಾರ್ ಮಾತನ್ನು ಮತ್ತು ಕರ್ನಾಟಕವನ್ನು ಮತ್ತೊಂದು ಗುಜರಾತ್‌ನ್ನಾಗಿಸುವುದಾಗಿ ಹೇಳಿರುವ ವಿಶ್ವ ಹಿಂದು ಪರಿಷತ್ ನಾಯಕ ತೊಗಾಡಿಯಾ ಮಾತನ್ನು ನಾವು ತೀವ್ರವಾಗಿ ಖಂಡಿಸುತ್ತೇವೆ. ದತ್ತ ಪೀಠ ವಿವಾದಕ್ಕೆ ಕಾನೂನು ಮತ್ತು ಧಾರ್ಮಿಕ ನಂಬಿಕೆಗಳ ಚೌಕಟ್ಟಿನಲ್ಲೇ ನ್ಯಾಯವಾದ ಪರಿಹಾರ ಕಂಡು ಕೊಳ್ಳಬೇಕೆಂಬುದು ನಮ್ಮೆಲ್ಲರ ಆಶಯವಾಗಿದೆ. ಆದರೆ ಅದನ್ನು ರಾಜಕೀಯ ಲಾಭಕ್ಕಾಗಿ ಬಳಸಿಕೊಳ್ಳಲು ಯತ್ನಿಸಿದರೆ, ಕರ್ನಾಟಕದ ಲೇಖಕರು, ಕಲಾವಿದರು, ಬುದ್ಧಿಜೀವಿಗಳು ಒಟ್ಟಾಗಿ ನಿಂತು ಚುನಾವಣೆಯಲ್ಲಿ ಅಂತಹ ಮತಾಂಧರಿಗೆ ಪಾಠ ಕಲಿಸಲು ಜನತೆಗೆ ಕರೆ ನೀಡುವುದು ಅನಿವಾರ್ಯವಾಗುತ್ತದೆ. ಲೇಖಕರು, ಕಲಾವಿದರು, ಬುದ್ಧಿಜೀವಿಗಳು ಯಾವುದೇ ರಾಜಕೀಯ ಪಕ್ಷದ ಪರ ಅಥವಾ ವಿರೋಧವಾಗಿ ಚುನಾವಣೆ ಪ್ರಚಾರಕ್ಕೆ ತೊಡಗುವುದಿಲ್ಲವಾದರೂ, ಕರ್ನಾಟಕ ಶಾಂತಿ ಮತ್ತು ನೆಮ್ಮದಿಯನ್ನು ಕಲಕಲು ಯಾವುದೇ ರಾಜಕೀಯ ಪಕ್ಷ ಪ್ರಯತ್ನಿಸಿದರೆ, ಅವರಿಗೆ ಸೂಕ್ತ ಪಾಠ ಕಲಿಸಲು ಹಿಂಜರಿಯ ಬಾರದು. ಈ ಹಿನ್ನೆಲೆಯಲ್ಲಿ ಶ್ರೀ ಅನಂತಕುಮಾರ್ ಅವರು ಮುಂದೆ ದತ್ತ ಪೀಠವೂ ಸೇರಿದಂತೆ ಯಾವುದೇ ಧಾರ್ಮಿಕ ಕೇಂದ್ರಗಳನ್ನು ಹಿಂಸೆಯ ತಾಣವನ್ನಾಗಿ ಮಾರ್ಪಡಿಸುವ ಹೇಳಿಕೆಯನ್ನು ನೀಡಬಾರದೆಂದು ನಾವು ಒತ್ತಾಯಿಸುತ್ತೇವೆ. ಅಗತ್ಯ ಬಿದ್ದರೆ ಜನತೆಯ ಮುಂದೆ ಬಂದು ಇಂತಹ ಪ್ರಯತ್ನಗಳ ಅನಾಹುತಕಾರಿ ಪರಿಣಾಮಗಳ ಬಗೆಗೆ ನಾವು ಪ್ರಚಾರಕ್ಕೆ ಇಳಿಯಲೂ ಸಿದ್ಧವೆಂದು ಸ್ಪಷ್ಟಪಡಿಸುತ್ತೇವೆ.

ಸಹಿ ಹಾಕಿದ ಪ್ರಮುಖರು : ಗಿರೀಶ್ ಕಾರ್ನಾಡ್, ಜಿ.ಎಸ್.ಶಿವರುದ್ರಪ್ಪ, ಕಿ.ರಂ. ನಾಗರಾಜ್, ವ್ಯಾಸರಾಯ ಬಲ್ಲಾಳ, ಜಿ.ಕೆ.ಗೋವಿಂದರಾವ್, ಡಾ.ಕೆ.ಮರುಳುಸಿದ್ದಪ್ಪ, ಜಯಂತ ಕಾಯ್ಕಿಣಿ, ಡಾ. ವಿಜಯ, ಡಾ.ಸಿದ್ದಲಿಂಗಯ್ಯ, ಪ್ರೊ. ಚಂಪಾ ಮತ್ತಿತರರು.



ಪತ್ರಿಕಾಗೋಷ್ಠಿಯಲ್ಲಿ ಗಿರೀಶ್ ಕಾರ್ನಾಡ್, ಕವಿ ಶಿವರುದ್ರಪ್ಪನವರು

ಡಿಸೆಂಬರ್ 2 ಧರಣಿ ಸತ್ಯಾಗ್ರಹ

'ಬಾಬಾಬುಡನ್‌ಗಿರಿಯಲ್ಲಿ ಸೌಹಾರ್ದ ಪರಂಪರೆ ರಕ್ಷಿಸಿ, ಹಿಂದೆಂದೂ ಇಲ್ಲದಿರುವ ದತ್ತಜಯಂತಿ ನಿರ್ಬಂಧಿಸಿ' ಎಂದು ಆಗ್ರಹಿಸಿ ಡಿಸೆಂಬರ್ 2 ರಂದು ರಾಜ್ಯಾದ್ಯಂತ ಜಿಲ್ಲಾ ಕೇಂದ್ರಗಳಲ್ಲಿ ಸಿಪಿಐ(ಎಂ) ಧರಣಿ ಸತ್ಯಾಗ್ರಹ. ಇದರಲ್ಲಿ ಇತರ ಪ್ರಗತಿಪರ ಸಂಘಟನೆಗಳು ಮತ್ತು ಪಕ್ಷಗಳು ಭಾಗವಹಿಸಲಿವೆ.

ಐಕ್ಯರಂಗ
4 ದಶಗಳ ಹಿಂದೆ

ನಿಜವಾದ ಕಮ್ಯುನಿಸ್ಟರೆಂದರೆ ....

ಕಮ್ಯುನಿಸ್ಟ್ ಪಾರ್ಟಿ ಹೇಡಿಗಳ ಪಾರ್ಟಿಯಲ್ಲ, ಧೀರ ಯೋಧರ ಪಾರ್ಟಿ. ಕೆಂಬಾವುಟಕ್ಕಾಗಿ ಜೀವನವನ್ನೇ ಬಲಿಗೊಡಲು ಸಿದ್ಧರಿದ್ದವರ ಪಾರ್ಟಿಯಿದು ಎಂದು ತಾ. 18 ರಿಂದ 20ರ ವರೆಗೆ ಮಂಗಳೂರಲ್ಲಿ ನಡೆದ ಭಾರತ ಕಮ್ಯುನಿಸ್ಟ್ ಪಾರ್ಟಿಯ ಕರ್ನಾಟಕ ಪ್ರಾಂತಸಮ್ಮೇಳನದ ಸಂಬಂಧವಾಗಿ ಮಂಗಳೂರಿನ ನೆಹರೂ ಮೈದಾನಿನಲ್ಲಿ ಸಮಾವೇಶಗೊಂಡ ಬೃಹತ್ ಸಭೆಯನ್ನುದ್ದೇಶಿಸಿ ಭಾಷಣ ಮಾಡುತ್ತಾ ಕರ್ನಾಟಕ ಪ್ರಾಂತ ಮಂಡಳಿಯ ಪ್ರಧಾನ ಕಾರ್ಯದರ್ಶಿ ಕಾಂ। ಎನ್. ಎಲ್. ಉಪಾಧ್ಯಾಯರು ಘೋಷಿಸಿ, ಕಯ್ಯೂರು, ವಯಲಾರ್ ಪುನಪ್ರವಯಲಾರ್ ಮೊದಲಾದೆಡೆಗಳಲ್ಲಿ ಕಮ್ಯುನಿಸ್ಟ್ ತತ್ವಕ್ಕಾಗಿ ಜನತೆಯ ಹೋರಾಟಗಳಲ್ಲಿ ಜೀವದಾನವಿತ್ತ ಹುತಾತ್ಮರಿಗೆ ಗೌರವ ಸಲ್ಲಿಸಿದಾಗ 'ಇಂಕ್ವಿಲಾಬ್ ಝಿಂದಾಬಾದ್' ಎಂಬ ಘೋಷಣೆಗಳು ಮೊಳಗಿದುವು.

★ ★ ★

ಕಮ್ಯುನಿಸ್ಟ್ ಪಾರ್ಟಿ ಕರ್ನಾಟಕ ಪ್ರಾಂತ ಸಮ್ಮೇಳನ ಕಲ್ಕತ್ತಾ ಅಧಿವೇಶಕ್ಕೆ ಪ್ರತಿನಿಧಿಗಳನ್ನು ಕಳುಹಿಸಲು ತೀರ್ಮಾನ

ದಿನಾಂಕ 18 ರಂದು ಪ್ರಾತಃಕಾಲ 8 ಘಂಟೆಗೆ ಸಮ್ಮೇಳನ ಶಿಬಿರವಾದ ಹುತಾತ್ಮ ಎಂ.ಎಸ್. ಆಡ್ಯಂತಾಯ ನಗರಿಯಲ್ಲಿ ಕಾ। ಎನ್. ಉಗ್ರಪ್ಪನವರು ಪಾರ್ಟಿ ಧ್ವಜಾರೋಹಣ ಮಾಡುವುದರೊಂದಿಗೆ ಸಮ್ಮೇಳನದ ಕಾರ್ಯಕಲಾಪಗಳು ಆರಂಭವಾದವು.

ಕಾಂಗ್ರೆಸನ್ನು ಅಧಿಕಾರದಿಂದ ಕೆಳಗಿಳಿಸುವುದೇ ಮುಖ್ಯ ಕರ್ತವ್ಯ. ಕಾಂಗ್ರೆಸ್‌ನೊಂದಿಗೆ ವರ್ಗ ಸಹಕಾರ ಪ್ರತಿಪಾದಿಸುವ ಪರಿಷ್ಕರಣಾವಾದಿ ಧೋರಣೆಗೆ ಕಮ್ಯುನಿಸ್ಟ್ ಪಕ್ಷದ ತಿರಸ್ಕಾರ

★ ★ ★

ಮೂರು ಪ್ರಮುಖ ಅಂತರ್ರಾಷ್ಟ್ರೀಯ ಘಟನೆಗಳು

ರಶ್ಯಾದ ಆಂತರಿಕ ಘಟನೆಗಳು, ಚೀನಾದಿಂದ ಅಣುಬಾಂಬು ಸ್ಫೋಟ, ಬ್ರಿಟನಿನ ಲೇಬರ್ ಪಕ್ಷದ ವಿಜಯ.

★ ★ ★

ತೀರ್ಥಹಳ್ಳಿ ಜಮಿನ್ದಾರರ ಅತ್ಯಾಚಾರಕ್ಕೆ ರೈತನೊಬ್ಬನ ಬಲಿಯೇ? ನ್ಯಾಯಕ್ಕಾಗಿ ಪೋಲೀಸು ಠಾಣೆಯೆದುರು ಕಮ್ಯುನಿಸ್ಟ್ ಪಾರ್ಟಿ ಮತ್ತು ರೈತ ಸಂಘದವರ ಸತ್ಯಾಗ್ರಹ

ತೀರ್ಥಹಳ್ಳಿಯ ಶ್ರೀಮಂತ ಜಮಿನುದಾರರೊಬ್ಬರು ಬಡ ರೈತನೊಬ್ಬನ ಮೇಲೆ ನಡೆಸಿದ ಅತ್ಯಾಚಾರದ ಘಟನೆಯನ್ನು ಕೇಳಿದರೆ ಈ ರಾಜ್ಯದಲ್ಲಿ ಬಡ ರೈತ ಕಾರ್ಮಿಕರ ಜೀವ, ಸೊತ್ತುಗಳಿಗೆ ಯಾವುದೇ ರೀತಿಯ ಭದ್ರತೆ, ಸುರಕ್ಷಿತತೆ ಇದೆಯೇ ಎಂದು ಕೇಳುವಂತಾಗಿದೆ.

★

ಸಿಂಗಟಾಲೂರು ನೀರಾವರಿ ಯೋಜನೆ - ಸಿಪಿಐ(ಎಂ) ನಿಲುವು

ತುಂಗಭದ್ರ ಜಲಾಶಯದ ನೀರನ್ನು ಬಳಸಿ ಸಿಂಗಟಾಲೂರು ಏತನೀರಾವರಿ ಯೋಜನೆಯನ್ನು ರೂಪಿಸಲಾಗುವುದೆಂದು ರಾಜ್ಯ ಸರ್ಕಾರ ತೀರ್ಮಾನಿಸಿರುವ ಹಿನ್ನೆಲೆಯಲ್ಲಿ ರಾಯಚೂರು, ಬಳ್ಳಾರಿ, ಜಿಲ್ಲೆಗಳ ತುಂಗಭದ್ರ ಅಚ್ಚುಕಟ್ಟು ಪ್ರದೇಶದ ರೈತರು ಆತಂಕಕ್ಕೆ ಒಳಗಾಗಿ ಹೋರಾಟ ಸಮಿತಿಗಳನ್ನೆ ರಚಿಸಿಕೊಂಡು, ಬಂದ್, ಪ್ರತಿಭಟನೆಗಳಿಗೆ ಮುಂದಾಗಿದ್ದಾರೆ. ಈ ವಿಷಯದ ಬಗ್ಗೆ ಚರ್ಚಿಸಿದ ಸಿಪಿಐ(ಎಂ) ಈ ನಿಲುವನ್ನು ತೆಗೆದುಕೊಂಡಿದೆ. "ಈಗಾಗಲೇ ತುಂಗಭದ್ರಾ ಜಲಾಶಯದ ನೀರಿನ ಮೇಲೆ ಅವಲಂಬಿತರಾಗಿರುವ ತುಂಗಭದ್ರಾ ಅಚ್ಚುಕಟ್ಟು ಪ್ರದೇಶದ ರೈತರಿಗೆ, ಅವರ ನೀರಾವರಿ ಹಕ್ಕಿಗೆ ಯಾವುದೇ ತೊಂದರೆಯಾಗದಂತೆ, ನೀರು ಬಳಕೆ ಕುಗ್ಗದಂತೆ ಕ್ರಮ ವಹಿಸುತ್ತಾ ಸಿಂಗಟಾ ಲೂರು ಪ್ರದೇಶದ ನೀರಾವರಿ ಯೋಜನೆಗಳನ್ನು ಜಾರಿಗೊಳಿಸಬೇಕು. ತುಂಗಭದ್ರಾ ಜಲಾಶಯದಲ್ಲಿ ಈಗಾಗಲೇ ಸಾಕಷ್ಟು ಹೂಳು ತುಂಬಿರುವುದರಿಂದ ಹೊರ ಹರಿದುಹೋಗುತ್ತಿರುವ ನೀರನ್ನು ತುಂಗಭದ್ರಾ ಅಚ್ಚುಕಟ್ಟು ರೈತರೇ ಬಳಸಲು ಬೇಕಾದ ಯೋಜನೆಗಳನ್ನು ರೂಪಿಸಿ ತಕ್ಷಣ ಜಾರಿಗೊಳಿಸಬೇಕು. ಸಿಂಗಟಾಲೂರು ಪ್ರದೇಶವು ಅತ್ಯಂತ ಹಿಂದುಳಿದ ಪ್ರದೇಶವಾಗಿದ್ದು ಆ ಪ್ರದೇಶದ ಅಭಿವೃದ್ಧಿಯೂ ಮುಖ್ಯವಾಗಿದೆ. ಆದ್ದರಿಂದ ಅದರ ಅಭಿವೃದ್ಧಿಗೆ ನೀರಾವರಿ ಯೋಜನೆಗಳನ್ನು ರೂಪಿಸುವಾಗ ಈಗಾಗಲೇ ಅವಲಂಬಿತ ತುಂಗಭದ್ರಾ ಅಚ್ಚುಕಟ್ಟಿನ ರೈತರಿಗೆ ನೀರನ್ನು ಖಾತ್ರಿಗೊಳಿಸಬೇಕು ಮತ್ತು ಈ ಯೋಜನೆಯ ಬಗ್ಗೆ ಆತಂಕಕ್ಕೀಡಾಗಿರುವ ತುಂಗಭದ್ರಾ ಅಚ್ಚುಕಟ್ಟಿನ ರೈತರಿಗೆ ಸರ್ಕಾರವು ಸರಿಯಾಗಿ ಮಾಹಿತಿ ನೀಡಿ, ತಿಳುವಳಿಕೆ ಮೂಡಿಸಿ ಮುಂದಿನ ಹೆಜ್ಜೆಗಳನ್ನು ಇಡಬೇಕು. ಆ ಭಾಗದ ಜನರು - ಜನಪ್ರತಿನಿಧಿಗಳು ಯಾವುದೇ ರೀತಿಯ ಭಾವೋದ್ವೇಗಕ್ಕೆ ಒಳಗಾಗಬಾರದು ಶಾಂತಿ, ಸೌಹಾರ್ದತೆ ಕಾಯಬೇಕು" ಎಂದು ಸಿಪಿಐ(ಎಂ) ಮನವಿ ಮಾಡಿದೆ.

ಗ್ರಾಮ ಪಂಚಾಯತ ನೌಕರರ ಸಮಾವೇಶ

ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರ ತಾಲ್ಲೂ... ಗ್ರಾಮ ಪಂಚಾಯತ್ ನೌಕರರ ಸಮಾವೇಶ... ತಾಲ್ಲೂಕು ಪಂಚಾಯತ ಸಭಾಭವನದಲ್ಲಿ ಇತ್ತೀ... ನೆರವೇರಿತು.

ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿ... ಜಿಲ್ಲಾ ಸಿಐಟಿಯು ಅಧ್ಯಕ್ಷರಾದ ಟಿ.ಎಸ... ನಾಯ್ಕರವರು ಗ್ರಾಮ ಪಂಚಾಯತ ನೌಕರ... ಸಂಘಟಿತರಾಗಿ ಹೋರಾಟ ನಡೆಸಬೇಕಾಗಿ... ಜೂನ್ 2,3 ರಂದು ಬೆಂಗಳೂರಿನಲ್ಲಿ ಪಂಚಾಯ... ನೌಕರರು ಹೋರಾಟ ನಡೆಸಿದ್ದ ಫಲವಾಗಿ ಸ್ಥ... ಮಟ್ಟಿನ ಬೇಡಿಕೆಯನ್ನು ಪಡೆಯಲು ಸಾಧ್ಯವಾಗಿ... ಸಿಐಟಿಯು ಸಂಘಟನೆ ನಿಮ್ಮ ಜೊತೆಗಿದೆ ಎಂದರು...

ಮುಖ್ಯ ಅತಿಥಿಗಳಾದ ಜಿಲ್ಲಾ ಅಂಗನವಾ... ಕಾರ್ಯದರ್ಶಿ ಯಮುನಾ ಗಾಂವ್ಕರ್ ಮಾತನಾ... ಇಂದಿನ ಪರಿಸ್ಥಿತಿಯಲ್ಲಿ ಆದೇಶ ಮಾಡುವುದಕ್ಕಾ... ಹೋರಾಟ. ಆದೇಶದ ಜಾರಿಗಾಗಿ ಹೋರಾ... ಪ್ರತಿಯೊಂದನ್ನು ಹೋರಾಟ, ಚಳವಳಿ... ಮೂಲಕವೇ ಪಡೆಯಬೇಕಾಗಿದೆ ಎಂದರು.

ಮುಖ್ಯ ಅತಿಥಿಗಳಾಗಿ ತಾ.ಪಂ. ಕಾಯ... ನಿರ್ವಾಹಕ ಅಧಿಕಾರಿ ಜಿ.ಕುಮಾರಸ್ವಾಮಿ... ತಾಲ್ಲೂಕು ರಾಜ್ಯ ಸರ್ಕಾರಿ ನೌಕರರ ಸಂಘ... ಅಧ್ಯಕ್ಷ ಸಂತೋಷ ಕೊಳಗೇರಿ ಕಾರ್ಯದ... ಎಫ್‌ಡಿ ಎಕ್ಕುಂಡಿ, ಜಿಲ್ಲಾ ಗ್ರಾಮ ಪಂಚಾಯ... ನೌಕರರ ಸಂಘದ ಅಧ್ಯಕ್ಷ ಆರ್.ಎಂ.ಮು... ಭಾಗವಹಿಸಿ ಮಾತನಾಡಿದರು. ಸಮಾವೇ... ಅಧ್ಯಕ್ಷತೆ ವಹಿಸಿದ್ದ ತಾ. ಪಂಚಾಯತ ಅ... ಅಶೋಕ ಚನ್ನೇಕರ ಮಾತನಾಡಿ ತಾಲ್ಲೂ... ಮಟ್ಟದಲ್ಲಿ ಬಗೆಹರಿಸಬಹುದಾದ ಸಮ... ಬಗೆಹರಿಸುತ್ತೇವೆಂದು ಸಮಾವೇಶಕ್ಕೆ ಶ... ಹಾರೈಸಿದರು. ತಾಲ್ಲೂಕು ಗ್ರಾ. ಪಂ. ನೌಕ... ಸಂಘದ ಅಧ್ಯಕ್ಷ ಗಣಪತಿ ಸ್ವಾಗತಿಸಿ ಮಾತನಾ... ಗ್ರಾ.ಪಂ. ನೌಕರರ ಸಮಸ್ಯೆಗಳನ್ನು ವಿವರಿಸಿದ...

ಉಡುಪಿ ಜಿಲ್ಲಾ ಹಂಚು ಕಾರ್ಮಿಕರ ಸಂಘದ ವಾರ್ಷಿಕ ಮಹಾಸಭೆ

ಅಕ್ಟೋಬರ್ 5 ರಂದು ಉಡುಪಿ ಜಿಲ್ಲಾ ಹಂಚು ಕಾರ್ಮಿಕರ ಸಂಘ (ಸಿ.ಐ.ಟಿ.ಯು) ದ ಕುಂದಾಪುರ 3ನೇ ವಾರ್ಷಿಕ ಮಹಾಸಭೆಯು ವಿ.ನರಸಿಂಹನವರ ಅಧ್ಯಕ್ಷತೆಯಲ್ಲಿ ನಡೆಯಿತು. ಎಚ್.ನರಸಿಂಹನವರು ಸ್ವಾಗತ ಭಾಷಣ ಮಾಡಿ ವಾರ್ಷಿಕ ಮಹಾಸಭೆಯ ಮಹತ್ವ ವಿವರಿಸಿದರು. ಕಳೆದ ಒಂದು ವರ್ಷದ ಅವಧಿಯ ಸಂಘದ ಚಟುವಟಿಕೆ ಮತ್ತು ಹೋರಾಟಗಳ ವರದಿಯನ್ನು ಸಂಘದ ಪ್ರಧಾನ ಕಾರ್ಯದರ್ಶಿ ಕೆ.ಶಂಕರ್‌ರವರು ಮಂಡಿಸಿದರು ಹಾಗೂ ಕೋಶಾಧಿಕಾರಿಯಾದ ಹೆಚ್.ನರಸಿಂಹನವರು ಲೆಕ್ಕಪತ್ರದ ವರದಿ ಮಂಡಿಸಿದರು. ಎರಡು ವರದಿಗಳ ಮೇಲೆ ಚರ್ಚೆಯಲ್ಲಿ 11 ಪ್ರತಿನಿಧಿಗಳು ಭಾಗವಹಿಸಿದ್ದರು.

ಮುಖ್ಯ ಅತಿಥಿಯಾಗಿ ಸಿ.ಐ.ಟಿ.ಯು.ವಿನ ರಾಜ್ಯ ಅಧ್ಯಕ್ಷರಾದ ಬಿ.ಮಾಧವರವರು ಮಾತನಾಡಿದರು. ಹಂಚು ಕಾರ್ಮಿಕರ ಸಮಸ್ಯೆಗಳು ಹಾಗೂ ಸರ್ಕಾರದ ನೀತಿಗಳನ್ನು ವಿವರಿಸಿದ ಅವರು ದೇಶವ್ಯಾಪಿ ದುಡಿಯುವ ಜನತೆಯ ಐಕ್ಯ ಹೋರಾಟಗಳು ಬೆಳೆದು ಬಂದಾಗ ಬದಲಿ ವ್ಯವಸ್ಥೆ ಕಂಡುಕೊಳ್ಳಲು ಸಾಧ್ಯವಾದೀತು. ಅದಕ್ಕಾಗಿ ಹಂಚು ಕಾರ್ಮಿಕರು ಸಂಘಟನೆಯನ್ನು ಬಲಿಷ್ಠಗೊಳಿಸಬೇಕೆಂದು ಕರೆ ನೀಡಿದರು. ರೈತ ಸಂಘದ ಉಡುಪಿ ಜಿಲ್ಲಾ ಸಮಿತಿ ಕಾರ್ಯದರ್ಶಿಯವರಾದ ಯು.ದಾಸ ಭಂಡಾರಿ, ಬಿ.ಎಸ್.ಎನ್.ಎಲ್ ಜಿಲ್ಲಾ ಮುಖಂಡರಾದ ಪಿ.ಮುಕುಂದನ್, ಸಿಐಟಿಯುವಿ ನ ಜಿಲ್ಲಾ ಕಾರ್ಯದರ್ಶಿಯವರಾದ ಪಿ.ವಿಶ್ವನಾಥ್ ರೈಯವರು ಮಹಾಸಭೆಗೆ ಶುಭಕೋರಿ ಮಾತನಾಡಿದರು.

ಸ್ವಂತ ಕಟ್ಟಡ ನಿರ್ಮಾಣದತ್ತ

ಸಂಘದ ಸ್ವಂತ ಕಛೇರಿಯ ಕಟ್ಟಡ ನಿರ್ಮಾಣಕ್ಕಾಗಿ ನಿಧಿ ಸಂಗ್ರಹಿಸಲು ನಿರ್ಣಯಿಸಲಾಯಿತು. ಇ.ಎಸ್.ಐ. ಸೌಲಭ್ಯ ಕಂಡ್ಲೂರು, ಕಾವ್ರಾಡಿ ಪ್ರದೇಶದ ಕಾರ್ಮಿಕರಿಗೆ ಮತ್ತು ಗಂಗೊಳ್ಳಿ ಪ್ರದೇಶದ ಕಾರ್ಮಿಕರಿಗೆ ಅನ್ವಯವಾಗುವಂತೆ ತುರ್ತು ಕ್ರಮ ಕೈಗೊಳ್ಳಲು ಇ.ಎಸ್.ಐ ಯ ಸಂಬಂಧಪಟ್ಟ ಅಧಿಕಾರಿಗಳನ್ನು ಮತ್ತು ಸರಕಾರವನ್ನು ಒತ್ತಾಯಿಸುವ ನಿರ್ಣಯ ಕೈಗೊಳ್ಳಲಾಯಿತು.

ಸಭೆಯ ಅಧ್ಯಕ್ಷರಾದ ವಿ.ನರಸಿಂಹನವರು ಮಾತನಾಡಿ ಸಂಘಟನೆಯನ್ನು ಇನ್ನಷ್ಟು ಬಲಿಷ್ಠಗೊಳಿಸಿ ಹಂಚು ಕಾರ್ಮಿಕರು ಉದ್ಯೋಗವನ್ನು ಮತ್ತು ಕಾಯಿದೆಬದ್ಧ ಸೌಲಭ್ಯವನ್ನು ಹಾಗೂ ಕೈಗಾರಿಕೆಯನ್ನು ಉಳಿಸಿ ರಕ್ಷಿಸಲು ಶ್ರಮಿಸಬೇಕೆಂದು ಹೇಳಿದರು.

ಮುತ್ತಯ್ಯ ಕನ್ಯಾನರವರು ಧನ್ಯವಾದ ಸಲ್ಲಿಸಿದರು.

ಇಲಾಖೆಗಳನ್ನು ಮುಚ್ಚಿದ ಸರ್ಕಾರ : ಶಿಕ್ಷಣ-ಆರೋಗ್ಯಕ್ಕೆ ಸಂಚಕಾರ

ಈ ವಾರ ಒಂದು ನೋಟ

ಆಡಳಿತ ನೀಡುವ ಕೃಷ್ಣ ಸರ್ಕಾರ ಈ ವಾರದಲ್ಲಿ ಕಾಲೇಜು ಶಿಕ್ಷಣ ಇಲಾಖೆ, ವೈದ್ಯಕೀಯ ತಾಂತ್ರಿಕ ಕಾಲೇಜು ಇಲಾಖೆಗಳನ್ನು ಮುಚ್ಚಲು ಸಂಪುಟ ಸಭೆಯಲ್ಲಿ ನಿರ್ಧರಿಸಿದೆ. ಈಗಾಗಲೇ ವಿಶ್ವವಿದ್ಯಾಲಯಗಳೇ ಇರುವಾಗ ಕಾಲೇಜು ಶಿಕ್ಷಣ ಇಲಾಖೆ ಯಾಕೆ? ರಾಜೀವ್ ಗಾಂಧಿ ವಿ.ವಿ. ಇರುವಾಗ ವೈದ್ಯಕೀಯ ಶಿಕ್ಷಣ ತಾಂತ್ರಿಕ ಇಲಾಖೆ ಯಾಕೆ ಎಂದು ಪ್ರಶ್ನಿಸಿರುವ ಸರ್ಕಾರ ಈ 'ಡೂಪ್ಲಿಕೇಷನ್' ತಡೆಯಬೇಕು ಎನ್ನುತ್ತಿದೆ. ಇದು ಆಕರ್ಷಕ ವಾದ, ಎಂತಹವರೂ ಒಪ್ಪಬಹುದು. ಆದರೆ ಹೇಳದಿರುವ ಅಂಶವೆಂದರೆ ವಿಶ್ವಬ್ಯಾಂಕ್ - ಐಎಂಎಫ್ ನಿರ್ದೇಶನಗಳಂತೆ ಒಪ್ಪಂದ ಸರ್ಕಾರವನ್ನು ಕಿರುದುಗೊಳಿಸುವ , ಉದ್ಯೋಗ ಹರಣದ ಶರತ್ತಿನ ಯೋಜನೆಯಿಂದಾಗಿಯೇ ಹೀಗೆಲ್ಲಾ ಮಾಡಲಾಗುತ್ತಿದೆ ಎಂಬುದು. ಸರ್ಕಾರ ಏನೇ ಹೇಳಿಕೊಳ್ಳಲಿ ಇದಕ್ಕೆ ಸಂಬಂಧಿಸಿದ ನೌಕರರ ಸಂಘ ಸಂಸ್ಥೆಗಳೊಂದಿಗೆ, ಜನಪ್ರತಿನಿಧಿ ಸಂಘಟನೆಗಳೊಂದಿಗೆ ಚರ್ಚಿಸಲಾರದೆ ಏಕಪಕ್ಷೀಯವಾಗಿ ನಿರ್ಧರಿಸಿದೆ. ಇದೇ ಸಂದರ್ಭದಲ್ಲಿ ಪದವಿಪೂರ್ವ ಶಿಕ್ಷಣದ ಶುಲ್ಕಗಳನ್ನು ಹೆಚ್ಚಿಸಲು ನಿರ್ಧರಿಸಿರುವುದು ಆಘಾತಕಾರಿ. ಪ್ರತಿವರುಷವೂ ಶುಲ್ಕಗಳನ್ನು ಹೆಚ್ಚಿಸುತ್ತಾ ಸಾಗಿರುವ ಸರ್ಕಾರ ಪಿಯುಸಿ ಶಿಕ್ಷಣವನ್ನು ಜನಸಾಮಾನ್ಯರಿಂದ ಕಸಿಯುತ್ತಿದೆ. ಹಾಗೆ ಆಸ್ಪತ್ರೆಯ ಶುಲ್ಕಗಳನ್ನು ಪ್ರತೀ ಮೂರು ವರ್ಷಗಳಿಗೊಮ್ಮೆ ಹೆಚ್ಚಿಸಲು ನಿರ್ಧರಿಸಿದೆ.

ಈಗಾಗಲೇ ಅನೇಕ ಮೂಲ ಸೌಲಭ್ಯಗಳು, ಪ್ರಯೋಗಾಲಯ, ಸಂಶೋಧನೆಗಳಿಲ್ಲದೇ ಕೊರಗುತ್ತಿರುವ, ಪ್ರತಿಯೊಂದಕ್ಕೂ ಹೊರಗಡೆ... ಖಾಸಗಿ ಸಂಸ್ಥೆಗಳಲ್ಲಿಯೇ ಹಣ ತೆ... ತಪಾಸಣೆಗೊಳಗಾಗಬೇಕಾದ ಸಂದರ್ಭವಿರುವ... ಇಂತಹ ಹೆಚ್ಚಳ ಜನಸಾಮಾನ್ಯರ ಆರೋಗ್ಯ... ಅಪಹರಣ. ರೋಗಿಗಳ ರಕ್ತ ಹೀರ... ಅಮಾನವೀಯತೆ. ಇವೆಲ್ಲ ವಿದೇಶಿ ಹಣಕಾ... ಸಂಸ್ಥೆಗಳ ಶರತ್ತುಗಳ ಜಾರಿಯ ಭಾಗ. ಧಾಳಿಯನ್ನು ಒಪ್ಪಲು ಸಾಧ್ಯವಿಲ್ಲ. ಸರ್ಕಾರ ... ಹೆಚ್ಚಳ ಹಿಂತೆಗೆಯಬೇಕು.

ಬಿಜೆಪಿಯ ಗೂಂಡಾಗಳನ್ನು ಬಂಧಿಸಲು ಆಗ್ರಹ



ಆನೇಕಲ್‌ನಲ್ಲಿ ಸಿಪಿಐ(ಎಂ)ನ ಶಿಬಿರದ ಬಳಿಕ ನವೆಂಬರ್ 9 ರಂದು ಸಂಜೆ ನಡೆದ ಬಹಿರಂಗ ಸಭೆಯಲ್ಲಿ ದಾಂಧಲೆ ನಡೆಸಿ, ಹಲ್ಲೆ ನಡೆಸಿದ ಬಿಜೆಪಿ ಗೂಂಡಾಗಳನ್ನು ಬಂಧಿಸುವಂತೆ ಒತ್ತಾಯಿಸಿ ಎಸ್.ಪಿ. ಕಛೇರಿಯೆದುರು ಸಿಪಿಐ(ಎಂ) ಪ್ರತಿಭಟನೆ

ಷಡ್ಯಂತ್ರದ ಶಿಶು

ಬಿಜೆಪಿಯ ಶಾಸಕ ಆಯನೂರು ಮಂಜುನಾಥ್ ಕೊನೆಗೂ ಬಿಜೆಪಿಯ ಗರ್ಭಗುಡಿಯ ರಾಜಕೀಯ, ತಾರತಮ್ಯದ ಚದುರಂಗದಾಟ, ದಬ್ಬಾಳಿಕೆ ವಿರೋಧಿಸಿ ಜನತಾ ಪಕ್ಷಕ್ಕೆ ಸೇರಿದ್ದಾರೆ. 'ಮಲ್ಯಾ'ಧಾರಿತ ಪಕ್ಷಕ್ಕೆ ಇಂತಹ 'ಬೀರು'ಮಟ್ಟದ ಕಾರ್ಯಕರ್ತರ ಅಗತ್ಯವಂತೂ ಇತ್ತು ಎಂದು ತರಾತುರಿಯಲ್ಲಿ ಸ್ವಾಗತಿಸಿ ರಾಜ್ಯದ ಅಧ್ಯಕ್ಷರನ್ನಾಗಿಯೂ ನೇಮಕ ಮಾಡಲಾಗಿದೆ. ಪದಗ್ರಹಣವಾದ ಕೂಡಲೇ ಎಲ್ಲರ ಮೇಲೆ ಸವಾಲು ಹಾಕಿ, ಶಿವಮೊಗ್ಗಕ್ಕೆ ಬರುವಂತೆ ಆಹ್ವಾನಿಸಿದ್ದಾರೆ ಮಂಜುನಾಥರು. ಆ ಈ ಪಾರ್ಟಿಕದ ತಟ್ಟಿ ಈ ಪಾರ್ಟಿ ಸೇರಿದ್ದು ದುಡ್ಡಿನ ಆಶೆಗಾಗಿ ಅಲ್ಲ ಎಂದೂ ಸ್ಪಷ್ಟೀಕರಣ ನೀಡಿದ್ದಾರೆ. ಆದರೆ ಈ ಪಾರ್ಟಿ ಹೆಗಡೆ-ಕೃಷ್ಣ-ಅನಂತಕುಮಾರ್ ಷಡ್ಯಂತ್ರದ ಶಿಶು ಎಂಬುದರ ಅರಿವು ಮಂಜುನಾಥರಿಗಿದೆಯೋ? ಇದ್ದರೂ ಅದರ ಗೊಡವೆ ಈಗ್ಯಾಕೆ ಎನ್ನುತ್ತಾರಾ?

ವಿಲೀನ

ನವೆಂಬರ್ 12 ರಂದು ಹೊಸಪೇಟೆಯಲ್ಲಿ ಜೆಡಿ(ಎಸ್) ನಲ್ಲಿ ಅ.ಭಾ.ಪ್ರ.ಜನತಾದಳದ ನಾಯಕರು, ಶಾಸಕರು ಮಾಜಿ ಸಚಿವ ಎಂ.ಪಿ.ಪ್ರಕಾಶ್‌ರ ನೇತೃತ್ವದಲ್ಲಿ ವಿಲೀನಗೊಂಡ ಬಹಿರಂಗ ರ್‍ಯಾಲಿ ರಾಜ್ಯದಲ್ಲಿ ಸಕಾರಾತ್ಮಕ ಬೆಳವಣಿಗೆ. ಉಳಿದ ಬಣಗಳು ವಿಲೀನಗೊಳ್ಳದ... ತಡೆ ಹಿಡಿಯಲಾಗುತ್ತಿರುವ ಈ ಸಂದರ್ಭದಲ್ಲಿ... ಪ್ರಕಟಣೆ ಕಾಂಗ್ರೆಸ್-ಬಿಜೆಪಿ ಪಕ್ಷಗಳೆರಡರ ವಿ... ಹೋರಾಡುವ ಶಕ್ತಿಯನ್ನು ಬಲಗೊಳಿಸಲಿ. ... ನಡುವೆ ವ್ಯಾಪಕವಾಗಿ ಒಂದು ಪರ್ಯಾಯ... ಆಂದೋಲನ ಹುಟ್ಟುಹಾಕಲಿ.

ಕೃಪಾಂಕ ನೌಕರರ ಹೋರಾಟಕ್ಕೆ ಸಿ... ಜಯ

ಸುಪ್ರೀಂಕೋರ್ಟ್ ನಿಂದ ವಜಾಗೊಳಿಸ... ಗ್ರಾಮೀಣ ಕೃಪಾಂಕ ನೌಕರರನ್ನು ಒಂದು ಬಾ... ಪುನರ್ ನೇಮಕ ಮಾಡಿಕೊಳ್ಳಲು ಸರ... ನಿರ್ಧರಿಸಿರುವುದು ಅತ್ಯಂತ ಸ್ವಾಗತಾರ್ಹ ನಿಧಾ... ಇದು ಅಹೋರತವಾಗಿ ನ್ಯಾಯಕ್ಕಾಗಿ ನೌಕ... ನಡೆಸಿದ ಹೋರಾಟಕ್ಕೆ ಸಿಕ್ಕ ಜಯ. ಈ ನೌಕ... ನಾಯಕತ್ವ ನೀಡಿದ ಡಿವೈಎಫ್‌ಐ, ಎಸ್‌ಎ... ಸಂಘಟನೆಗಳು ಅಭಿನಂದನಾರ್ಹ.

ಈ ಆದೇಶದ ಅನ್ವಯ ನೇಮಕಾತಿ ಪ್ರ... ಆರಂಭಗೊಳ್ಳಬೇಕಿದೆ. ಇದು ಒಂದು ಹ... ಜಯ. ಆದರೆ ನೇಮಕಾತಿ ಪೂರ್ಣ ಆಗುವವ... ಹಲವು ಅಡ್ಡಿ ಆತಂಕಗಗಳು ಬರಬಹುದು. ... ಮಾತ್ರಕ್ಕೆ ಯಾರೂ ಎದೆಗುಂದಬೇಕಿಲ್ಲ. ಅ... ಸಂದರ್ಭ ಉದ್ಭವಿಸಿದರೆ ಎದ... ಹೋರಾಡಬೇಕಾಗುತ್ತದೆ. ಆ ಆತ್ಮಸ್ಥೈರ್ಯ ಇರಲಿ.

ಬಿಜೆಪಿ ಪುರಸಭಾಧ್ಯಕ್ಷೆಯನ್ನು ಬಿಜೆಪಿಯವರೇ ಅವಮಾನಗೊಳಿಸಿ, ಹಿಂಸಿಸಿದರು! ಆತ್ಮಹತ್ಯೆಗೆ ದೂಡಿದರು!

ಮಂಜುಳಾ ಸಾವು : ಆರೋಪಿ ಶಾಸಕನೆಲ್ಲಿ?

ಬೆಂಗಳೂರು ಜಿಲ್ಲೆಯ ಆನೇಕಲ್‌ನ ಪುರಸಭಾ ಅಧ್ಯಕ್ಷೆ ನೇಣುಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡರು. ಮಹಿಳೆಯರನ್ನು 'ಮಾತೆ' ಯರೆಂದೂ, ಹಿಂದು ಒಂದು ಬಂಧು ಎಂದೆಲ್ಲಾ ಬೊಗಳೆ ಹೊಡೆಯುವ ಸಂಸ್ಕೃತಿ ಗುತ್ತಿಗೆದಾರ ಬಿಜೆಪಿ-ಆರ್‌ಎಸ್‌ಎಸ್ ನ ಪರಿವಾರದ ಕ್ರೌರ್ಯದ ಮುಖವನ್ನು ಈ ಸಾವು ಬಿಚ್ಚಿಡುತ್ತದೆ. ಇದರ ಪ್ರಮುಖ ಆರೋಪಿ ಬಿಜೆಪಿ ಶಾಸಕ ಇನ್ನೂ ತಲೆ ಮರೆಸಿಕೊಂಡಿದ್ದಾನೆ! ಆತನನ್ನು ಬಂಧಿಸಲು ಪೋಲೀಸರು-ಸರ್ಕಾರ ಕಣ್ಣು ಮುಚ್ಚಾಲೆಯಾಟ ಆಡುತ್ತಿದೆ! ಕೆಳಜಾತಿ-ಕೆಳವರ್ಗಕ್ಕೆ ಸೇರಿದ್ದ ಬಿಜೆಪಿ ಪುರಸಭಾಧ್ಯಕ್ಷೆಯನ್ನು ಬಿಜೆಪಿ ಪುಂಡರ ತಂಡವೇ ಸಾಯುವಂತೆ ಮಾಡಿದ ತಲ್ಲಣಕಾರಿ ದುರ್ಘಟನೆಯ ಸುತ್ತಮುತ್ತ ಸತ್ಯ ಬಿಚ್ಚಿಡುವ ವರದಿ

ನನಗಾದ ಅನ್ಯಾಯ ಯಾವ ಹೆಣ್ಣಿಗೂ ಆಗಬಾರದು. ನಾನು ಸಹಿಸಿದ ಅವಮಾನ ಕಿರುಕುಳಗಳನ್ನು ಮತ್ತಾರು ಅನುಭವಿಸಬಾರದು. ನನ್ನನ್ನು ಈ ಸ್ಥಿತಿಗೆ ತಂದವರಿಗೆ ಸರಿಯಾದ ಶಿಕ್ಷೆ ವಿಧಿಸಬೇಕು". ಇದು ಸಾವಿಗೀಡಾದ ಮಹಿಳೆಯೊಬ್ಬರ ಮರಣಪೂರ್ವ ಪತ್ರನೊಂದರ ಒಕ್ಕಣೆ. ಆದರೆ ವರದಕ್ಷಿಣೆಯ ಹಿಂಸೆ ತಾಳಲಾರದೆ ಆತ್ಮಹತ್ಯೆ ಮಾಡಿಕೊಂಡ ಮಹಿಳೆಯೊಬ್ಬಳ ದೂರು ಇದಾಗಿರಲಿಲ್ಲ. ತನ್ನ ಗಂಡ ಅಥವಾ ಕುಟುಂಬದವರನ್ನು ಶಿಕ್ಷಿಸಲು ಕೋರಿ ಪೊಲೀಸರಿಗೆ ಮಾನವಿ ಮಡಿದ ಪತ್ರವೂ ಅದಾಗಿರಲಿಲ್ಲ. ಇದು ಕೌಟುಂಬಿಕ ದೌರ್ಜನ್ಯಕ್ಕೆ ಬಲಿಯಾದ ಸಾಧಾರಣ ಮಹಿಳೆಯೊಬ್ಬಳ ಸ್ಥಿತಿಯಂತೂ ಅಲ್ಲವೇ ಅಲ್ಲ.

ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸುವಂತೆ ಪತ್ರ ಬರೆದಿಟ್ಟು ಆತ್ಮಹತ್ಯೆಗೆ ಶರಣಾದವರು ಮಂಜುಳಾ ಆದಿಕೇಶವಲು ಎನ್ನುವ ಮಹಿಳೆ. ಈಕೆ ಬೆಂಗಳೂರು ನಗರ ಜಿಲ್ಲೆ ಆನೇಕಲ್ ಪುರಸಭೆಯ ಹಾಲಿ ಅಧ್ಯಕ್ಷೆ. 'ನನ್ನ ಸಾವಿಗೆ ಕಾರಣರಾದವರು ಇವರೇ' ಎಂದು ಮಂಜುಳಾ ಆರೋಪಿಸಿರುವುದು ತನ್ನದೆ ಪಕ್ಷ ಬಿಜೆಪಿಯ ಸ್ಥಳೀಯ ಶಾಸಕ ನಾರಾಯಣಸ್ವಾಮಿ ಹಾಗೂ ಇನ್ನಿತರೆ ನಾಲ್ವರು ಕೌನ್ಸಿಲರ್‌ಗಳನ್ನು. ನಾಲ್ವರ ಪೈಕಿ ಒಬ್ಬರು ಕಾಂಗ್ರೆಸ್ ಪಕ್ಷದವರಾದರೆ ಉಳಿದವರೆಲ್ಲರೂ ಬಿಜೆಪಿಯವರೆ. ಅಂದರೆ ಇದ್ದೊಂದು ರಾಜಕೀಯ ದುರುದ್ದೇಶದ ಕೊಲೆ ಎಂದಾಯಿತಲ್ಲವೆ?

ಆಕೆಗಾದ ಅವಮಾನಗಳೇನು?

ನವೆಂಬರ್ 5 ರಂದು ಪುರಸಭೆ ಜರುಗುತ್ತಿತ್ತು. ಸಭೆಗೆ ಸ್ವಾಗತ ಕೋರುವಾಗ ನಾಮಕರಣ ಸದಸ್ಯರನ್ನು, ನಾಮಕಾವಸ್ಥೆ ಸದಸ್ಯರಿಗು ಸ್ವಾಗತ ಕೋರುವೆ ಎಂದು ಮಂಜುಳಾ ಆದಿಕೇಶವಲು ಬಾಯಿತಪ್ಪಿ ನುಡಿದರು. ಕೂಡಲೇ ಸಭೆಯಲ್ಲಿ ಗದ್ದಲ ಪ್ರಾರಂಭವಾಯಿತು. ಬಿಜೆಪಿ ಸದಸ್ಯರನ್ನು ಸೇರಿಸಿಕೊಂಡಂತೆ ಕಾಂಗ್ರೆಸ್‌ನವರು ಉಳಿದವರು ಆಕೆಯನ್ನು ನಿಂದಿಸಲು ಪ್ರಾರಂಭಿಸಿದ್ದಾರೆ. ಬಾಯಿತಪ್ಪಿ ನುಡಿದೆ ತಪ್ಪಾಗಿದೆಯೆಂಬ ಆಕೆಯ ಮಾತುಗಳು ಗದ್ದಲದ ನಡುವೆ ಯಾರೂ ಕೇಳಿಸಿಕೊಳ್ಳದೇ ಹೋಗಿದ್ದಾರೆ (ಅಥವಾ ಕೇಳಿಸಿಕೊಳ್ಳುವುದು ಬೇಕಿರಲಿಲ್ಲ) ಗದ್ದಲದ ನಡುವೆಯೇ ಒಬ್ಬಿಬ್ಬರು ಕೌನ್ಸಿಲರ್‌ಗಳು ಬಿಕ್ಕುತ್ತಿದ್ದ ಆಕೆಯನ್ನು ಸಮಾಧಾನ ಹೇಳಿ ಮನೆಗೆ ಕರೆತಂದು ಬಿಟ್ಟು ಹೋಗಿದ್ದಾರೆ. ಮನೆಯಲ್ಲಿ ಯಾರು ಇರದಿದ್ದ ಮಧ್ಯಾಹ್ನದ ಸಮಯದಲ್ಲಿ ಮಂಜುಳಾ, ಅಧಿಕಾರಿಗಳಿಗೆ ಪತ್ರವೊಂದನ್ನು ಬರೆದಿಟ್ಟು ಹಿಂಸೆ ನೀಡಿದವರ ವಿರುದ್ಧ ಶಿಕ್ಷೆ ವಿಧಿಸಲು ಕೋರಿ ಕೊರಳಿಗೆ ಉರುಳು ಬಿಗಿದುಕೊಂಡಿದ್ದಾರೆ.


ಈ ಮಧ್ಯೆ ಯಾರಿಗಾದರೂ ಸಂಶಯ ಮೂಡಿಸುವ ಪ್ರಶ್ನೆಯೆಂದರೆ, ಇಂಥದೊಂದು ಚಿಕ್ಕ ಘಟನೆಗೆ ಪ್ರತಿಯಾಗಿ ಮಂಜುಳಾ ಈ ತೀರ್ಮಾನಕ್ಕೆ ಬರುವುದೇ? ಪುರಸಭೆಯ ಅಧ್ಯಕ್ಷೆಯಾಗಿ ಇಂತಹ ಸಣ್ಣದೊಂದು ಪ್ರಸಂಗವನ್ನು ಅರಗಿಸಿಕೊಳ್ಳುವ ಅಥವಾ ಸರಿಪಡಿಸಿಕೊಳ್ಳುವ ಶಕ್ತಿಯನ್ನು ಈಕೆ ಪಡೆದಿರಲಿಲ್ಲವೆ? ಎಂಬುದು. ಮಂಜುಳಾರ ಪತಿ ಆದಿಕೇಶವುಲು ಹಾಗೂ ಆಕೆಯ ಕುಟುಂಬದವರು ಬಹಿರಂಗಪಡಿಸಿದ ಘಟನಾವಳಿಗಳನ್ನು ಕೇಳಿದರೆ ತಿಳಿಯುತ್ತದೆ, ಇಂತಹ ಹತ್ತಾರು ಘಟನಾವಳಿಗಳ ಸರಮಾಲೆಯೇ ಆಕೆಯ ಕೊರಳನ್ನು ಆವರಿಸಿತ್ತು ಎಂಬುದು ಆಕೆಯ ಸಾವಿಗೆ ಅಂದಿನ ಘಟನೆ ನೆಪ ಮಾತ್ರ ದುರಂತವೆಂದರೆ ಹೆಜ್ಜೆ ಹೆಜ್ಜೆಗೂ ಆಕೆಗೆ ಮುಳುವಾಗಿದ್ದವರು ಬಿಜೆಪಿಯ ಎಂ.ಎಲ್.ಎ ನಾರಾಯಣಸ್ವಾಮಿ ಹಾಗೂ ಅದೇ ಪಕ್ಷದ ಕೆಲವು ಕೌನ್ಸಿಲರ್‌ಗಳು.



ಆರೋಪಿಗನ್ನು ಬಂಧಿಸುವಂತೆ ಒತ್ತಾಯಿಸಿ ಜನವಾದಿ ಮಹಿಳಾ ಸಂಘಟನೆ ಮತ್ತಿತರ ಸಂಘಟನೆಗಳಿಂದ ಟೌನ್ ಹಾಲ್ ಎದುರು ಪ್ರತಿಭಟನೆ

ಹಿಂಸೆ ನೀಡಿದ್ದು ಯಾಕಾಗಿ? ಯಾವ ಹಿತಾಸಕ್ತಿಯ ಸಲುವಾಗಿ:-

ಆನೇಕಲ್ ಕ್ಷೇತ್ರದ ನಾಗರಿಕರೇ ಮಾತನಾಡಿಕೊಳ್ಳುತ್ತಿರುವಂತೆ ದಲಿತೋದ್ಧಾರದ ಹೆಸರಲ್ಲಿ ಬರಿಗೈನಲ್ಲಿ ರಾಜಕೀಯ ಪ್ರವೇಶ ಮಾಡಿದ ನಾರಾಯಣಸ್ವಾಮಿ ಗಳಿಸಿದ್ದು ಕೋಟಿಗಟ್ಟಲೆ ಆಸ್ತಿ. ಜಮೀನು, ಬಂಗಲೆ, ಅವರ ವ್ಯವಹಾರ-ವಹಿವಾಟುಗಳು ಕನಸಿನಲ್ಲಿ ಕಾಣುವಷ್ಟು ವೇಗವಾಗಿವೆ ಎನ್ನುತ್ತಾರೆ ಸ್ಥಳೀಯರು ಅಂದ ಮೇಲೆ ಈ ಗಳಿಕೆ ಹೇಗಾಯಿತು ಎಂಬುವ ಪ್ರಶ್ನೆಗೆ ಈಗಂತೂ ಮಕ್ಕಳೂ ಉತ್ತರ ಹೇಳಬಲ್ಲರು. ಜನತೆಯಿಂದ ಅಧಿಕಾರ ಪಡೆಯುತ್ತಿದ್ದಂತೆ ಎಂಎಲ್‌ಎ ಪೋಷಿಸಿದ್ದು ಜನರ ಹಿತಾಸಕ್ತಿಗಳನ್ನಲ್ಲ. ಭ್ರಷ್ಟಾಚಾರವೆಂಬ ಬಿಳಲುಗಳ ಹೆಮ್ಮರವನ್ನು ಸದ್ಯ ಅನುಭವಿಸುತ್ತಿರುವ ಕೋಟ್ಯಾಂತರ ಮೌಲ್ಯದ ಸ್ಥಿರ-ಚರ ಆಸ್ತಿಗಳೆಂಬ ಫಸಲನ್ನು ಕೊಟ್ಟಿದ್ದೇ ಅದು.



ಅಡಗಿಕುಳಿತಿರುವ ಆರೋಪಿ ಶಾಸಕ. ಈತನನ್ನೇ ಪೋಲೀಸರು ಹುಡುಕುತ್ತಿರುವುದು

ರಸ್ತೆ ಕಾಮಗಾರಿಗಳಲ್ಲಿ ಭ್ರಷ್ಟಾಚಾರ, ಕೂಲಿಗಾಗಿ ಕಾಳು ಯೋಜನೆಯಲ್ಲಿ ಭ್ರಷ್ಟಾಚಾರ, ತಾಲ್ಲೂಕು ಕಛೇರಿಗಳ ವ್ಯವಹಾರಗಳಲ್ಲಿ ಭ್ರಷ್ಟಾಚಾರ, ಸರ್ಕಾರದ ಅಭಿವೃದ್ಧಿ ಯೋಜನೆಗಳಲ್ಲಿ ಭ್ರಷ್ಟಾಚಾರ, ಸರ್ಕಾರಿ ಕೆಲಸಗಳ ವಿಷಯದಲ್ಲಿ ವ್ಯಾಪಕ ಭ್ರಷ್ಟಾಚಾರ ಹೇಗೆ ಭ್ರಷ್ಟಾಚಾರದಲ್ಲೇ ಈಜಾಡುತ್ತಿರುವ ಶಾಸಕರಿಗೆ ಕೌನ್ಸಿಲರ್ ನಂತಹ ಜನ ಪ್ರತಿನಿಧಿಗಳು ಬಲೂನ್‌ಗಳ ರೀತಿಯಲ್ಲಿ ಸಹಾಯಕವಾಗಿದ್ದು ತನ್ನ ಕೆಲಸವನ್ನು ಹಗುರಗೊಳಿಸಬೇಕೆಂಬ ಉತ್ಕಟ ಬಯಕೆ.

ಹಗುರಗೊಳಿಸುವ ಕಾಯಕದಲ್ಲಿ ನಿರತರಾದರೆ ಕಷ್ಟವೇನಿಲ್ಲ. ಪ್ರಶ್ನೆ ಮಾಡಿದರೆ ಕಿರುಕುಳ ತಪ್ಪಿದ್ದಲ್ಲ. ಪ್ರಶ್ನೆ ಮಾಡುವ ಧೈರ್ಯ ಮಾಡಲು ಹೋಗಿಯೇ ಮಂಜುಳಾ ಆದಿಕೇಶವುಲು ಹಿಂಸೆ ಅನುಭವಿಸಿದ್ದು

ಕಾಮಗಾರಿಗಳಿಗೆ ವಿವಿಧ ವ್ಯವಹಾರಗಳಿಗೆ ಸಂಬಂಧಿಸಿದ ಫೈಲುಗಳು ಮಂಜುಳಾ ಟೇಬಲ್ಲಿನ ಮೇಲೆ ಬಂದು ಬೀಳುತ್ತಿದ್ದವು. ಆದರೆ ಅಧ್ಯಕ್ಷೆ ಮಂಜುಳಾ ಸಹಿಗಾಗಿ ಬರುತ್ತಿದ್ದ ಫೈಲುಗಳನ್ನು ಪರಾಮರ್ಶಿಸಲು ಅವಲೋಕಿಸಲು ಆಸ್ಪದವಿರುತ್ತಿರಲಿಲ್ಲ. "ಸುಮ್ಮನೆ ಸಹಿ ಹಾಕಿ ಕಳಿಸು" ಉಳಿದದ್ದನ್ನು ನಾನು ನೋಡಿಕೊಳ್ಳುತ್ತೇನೆ ಎನ್ನುವ ಶಾಸಕರ ಜಬರ್ದಸ್ತಿನ ಕರೆಗಳು ಜೊತೆಯಲ್ಲಿಯೇ ಇರುತ್ತಿದ್ದವು.

ಇಲ್ಲ ಇವುಗಳ ಕುರಿತಾಗಿ ತಿಳಿದುಕೊಂಡು ಸಹಿಮಾಡುತ್ತೇನೆಂದು ಮಂಜುಳ ಮಾರುತ್ತರ ನೀಡಿದರೆ "ಬಾಯುಚ್ಚಿಕೊಂಡು ಸೈನ್ ಹಾಕು ನೀನ್ ಯಾವಳು ಅದೆಲ್ಲ ನೋಡಕೆ, ನಿನ್ನನ್ನು ಅಧ್ಯಕ್ಷೆ ಮಾಡಿರದು ನಾನು ಹೇಳಿದ್ದನ್ನ ಕೇಳಕೆ ನೀನ್ ಹೇಳಿದ್ದನ್ನ ನಾನ್ ಕೇಳಕ್ಕಲ್ಲ" ಮುಂತಾದ 'ಮಾತೆಯರನ್ನು' ಗೌರವಿಸುವ ಮಾತುಗಳು. ಹೋಗೇ .... ಬಾರೇ ...., ಯಾವಳೇ......... ಸೂಳೇ........ ಮುಂತಾದ ಮಾತನ್ನೆಲ್ಲ ಮಂಜುಳಾ ಮೇಲೆ ಪ್ರಯೋಗಿಸಿದ್ದಾರಂತೆ ಶಾಸಕರು, ಮೌಲ್ಯಗಳ ಮಾತುಗಳನ್ನೇ ಆಡುವ, ಶಿಸ್ತಿನ ಪಕ್ಷದ ಸಿಪಾಯಿ ನಾರಾಯಣಸ್ವಾಮಿ. ಮಾತೆಯರಿಗೆ ನೀಡುವ ಮಾನ್ಯತೆಯೆಂದರೆ ಇದೇ ಇರಬೇಕು. ಏಕೆಂದರೆ ಇದು ಮತ್ತೆ- ಮತ್ತೆ ಸಾಬೀತಾಗುತ್ತಿದೆ. ಕ್ರಿಶ್ಚಿಯನ್ ನನ್‌ಗಳನ್ನು ನಡೆಸಿಕೊಂಡ ರೀತಿ, ಗುಜರಾತಿನ ಕೋಮುದಳ್ಳುರಿಯಲ್ಲಿ ಮಹಿಳೆಯರು-ಮಕ್ಕಳನ್ನು ನಡೆಸಿಕೊಂಡ ಬಗೆ ಬಾಂಬೆ, ಸುರತ್ಕಲ್‌ಗಳಲ್ಲಿ ಮಹಿಳೆಯರಿಗೆ ವಿವಿಧ ರೀತಿಯಲ್ಲಿ ನೀಡಿದ ಗೌರವ! ನೆನಪಿಸಿಕೊಂಡರೆ ಅಥವಾ ಬಿಜೆಪಿ ಮತ್ತು ಸಂಘಪರಿವಾರದ ಜಾರಿಯಲ್ಲಿರುವ ಅಜೆಂಡಾಗಳನ್ನು ಗಮನಿಸಿದರೆ ಇವರು ಮಾತೆಯರಿಗೆ ನೀಡುವ ನಿಜವಾದ ಗೌರವ ಆತಿಥ್ಯ ಏನು ಎಂಬುದು ಸ್ಪಷ್ಟ. ಹಾಗೆ ನೋಡಿದರೆ ಆನೇಕಲ್ ಘಟನೆ ಚಿಕ್ಕದೊಂದು ಅವಘಡ ಮಾತ್ರ.



ನನ್ನ ಸಾವಿಗೆ ಕಾರಣರಾದವರಿಗೆ ಶಿಕ್ಷೆ ಆಗಲೇಬೇಕು
- ಮಂಜುಳಾ ಆದಿಕೇಶವುಲು

ಮಂಜುಳಾ ಕುಟುಂಬ ವರ್ಗವೇ ಬಿಚ್ಚಿಟ್ಟ ಈ ಸತ್ಯವನ್ನು ಊರಿನ ನಾಗರಿಕರು ಬೆಂಬಲಿಸುತ್ತಾರೆ! ಹೌದು ಆ ಹೆಣ್ಣುಮಗಳು ತುಂಬಾ ನೋವುಂಡವಳು, ಎನ್ನುತ್ತಾರೆ. ಹೀಗಾಗಿಯೆ ರೋಸಿಹೋಗಿದ್ದ ನಾಗರೀಕರು ನೂರಾರು ಸಂಖ್ಯೆಯಲ್ಲಿ ಜಮಾಯಿಸಿ ಎಂ.ಎಲ್.ಎ ಬಂಧನಕ್ಕೆ ಆಗ್ರಹಪಡಿಸಿದ್ದಾರೆ.

ಘಟನೆಯ ಕುರಿತಾಗಿ ಮಾಧ್ಯಮಗಳಲ್ಲಿ ಸುದ್ದಿ ಹರಡುತ್ತಿದ್ದಂತೆಯೇ ಜಾಗ್ರತಗೊಂಡ ಜನವಾದಿ ಮಹಿಳಾ ಸಂಘಟನೆ ಮಾರನೆಯ ದಿನ ಶವದ ಸಮ್ಮುಖದಲ್ಲಿಯೇ ಆರೋಪಿಗಳನ್ನು ಬಂಧಿಸುವಂತೆ ಆಗ್ರಹಿಸಿ ಪ್ರತಿಭಟನೆ ನಡೆಸಿತು.

ಆನೇಕಲ್‌ನ ನೂರಾರು ನಾಗರಿಕರು ಪ್ರತಿಭಟನೆಯಲ್ಲಿ ಸ್ವಯಂ ಪಾಲ್ಗೊಂಡರು. ಎಂ.ಎಲ್.ಎ ಮತ್ತು ಇತರೆ ಆರೋಪಿಗಳನ್ನು ಬಂಧಿಸುವಂತೆ ಒತ್ತಾಯಿಸಿ ಗಗನ ಮುಟ್ಟುವ ಘೋಷಣೆಗಳೊಂದಿಗೆ ಆಗ್ರಹಿಸಿದರು. ಇದನ್ನು ಸಹಿಸದ ಬಿಜೆಪಿಯ ಕೆಲ ಕಾರ್ಯಕರ್ತರು ದಾಳಿ ನಡೆಸಲು ಮುಂದಾದಾಗ ಸ್ಥಳೀಯ ನಾಗರಿಕರೇ ಮುಖಂಡರಿಗೆ ರಕ್ಷಣೆ ನೀಡಿದರು.

ನವೆಂಬರ್ 12 ರಂದು ಬೆಂಗಳೂರಿನ ಟೌನ್‌ಹಾಲ್ ಎದುರು ಮಹಿಳೆಯರ ವಿವಿಧ ಸಂಘಟನೆಗಳು ಸಮನ್ವಯದ ಹೆಸರಿನಲ್ಲಿ ಪ್ರತಿಭಟನೆಯನ್ನು ನಡೆಸಿ, ಆರೋಪಿಗಳ ಬಂಧನಕ್ಕೆ ಆಗ್ರಹಪಡಿಸಿದರು. ನೂರಾರು ಮಹಿಳಾ ಕಾರ್ಯಕರ್ತರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು. ಅಲ್ಲದೆ ಮಳವಳ್ಳಿ, ಕೆಜಿಎಫ್, ವಿಜಾಪುರ, ಗುಲ್ಬರ್ಗಾ, ಹರಪನಹಳ್ಳಿ, ರಾಯಚೂರು ಮುಂತಾದೆಡೆ ಜೆಎಂಎಸ್ ಪ್ರತಿಭಟನೆ ನಡೆಸಿದೆ.

ವರದಿ: **ನಾಗೂ**

ಏನಿದರ ಅರ್ಥ ?

ಮಂಜುಳಾ ಆತ್ಮಹತ್ಯೆಯ ಆರೋಪಿ ಬಿಜೆಪಿ ಶಾಸಕ ನಾರಾಯಣಸ್ವಾಮಿ ಈಗ ಎಲ್ಲಿದ್ದಾನೆ ? ಎಲ್ಲಿದ್ದಾನೆ ಹೇಳಿ ಎನ್ನುತ್ತಿದ್ದಾರೆ. ಬಂಧಿಸಬೇಕಾದ ಪೊಲೀಸರು " ಈಗಾಗಲೇ ಆರು ಅಡಗುದಾಣ ಗಳನ್ನು ಆತ ಬದಲಾಯಿಸಿದ್ದಾನೆ. ಆರು ಮೊಬೈಲ್‌ಗಳೂ ಕೈ ಬದಲಾಗಿದೆ. ಈತನ ರಕ್ಷಣೆಗೆ ಸ್ವತಃ ಸಂಪಂಗಿರಾಮನಗರದ ಬಿಜೆಪಿ ಶಾಸಕ ಕಟ್ಟಾ ಸುಬ್ರಹ್ಮಣ್ಯ ನಾಯ್ಡು ಆಸಕ್ತಿವಹಿಸಿದ್ದಾರೆ. ಹೀಗೆ ಹೇಳುತ್ತಾರೆ ಗೃಹ ಇಲಾಖೆಯ ಗುಪ್ತ ಮೂಲಗಳು ಆದರೆ ಆತ ಕೈಗೆ ಸಿಗುತ್ತಿಲ್ಲ. ಹೇಗಿದೆ ತಮಾಷೆ? ಹೇಗಿದೆ ಅಧಿಕಾರಸ್ಥರೊಂದಿಗೆ ಅಧಿಕಾರಿಗಳ ನಂಟು.

ಹೀಗೆಯೇ ಈ ಹತ್ಯೆಯ ಆರೋಪಿ ಶಾಸಕನನ್ನು ಬಂಧಿಸಲು ಸಭಾಧ್ಯಕ್ಷರ ಅನುಮತಿ ಬೇಕು. ಅನುಮತಿ ಕೊಡಿ" ಎಂದು ಸಭಾಧ್ಯಕ್ಷ ವೆಂಕಟಪ್ಪನವರಿಗೆ ಪೊಲೀಸರು ಬರೆದಿದ್ದರಂತೆ. ಒಡನೆಯೇ ಅಲ್ಲಿ ಕೇಳಿಬರುವ ಇನ್ನೊಂದು ಮಾತು 'ಶಾಸಕರನ್ನು ವಿಧಾನಸಭೆಯಲ್ಲಿ ಬಂಧಿಸುವುದಿದ್ದರೆ ಪೋಲಿಸರ ಪ್ರವೇಶಕ್ಕೆ ಅಂತಹ ಪರವಾನಗಿ ಅಗತ್ಯವಿದೆ. ಆದರೆ ಈಗೇನಲ್ಲ' ಎಂಬುದೇ ಸತ್ಯ. ಪ್ರಕರಣ ನಡೆದು ಹತ್ತಾರು ದಿನಗಳಾಗುತ್ತಿರುವಾಗ ಈ ಯಾವುದೇ ಪ್ರಕ್ರಿಯೆ ಮುಗಿಸಲು ಸಾಧ್ಯವಿಲ್ಲವೇ? "ಏನ್ರಿ? ಒಬ್ಬ ಶಾಸಕನನ್ನು ಹಿಡಿಯಲು ಆಗೋದಿಲ್ಲಾಂದ್ರೆ ಹೇಗ್ರೀ. ಏನ್ ಮಾಡ್ತೀರಿ ನೀವು" ಎಂದು ಗೃಹ ಸಚಿವ ಖರ್ಗೆಯವರು ಮಹಿಳಾ ನಿಯೋಗದ ಮುಂದೆ ಪೊಲೀಸ್ ಅಧಿಕಾರಿಗೆ ಖಡಕಾಗಿ ತರಾಟೆ ತಗೊಂಡಿದ್ದರಲ್ಲಿ ಏನಾದರೂ ನಿಜವಿದ್ದೀತೆ? ಏನಿರಬಹುದು?

ಶ್ರೀಲಂಕಾ ಬಿಕ್ಕಟ್ಟು : ಸ್ವರೂಪ ಮತ್ತು ಪರಿಹಾರ ಮಾರ್ಗಗಳು


ಶ್ರೀಲಂಕಾ ದೇಶದಲ್ಲಿನ ರಾಜಕೀಯ ಬಿಕ್ಕಟ್ಟಿನತ್ತ ಎಲ್ಲರ ಗಮನವೀಗ. ಎಲ್‌ಟಿಟಿಇ ಯೊಂದಿಗೆ ಶಾಂತಿ ಮಾತುಕತೆಗಳಲ್ಲಿ ಮುಂದುವರಿಯುವುದು ಹೇಗೆ ಎಂಬುದೇ ಪ್ರಮುಖ ಪ್ರಶ್ನೆ. ಇದರಲ್ಲಿ ಅಧ್ಯಕ್ಷೆ ಮತ್ತು ಪ್ರಧಾನಮಂತ್ರಿಗಳ ವಿಭಿನ್ನ ನಿಲುಮೆ ತಳೆದಿದ್ದಾರೆ. ಎಲ್‌ಟಿಟಿಇ ಮಂಡಿಸಿದ ಪ್ರಸ್ತಾವಗಳೇನು? ಇವುಗಳನ್ನು ಒಪ್ಪಲಾದೀತೆ? ನಾರ್ವೆ ಮಧ್ಯಸ್ಥಿಕೆಯ ಉದ್ದೇಶಗಳೇನು? ಹಾಗೂ ಈ ಬಿಕ್ಕಟ್ಟಿನ ಮೂಲ ಸ್ವರೂಪ, ಪರಿಹಾರದ ಮಾರ್ಗಗಳನ್ನು ವಿಶ್ಲೇಷಿಸಿದ್ದಾರೆ ಸಿಪಿಐ(ಎಂ)ನ ಪೊಲಿಟ್‌ಬ್ಯೂರೋ ಸದಸ್ಯರಾದ ಪ್ರಕಾಶ್ ಕಾರಟ್‌ರವರು. ನಮ್ಮ ನೆರೆಯ ದೇಶದ ಪ್ರಮುಖ ವಿದ್ಯಮಾನಗಳ ಸುತ್ತ ಈ ಲೇಖನ.

ಶ್ರೀಲಂಕಾದಲ್ಲಿನ ರಾಜಕೀಯ ಬಿಕ್ಕಟ್ಟು ಅಂತರ್‍ರಾಷ್ಟ್ರೀಯ ಗಮನ ಸೆಳೆದಿದೆ. ಭಾರತಕ್ಕೆ, ಅದರಲ್ಲೂ ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳಿಗೆ ಒಂದು ಗಂಭೀರ ಆತಂಕದ ಬೆಳವಣಿಗೆಯಿದು. ಅಧ್ಯಕ್ಷೆ ಚಂದ್ರಿಕಾ ಕುಮಾರ ತುಂಗರವರು ವಿಕ್ರಮಸಿಂಘೆ ಸರ್ಕಾರದ ರಕ್ಷಣೆ, ಆಂತರಿಕ ಮತ್ತು ಮಾಧ್ಯಮ ಖಾತೆಗಳ ಮಂತ್ರಿಗಳಿಂದ ಅವರ ಖಾತೆಗಳನ್ನು ಕಸಿದುಕೊಂಡರು, ಸಂಸತ್ತನ್ನು ಎರಡುವಾರ ಮುಂದೂಡಿದರು ಮತ್ತು ರಾಷ್ಟ್ರೀಯ ಭದ್ರತೆಯ ಹೊಣೆಯನ್ನು ತಾವೇ ವಹಿಸಿಕೊಂಡರು. ಶ್ರೀಲಂಕಾದ ಸಂವಿಧಾನದಲ್ಲಿ ಅಧ್ಯಕ್ಷರಿಗೆ ಇರುವ ಈ ಕಾರ್ಯಕಾರೀ ಅಧಿಕಾರಗಳನ್ನು ಅಧ್ಯಕ್ಷರು ಚಲಾಯಿಸುತ್ತಿದ್ದಾಗ ಪ್ರಧಾನಮಂತ್ರಿ ವಿಕ್ರಮಸಿಂಘೆ ಅಮೆರಿಕಾದ ಅಧಿಕೃತ ಪ್ರವಾಸದಲ್ಲಿದ್ದರು. ಅಧ್ಯಕ್ಷರು ಶ್ರೀಲಂಕಾ ಫ್ರೀಡಂ ಪಾರ್ಟಿಗೆ ಸೇರಿದ್ದರೆ, 2001 ರಲ್ಲಿ ಸಂಸದೀಯ ಚುನಾವಣೆಗಳನ್ನು ಗೆದ್ದ ಪ್ರಧಾನಮಂತ್ರಿಗಳು ಯುನೈಟೆಡ್ ನ್ಯಾಶನಲ್ ಪಾರ್ಟಿಗೆ ಸೇರಿದವರು. ಎಲ್‌ಟಿಟಿಇ ಯೊಡನೆ ಶಾಂತಿ ಮಾತುಕತೆಗಳಲ್ಲಿ ಮುಂದುವರಿಯುವುದು ಹೇಗೆ ಎಂಬ ಬಗ್ಗೆ ಈ ಇಬ್ಬರು ಮುಖಂಡರಲ್ಲಿನ ಭಿನ್ನಾಭಿಪ್ರಾಯಗಳಿಂದಾಗಿ ಈ ಬಿಕ್ಕಟ್ಟು ಮೂಡಿಬಂದಿದೆ.

ಶ್ರೀಲಂಕಾದ ಸೇನಾಪಡೆಗಳು ಮತ್ತು ಎಲ್‌ಟಿಟಿಇ ನಡುವಿನ ನಿಲ್ಲದ ಸಮರ ಇಪ್ಪತ್ತು ತಿಂಗಳ ಹಿಂದೆ ನಾರ್ವೆ ದೇಶದ ಮಧ್ಯಸ್ಥಿಕೆಯಿಂದ ಘೋಷಿಸಿದ ಯುದ್ಧ ವಿರಾಮದಿಂದಾಗಿ ನಿಂತಿದೆ. ಶ್ರೀಲಂಕಾದ ಚೌಕಟ್ಟಿನೊಳಗೆ ತಮಿಳು ಅಲ್ಪಸಂಖ್ಯಾತರ ಆಕಾಂಕ್ಷೆಗಳನ್ನು ಹೊಂದಿಸಿಕೊಳ್ಳುವುದು ಹೇಗೆ ಎಂಬ ದೀರ್ಘ ಕಾಲದ ಸಮಸ್ಯೆಯ ಪರಿಹಾರಕ್ಕೆ ಮಾತುಕತೆಗಳು ಆರಂಭವಾದವು. ಕೆಲವು ಸುತ್ತಿನ ಮಾತುಕತೆಗಳ ನಂತರ ಏಪ್ರಿಲ್ 2003 ರಲ್ಲಿ ಎಲ್‌ಟಿಟಿಇ ಮಾತುಕತೆ ಮುಂದುವರೆಸಲು ನಿರಾಕರಿಸಿತು. ಶ್ರೀಲಂಕಾ ಸರ್ಕಾರ ಕೆಲವು ಒಪ್ಪಂದಗಳನ್ನು ಉಲ್ಲಂಘಿಸಿದೆ ಎಂಬುದು ಅದರ ಆಪಾದನೆ. ನಾರ್ವೆಯ ಮಧ್ಯಸ್ಥಿಕೆದಾರರು ಅಮೆರಿಕನ್ ಮತ್ತು ಯುರೋಪಿಯನ್ ದೇಶಗಳ ಬೆಂಬಲದೊಂದಿಗೆ ಈ ಮಾತುಕತೆಗಳನ್ನು ಮತ್ತೆ ಆರಂಭಿಸಲು ಕೆಲಸ ಮಾಡಿದರು. ಇದರ ಫಲಿತಾಂಶವೆಂದರೆ ಎಲ್‌ಟಿಟಿಇ ಶ್ರೀಲಂಕಾದ ಉತ್ತರ-ಪೂರ್ವ ಪ್ರದೇಶಕ್ಕೆ ಒಂದು 'ಮಧ್ಯಂತರ ಸ್ವಯಮಾಡಳಿತ ಪ್ರಾಧಿಕಾರ (ISGFA) ದ ಪ್ರಸ್ತಾವವನ್ನು ಮುಂದಿಟ್ಟಿತು. ಎಲ್‌ಟಿಟಿಇ ದೃಷ್ಟಿಯಲ್ಲಿ ಮಾತುಕತೆ ಮೂಲಕ ಇತ್ಯರ್ಥಗಳ ಚೌಕಟ್ಟು ಏನು ಎಂಬುದನ್ನು ಮುಂದಿಟ್ಟ ಮೊದಲ ದಸ್ತಾವೇಜು ಇದು.

ಪ್ರಸ್ತುತ ಬಿಕ್ಕಟ್ಟು

ಈ ಪ್ರಸ್ತಾಪವೇ ಶ್ರೀಲಂಕಾದ ಅಧ್ಯಕ್ಷರು ಮತ್ತು ಪ್ರಧಾನಮಂತ್ರಿಗಳ ನಡುವಿನ ಪ್ರಸ್ತುತ ಸಂಘರ್ಷಕ್ಕೆ ಕಾರಣ. ಈಗಿನ ಪ್ರಧಾನಮಂತ್ರಿಗಳ ಪಕ್ಷದ ಮುಖಂಡರಾಗಿದ್ದ ಜಯವರ್ಧನೆಯವರು ಅಧ್ಯಕ್ಷರಾಗಿದ್ದಾಗ ಶ್ರೀಲಂಕಾದ ಸಂವಿಧಾನ ಅಧ್ಯಕ್ಷರಿಗೆ ಹಲವು ಅಧಿಕಾರಗಳನ್ನು ನೀಡಿದೆ. ಇದರ ಪ್ರಕಾರ ರಕ್ಷಣಾ ಖಾತೆ ನೇರವಾಗಿ ಅವರ ಕೈಯಲ್ಲಿದೆ. ಎಲ್‌ಟಿಟಿಇ ತನ್ನ ಸಶಸ್ತ್ರ ಪಡೆಗಳನ್ನು ವಿಸರ್ಜಿಸದೆ ಉತ್ತರ-ಪೂರ್ವದಲ್ಲಿ ತನ್ನ ಸ್ಥಾನವನ್ನು ಭದ್ರಪಡಿಸಿಕೊಳ್ಳಲು ಬಿಟ್ಟಿರುವ ಬಗ್ಗೆ ಅಧ್ಯಕ್ಷೆ ಕುಮಾರತುಂಗ ತಮ್ಮ ಆತಂಕವನ್ನು ಈ ಮಾತುಕತೆಯಾದ್ಯಂತ ವ್ಯಕ್ತಪಡಿಸಿದ್ದರು. ಎಲ್‌ಟಿಟಿಇ ಗೆ ಕೆಲವು ನೌಕಾ ಸೌಲಭ್ಯಗಳನ್ನು ಕೊಡಬೇಕೆಂಬ ನಾರ್ವೆ ಪ್ರಸ್ತಾಪಕ್ಕೆ ಅವರು ಗಂಭೀರ



ಆಕ್ಷೇಪ ವ್ಯಕ್ತಪಡಿಸಿದ್ದರು. ನಾರ್ವೆ ಮಧ್ಯಸ್ಥಿಕೆದಾರರನ್ನು ತೆಗೆದುಹಾಕಬೇಕೆಂದೂ ಅವರು ಇತ್ತೀಚೆಗೆ ಕರೆ ನೀಡಿದ್ದರು.

ರಕ್ಷಣೆ ಮತ್ತು ಸಶಸ್ತ್ರ ಪಡೆಗಳ ಹತೋಟಿಯ ಪ್ರಮುಖ ಪ್ರಶ್ನೆಯ ಮೇಲೆ ಪ್ರಸ್ತುತ ಬಿಕ್ಕಟ್ಟು ಉಂಟಾಗಿದೆ. ರಕ್ಷಣಾ ವಿಷಯಗಳಲ್ಲಿ ಅಧ್ಯಕ್ಷರ ಅಧಿಕಾರಗಳ ಬಗ್ಗೆ ಕೇಳಿದಾಗ ಸುಪ್ರೀಂಕೋರ್ಟ್ ರಕ್ಷಣಾ ಮಂತ್ರಿಗಳು ಅಧ್ಯಕ್ಷರನ್ನು ಬದಿಗೊತ್ತಿ ಪ್ರಮುಖ ವಿಷಯಗಳ ಮೇಲೆ ನಿರ್ಣಯಗಳನ್ನು ಕೈಗೊಳ್ಳುವಂತಿಲ್ಲ ಎಂಬ ಅಭಿಪ್ರಾಯಪಟ್ಟಿತ್ತು. ನವೆಂಬರ್ 12 ರಂದು ಆರಂಭವಾಗಬೇಕಿದ್ದ ಸಂಸತ್ ಅಧಿವೇಶನದಲ್ಲಿ ಈ ಬಗ್ಗೆ ಸಂಘರ್ಷ ನಡೆಯುವ ಸಂಭವವಿತ್ತು. ಆಳುವ ಪಕ್ಷದ ಒಂದು ವಿಭಾಗ ಸುಪ್ರೀಂಕೋರ್ಟ್ ಮುಖ್ಯ ನ್ಯಾಯಾಧೀಶರ ಮೇಲೆ ದೋಷಾರೋಪಣೆಗೆ ಪ್ರಸ್ತಾವ ತರುವ ಬೆದರಿಕೆ ಹಾಕಿತ್ತು.

ಈ ರೀತಿ ಅಧ್ಯಕ್ಷರು ಮತ್ತು ಪ್ರಧಾನಮಂತ್ರಿಗಳ ನಡುವಿನ ಭಿನ್ನಾಭಿಪ್ರಾಯಗಳು ಹೆಚ್ಚುತ್ತಿದ್ದ ಹಿನ್ನೆಲೆಯಲ್ಲಿ ಎಲ್‌ಟಿಟಿಇ ಪ್ರಸ್ತಾವಗಳು ಸಂಘರ್ಷವನ್ನು ಇನ್ನಷ್ಟು ತೀವ್ರಗೊಳಿಸಿದ್ದವು. ಈ ಪ್ರಸ್ತಾವಗಳು ಸರಕಾರದ ಪ್ರಸ್ತಾವಗಳಿಗಿಂತ ಮುಂದೆ ಹೋಗಿದೆ ಎಂದು ಟಿಪ್ಪಣಿ ಮಾಡುತ್ತಲೇ ವಿಕ್ರಮಸಿಂಗೆ ಸರ್ಕಾರ ಎಲ್‌ಟಿಟಿಇ ಪ್ರಸ್ತಾವ ಮುಂದಿನ ಮಾತುಕತೆಗಳಿಗೆ ಆಧಾರವಾಗಬಲ್ಲದು ಎಂದು ಜಾಗರೂಕತೆಯಿಂದ ಪ್ರತಿಕ್ರಿಯಿಸಿತ್ತು. ಅಧ್ಯಕ್ಷೆ ಕುಮಾರತುಂಗ ಮಧ್ಯಂತರ ಪ್ರಾಧಿಕಾರ ಪ್ರಸ್ತಾವ ಶ್ರೀಲಂಕಾದ ಐಕ್ಯತೆ ಮತ್ತು ಸಮಗ್ರತೆಗೆ ಬಾಧಕವಾದದ್ದು ಎಂದು ತಿರಸ್ಕರಿಸಿದ್ದರು.

ಅಧ್ಯಕ್ಷೆ ಕುಮಾರತುಂಗ ತುರ್ತುಪರಿಸ್ಥಿತಿ ಹೇರುವ ಕ್ರಮದಿಂದ ಹಿಂದೆ ಸರಿದು ಸರ್ಕಾರ ಶಾಂತಿ ಮಾತುಕತೆಗಳನ್ನು ಮುಂದುವರೆಸಬೇಕು ಎಂದು ಕರೆ ನೀಡಿದರು. ವಿಕ್ರಮಸಿಂಗೆ ಸರ್ಕಾರ ಸಂಸತ್ತನ್ನು ತಕ್ಷಣವೇ ಕರೆಯಬೇಕು, ಏಕೆಂದರೆ ಮಾತುಕತೆಯ ಬಗ್ಗೆ ನಿರ್ಧರಿಸಲು ಅದು ಮಾತ್ರ ಅರ್ಹ ಎಂದು ಪ್ರತ್ಯುತ್ತರ ನೀಡಿತು. ಪ್ರತಿಯಾಗಿ ಕುಮಾರತುಂಗ ಎಲ್ಲಾ ರಾಜಕೀಯ ಪಕ್ಷಗಳಿರುವ ಒಂದು ರಾಷ್ಟ್ರೀಯ ಸರ್ಕಾರವನ್ನು ರಚಿಸಬೇಕು ಎಂದು ಕರೆ ನೀಡಿದರು. ರಕ್ಷಣೆ, ಆಂತರಿಕ ಖಾತೆಯಂತಹ ಪ್ರಮುಖ ಖಾತೆಗಳು ತನ್ನ ವ್ಯಾಪ್ತಿಯ ಹೊರಗಿರುವಾಗ ಮಾತುಕತೆ ನಡೆಸುವ ಸ್ಥಿತಿಯಲ್ಲಿ ತಾನಿಲ್ಲ, ಅಧ್ಯಕ್ಷರೇ ಮಾತುಕತೆಯ ಹೊಣೆ ವಹಿಸಿಕೊಳ್ಳಲಿ ಎಂದು ವಿಕ್ರಮಸಿಂಗೆ ಸರ್ಕಾರ ಹೇಳಿತು. ಹೀಗೆ ತಿಕ್ಕಾಟ ಮುಂದುವರೆಯುತ್ತಿದೆ.

ಪ್ರತ್ಯೇಕ ಪ್ರಭುತ್ವದ ಪೀಠಿಕೆ

ಎಲ್‌ಟಿಟಿಇಯ ಮಧ್ಯಂತರ ಪ್ರಾಧಿಕಾರದ ಪ್ರಸ್ತಾವ ಈಳಂನ ಒಂದು ಪ್ರತ್ಯೇಕ ಪ್ರಭುತ್ವವನ್ನು ರಚಿಸುವ ಪೀಠಿಕೆಯಲ್ಲದೆ ಮತ್ತೇನೂ ಅಲ್ಲ. ಈ ದಸ್ತಾವೇಜನ್ನು ಅಧ್ಯಯನ ಮಾಡಿದಾಗ ಅದು ಕೇಳಿರುವ ಅಧಿಕಾರಗಳು ಶ್ರೀಲಂಕಾ ಪ್ರಭುತ್ವದ ಚೌಕಟ್ಟನ್ನು ದಾಟಿ ಹೋಗಿದೆ ಎಂಬುದು ಕಂಡು ಬರುತ್ತದೆ. ಈ ಪ್ರಾಧಿಕಾರದಲ್ಲಿ ಎಲ್‌ಟಿಟಿಇ ಸಂಪೂರ್ಣ ಬಹುಮತ ಬಯಸುತ್ತದೆ, ಸ್ವಲ್ಪ ಮಟ್ಟಿಗಷ್ಟೇ ಮುಸ್ಲಿಂ ಮತ್ತು ಸಿಂಹಳೀ ಪಾತ್ರಕ್ಕೆ ಅವಕಾಶ ನೀಡಲಾಗಿದೆ. ಈ ಪ್ರಾಧಿಕಾರಕ್ಕೆ ಅಂತಿಮ ಇತ್ಯರ್ಥ ಬರುವವರೆಗೆ ಐದು ವರ್ಷಗಳ ಅವಧಿಯನ್ನು ಕೇಳಲಾಗಿದೆ. ಐದು ವರ್ಷಗಳ ಅವಧಿಯ ನಂತರ ಅಂತರ್‍ರಾಷ್ಟ್ರೀಯ ಉಸ್ತುವಾರಿಯಲ್ಲಿ ಚುನಾವಣೆ ನಡೆಸಲು ಒಂದು ಸ್ವತಂತ್ರ ಚುನಾವಣಾ ಆಯೋಗ ನೇಮಿಸಬೇಕೆಂದು ಎಲ್‌ಟಿಟಿಇ ಬಯಸುತ್ತದೆ. ಈ ಅವಧಿಯಲ್ಲಿ ತೆರಿಗೆ ವಸೂಲಿ ಮಾಡಲು, ಕಾನೂನು-ವ್ಯವಸ್ಥೆ ನಿರ್ವಹಿಸಲು ಮತ್ತು ತನ್ನದೇ ನ್ಯಾಯ ವ್ಯವಸ್ಥೆ ಸ್ಥಾಪಿಸಲು ಈ ಪ್ರಾಧಿಕಾರಕ್ಕೆ ಅಧಿಕಾರ ಬೇಕೆಂದು ಕೇಳಲಾಗಿದೆ. "ಉತ್ತರ-ಪೂರ್ವ ಪ್ರದೇಶಕ್ಕೆ ನ್ಯಾಯ ವ್ಯವಸ್ಥೆಗೆ ಪ್ರತ್ಯೇಕ ಸಂಸ್ಥೆಗಳನ್ನು ಸ್ಥಾಪಿಸಲಾಗುವುದು. ಈ ಸಂಸ್ಥೆಗಳಿಗೆ ನ್ಯಾಯಾಂಗ ಅಧಿಕಾರಗಳನ್ನು ನೀಡಲಾಗುವುದು" ಎಂದು ಈ ದಸ್ತಾವೇಜು ಹೇಳುತ್ತದೆ. ತನ್ನ ಸಶಸ್ತ್ರ ಪಡೆಗಳ ಸ್ಥಾನಮಾನವೇನು ಎಂದು ಎಲ್‌ಟಿಟಿಇ ಹೇಳುವುದಿಲ್ಲ. ಆದರೆ ಪರೋಕ್ಷವಾಗಿ ತನ್ನ ನೌಕಾ ಪಡೆಗಳ ನಿರ್ವಹಣೆಯ ಬಗ್ಗೆ ಹೇಳುತ್ತದೆ. ಉತ್ತರ-ಪೂರ್ವ ಪ್ರದೇಶಕ್ಕೆ ಹೊಂದಿಕೊಂಡ ಸಾಗರ ಸಂಪನ್ಮೂಲಗಳ ಮೇಲೆ ಈ ಪ್ರಾಧಿಕಾರಕ್ಕೆ ಹತೋಟಿಯಿರಬೇಕು, ಅವನ್ನು ನಿಯಂತ್ರಿಸಲು ಅಧಿಕಾರವಿರಬೇಕು ಎಂದು ಈ ದಸ್ತಾವೇಜು ಹೇಳುತ್ತದೆ. ನೌಕಾಪಡೆಯಿಂದ ಮಾತ್ರವೇ ಇದನ್ನು ಮಾಡಲು ಸಾಧ್ಯ.

ಈ ಪ್ರಾಧಿಕಾರ ಮತ್ತು ಶ್ರೀಲಂಕಾ ಸರ್ಕಾರದ ನಡುವೆ ಏನಾದರೂ ವಿವಾದ ಬಂದರೆ ಅದನ್ನು ಚರ್ಚೆ ಅಥವಾ ನಾರ್ವೆಯ ಮಧ್ಯಸ್ಥಿಕೆಯಿಂದ ಪರಿಹರಿಸಲಾಗದಿದ್ದರೆ ಅದನ್ನು ಒಂದು ಮೂವರು ಸದಸ್ಯರ ಪಂಚಾಯ್ತಿಗೆ ವಹಿಸಬೇಕು ಎಂದು ದಸ್ತಾವೇಜು ಹೇಳುತ್ತದೆ. ಈ ನ್ಯಾಯಪಂಚಾಯ್ತಿಯ ಸಮಿತಿಯ ಅಧ್ಯಕ್ಷರ ನೇಮಕದ ಬಗ್ಗೆ ಭಿನ್ನಾಭಿಪ್ರಾಯ ಬಂದರೆ ಅಂತಾರಾಷ್ಟ್ರೀಯ ನ್ಯಾಯಾಲಯ ಅಧ್ಯಕ್ಷರಾಗಿ ಒಬ್ಬ ವ್ಯಕ್ತಿಯನ್ನು ನೇಮಿಸುವಂತೆ ಕೇಳಲಾಗುವುದು ಎಂದು ಎಲ್‌ಟಿಟಿಇ ದಸ್ತಾವೇಜು ಹೇಳುತ್ತದೆ. ಇಂತಹ ವಿವಾದಗಳ ಪರಿಹಾರದಲ್ಲಿ ಶ್ರೀಲಂಕಾದ ಪ್ರಭುತ್ವ ಮತ್ತು ಅದರ ಸಂಸ್ಥೆಗಳ ಪಾತ್ರವೇನೂ ಇರುವುದಿಲ್ಲ. ಎಲ್‌ಟಿಟಿಇ ಪ್ರಸ್ತಾವಗಳು ಒಂದು ಒಕ್ಕೂಟ ರಚನೆಯೊಳಗೆ ಪ್ರಾದೇಶಿಕ ಸ್ವಾಯತ್ತತೆಗೆ ನಕಾರ ಸೂಚಿಸುವಂತಹವು. ಇದು ಪ್ರತ್ಯೇಕ ಪ್ರಭುತ್ವವೊಂದರ ನೀಲ ನಕ್ಷೆ.


ಇಂತಹ ಒಂದು ಪ್ರಸ್ತಾವ ಶ್ರೀಲಂಕಾ ಒಂದು ಐಕ್ಯ ದೇಶವಾಗಿ ಇರಬೇಕೆಂಬ ಬಯಸುವವರಿಗೆಲ್ಲಾ ಆತಂಕ ಮೂಡಿಸುವುದು ಸಹಜವೇ. ವಿಕ್ರಮಸಿಂಗೇ ಸರ್ಕಾರ ಇಂತಹ ಒಂದು ಯೋಜನೆ ಒಡ್ಡಿರುವ ಬೆದರಿಕೆಯ ಬಗೆ ತಲೆಕೆಡಿಸಿಕೊಂಡಂತಿಲ್ಲ. ತನ್ನ ಶಾಂತಿ ಪ್ರಯತ್ನಗಳಿಗೆ ಯುರೋಪಿಯನ್ ಮತ್ತು ಅಮೆರಿಕನ್ ಬೆಂಬಲ ಪಡೆದಿರುವ ಪ್ರಧಾನಮಂತ್ರಿಗಳು ತನ್ನ ಅಧ್ಯಕ್ಷರೊಡಗಿನ ರಾಜಕೀಯ ಸಮರದಲ್ಲಿ ಈ ಪ್ರಮುಖ ಪ್ರಶ್ನೆಯತ್ತ ಗಮನಹರಿಸಿಲ್ಲ.

ಅಮೆರಿಕಾದ ಬೆಂಬಲವೇಕೆ?

ಅಮೆರಿಕಾ ಶಾಂತಿ ಪ್ರಕ್ರಿಯೆಯನ್ನು ಬೆಂಬಲಿಸುವ ಹೆಸರಿನಲ್ಲಿ ಪ್ರಧಾನ ಮಂತ್ರಿಗಳನ್ನು ಬೆಂಬಲಿಸುತ್ತಿದೆ. ಇತ್ತೀಚೆಗೆ ಮುಖ್ಯವಾಗಿ ಸೆಪ್ಟೆಂಬರ್ 11 ರ ನಂತರ ಅಮೆರಿಕಾ ಶ್ರೀಲಂಕಾ ಸನ್ನಿವೇಶದಲ್ಲಿ ಮತ್ತು ಜನಾಂಗೀಯ ತಿಕ್ಕಾಟದಲ್ಲಿ ಮಧ್ಯಪ್ರವೇಶಿಸುವಲ್ಲಿ ಬಹಳ ಆಸಕ್ತಿ ತೋರುತ್ತಿದೆ. ನಾರ್ವೆ ಕೂಡಾ ನಾಟೋ ಕೂಟದ ಭಾಗ ಎಂಬುದನ್ನು ಗಮನಿಸಬೇಕು. ಮಾನವ ಹಕ್ಕುಗಳು ಮತ್ತು ಜನಾಂಗೀಯ ತಿಕ್ಕಾಟಗಳ ಪರಿಹಾರದ ಸಮಸ್ಯೆಗಳಲ್ಲಿ ದೇಶದ ಸಾರ್ವಭೌಮತೆ ಕೂಡಾ ಈ ಪ್ರಶ್ನೆಗಳಿಗಿಂತ ಮೇಲಲ್ಲ ಎಂಬ ಸಿದ್ಧಾಂತವನ್ನು ಅಮೆರಿಕಾ ಮತ್ತು ಕೆಲವು ಯುರೋಪಿಯನ್ ದೇಶಗಳು ಪ್ರತಿಪಾದಿಸುತ್ತಿದ್ದು ಶ್ರೀಲಂಕಾದ ದೇಶೀಯ ಸಮಸ್ಯೆಯನ್ನು ಉಲ್ಬಣಗೊಳಿಸುವಲ್ಲಿ ಈ ಸಿದ್ಧಾಂತವೂ ಕೆಲಸ ಮಾಡುತ್ತಿದೆ.

ಒಕ್ಕೂಟ ವ್ಯವಸ್ಥೆಯೊಳಗೆ ಸ್ವಾಯತ್ತತೆ

ಒಂದು ಒಕ್ಕೂಟ ರಚನೆಯ ಆಧಾರದಲ್ಲಿ ಸ್ವಾಯತ್ತತೆಯನ್ನು ನಿರಾಕರಿಸುವ ಸಿಂಹಳೀ ಸಂಕುಚಿತವಾದಿಗಳ ನಿಲುವು ಮತ್ತು 'ಎರಡು ದೇಶಗಳು, ಒಂದು ಪ್ರಭುತ್ವ' ಎಂದೊಪ್ಪುವ ಎಲ್‌ಟಿಟಿಇಯ ಪ್ರತ್ಯೇಕತಾವಾದಿ ನಿಲುವು - ಇವೆರಡನ್ನೂ ತಿರಸ್ಕರಿಸಬೇಕು. ಸಿಪಿಐ(ಎಂ) ಮತ್ತು ಭಾರತದ ಎಡ ಶಕ್ತಿಗಳು ಸತತವಾಗಿ ತಮಿಳು ಜನತೆಯ ನೈಜ ಹಕ್ಕುಗಳನ್ನು ಮಾನ್ಯ ಮಾಡಬೇಕು ಎಂದು ಪ್ರತಿಪಾದಿಸುತ್ತಾ ಬಂದಿವೆ. ಶ್ರೀಲಂಕಾದ ಆಳುವವರ್ಗಗಳು ದಶಕಗಳ ಕಾಲ ಸಿಂಹಳೀ ಸಂಕುಚಿತವಾದವನ್ನು ತೃಪ್ತಗೊಳಿಸಲು



ಬುತ್ತಿಸುತ್ತಾ ತಮಿಳು ಅಲ್ಪಸಂಖ್ಯಾತರ ಕಾಪ್ರಭುತ್ವದ ಹಕ್ಕುಗಳನ್ನು ನಿರಾಕರಿಸುತ್ತಾ ದಿವೆ. ಈ ಸಮಸ್ಯೆಗೆ ಪರಿಹಾರವನ್ನು ಐಕ್ಯ ಲಂಕಾದ ಚೌಕಟ್ಟಿನೊಳಗೆ ಪ್ರಾದೇಶಿಕ ಯುತ್ತತೆಯನ್ನು ಒಳಗೊಳ್ಳುವ ಮೂಲಕವೇ ಕ್ಕೊಯಬೇಕು. ಹೀಗಾಗಬೇಕಾದರೆ ಒಂದು ಕ್ಕೂಟ ಸ್ವರೂಪದ ಚೌಕಟ್ಟು ಬೇಕು ಮತ್ತು ಗಿರುವ ಪ್ರಭುತ್ವ ಹಾಗೂ ಸಂವಿಧಾನಿಕ ನೆಯಲ್ಲಿ ಬದಲಾವಣೆಯಾಗಬೇಕು.

ಭಾರತ ಸರ್ಕಾರ ಇತ್ತೀಚೆಗೆ ರನಿಲ್ ಮಸಿಂಗೆ ಭಾರತಕ್ಕೆ ಭೇಟಿ ನೀಡಿದ ಸಂದರ್ಭದ ಟಿ ಹೇಳಿಕೆಯಲ್ಲಿರುವಂತೆ 'ಯಾವುದೇ ನ್ಯಂತರ ಒಪ್ಪಂದ ಅಂತಿಮ ಇತ್ಯರ್ಥದ ಒಂದು ಗ್ರ ಭಾಗವಾಗಿರಬೇಕು ಮತ್ತು ಅದು ಲಂಕಾದ ಐಕ್ಯತೆ ಮತ್ತು ಪ್ರಾದೇಶಿಕ ಸಮಗ್ರತೆಯ ಕಟ್ಟಿನೊಳಗೆ ಇರಬೇಕು" ಎಂಬ ನಿಲುವಿಗೇ ವಾಗಿರುವುದು ಒಳ್ಳೆಯದು.

ಚಂದ್ರಿಕಾ ಕುಮಾರತುಂಗರವರು ಅಧ್ಯಕ್ಷರಾಗಿ 7 ರಲ್ಲಿ ವಾಸ್ತವತೆಯನ್ನು ಮಾನ್ಯ ಮಾಡುವ ಸ್ತಾವಗಳನ್ನು ಮುಂದಿಟ್ಟಿದ್ದರು. 2001 ರಲ್ಲಿ ನ್ನು ಸಾಕಷ್ಟು ದುರ್ಬಲಗೊಳಿಸಿ ಯುನೈಟೆಡ್ ಶನಲ್ ಪಾರ್ಟಿಯ ಸಮ್ಮತಿಯೊಂದಿಗೆ ಂದಿಡಲಾಯಿತು. ತಮಿಳು ಪಕ್ಷಗಳು ಇವನ್ನು ಸ್ಕರಿಸಿದವು. ಶ್ರೀಲಂಕಾದ ಎರಡು ದೊಡ್ಡ ಗಳಾದ ಅಧ್ಯಕ್ಷರ ಶ್ರೀಲಂಕಾ ಫ್ರೀಡಂ ಪಾರ್ಟಿ ತ್ತು ಪ್ರಧಾನಮಂತ್ರಿಗಳ ಯುನೈಟೆಡ್ ನ್ಯಾಶನಲ್ ರ್ಟಿ ಒಕ್ಕೂಟ / ವಿಕೇಂದ್ರೀಕರಣ ಪ್ರಸ್ತಾವಗಳ ಒಂದು ಒಮ್ಮತಕ್ಕೆ ಬಂದರೆ ಮಾತ್ರವೇ ಅದು ದು ಪ್ರಜಾಸತ್ತಾತ್ಮಕ ಪರಿಹಾರಕ್ಕೆ ರವಾಗಬಲ್ಲದು. ಆದರೆ ದುರದೃಷ್ಟವಶಾತ್ ಆಗಿಲ್ಲ.

ಎಲ್‌ಟಿಟಿಇ ಈಗ ತಮಿಳು ಪ್ರದೇಶಗಳಲ್ಲಿ ಬಲ್ಯ ಹೊಂದಿದೆ. ಇತರ ರಾಜಕೀಯ ಗಳನ್ನು ಅದು ನಿರ್ಮೂಲ ಮಾಡಿದೆ. ದಿರುವವರನ್ನು ತಮ್ಮ ಅಡಿಯಾಳಾಗಿ ಡಿದೆ. ಒಂದು ಪ್ರತ್ಯೇಕ ತಮಿಳು ಈಳಂನ ಕಾಟ ತಮಿಳರಿಗೆ ನ್ಯಾಯವನ್ನಾಗಲೀ, ಾನ ಹಕ್ಕುಗಳನ್ನಾಗಲೀ ತಂದಿಲ್ಲ. ಅದರ ಲು ಜನಸಾಮಾನ್ಯರಿಗೆ ಅಪಾಯ ಟಗಳನ್ನು ತಂದಿದೆ. ಅವರ ಬದುಕನ್ನು ವ್ಯಸ್ತಗೊಳಿಸಿದೆ. ಎಲ್‌ಟಿಟಿಇ ಯ ಈಳಂನ ತಿಕೆಯನ್ನು ಕಣ್ಣುಮುಚ್ಚಿ ಬೆಂಬಲಿಸುವ ಳುನಾಡಿನ ಹಲವು ರಾಜಕಾರಣಿಗಳಂತಲ್ಲದೆ ಮತ್ತು ಪ್ರಜಾಪ್ರಭುತ್ವವಾದೀ ಶಕ್ತಿಗಳು ತದ ನೆರೆ ದೇಶವಾದ, ದಕ್ಷಿಣ ಏಶ್ಯಾದಲ್ಲಿ ಜೊತೆಗಾರರಾಗಿರುವ ಶ್ರೀಲಂಕಾದಂತಹ ು ದೇಶದ ವಿಭಜನೆಯ ಅಪಾಯಗಳನ್ನು ತಿಸಬೇಕಾಗುತ್ತದೆ.

ಳೆದ ಒಂದೂವರೆ ವರ್ಷಗಳಲ್ಲಿ ತಿಕ್ಕಾಟಗಳು ರುವುದು ತಮಿಳು ಸಿಂಹಳೀ ಜನತೆ ಳವಾಗಿ ಉಸಿರಾಡುವಂತಾಗಿದೆ. ಈ ಯರ್ುದ್ಧದಲ್ಲಿ 64 ಸಾವಿರ ಜೀವಗಳ ಯಾಗಿದೆ. ಶಾಂತಿಯ ಆಕಾಂಕ್ಷೆ ಬಲವಾಗಿದ್ದು ಕ್ಷರಾಗಲೀ, ಪ್ರಧಾನಮಂತ್ರಿಗಳಾಗಲೀ ಈ ವನೆಯನ್ನು ನಿರ್ಲಕ್ಷಿಸಲು ಸಾಧ್ಯವಿಲ್ಲ. ಂದಲೇ ಇಬ್ಬರೂ ಶಾಂತಿ ಪ್ರಕ್ರಿಯೆ ದುವರೆಯಬೇಕೆಂದು ಒತ್ತಿ ಹೇಳಿದ್ದಾರೆ. ಅದೇ ಗೆ ಎಲ್‌ಟಿಟಿಇ ಉತ್ತರದಲ್ಲಿ ತನ್ನ ಹಿಡಿತವನ್ನು ೊಳಿಸಿದೆ. ಪೂರ್ವದತ್ತ ಅದನ್ನು ವಿಸ್ತರಿಸುತ್ತಿದೆ ದನ್ನೂ ನಿರಾಕರಿಸುವಂತಿಲ್ಲ. ಈ ಎರಡು ತ್ತು ಪಕ್ಷಗಳ ನಡುವಿನ ತಿಕ್ಕಾಟದಿಂದ ಟಿಟಿಇಗಷ್ಟೇ ಪ್ರಯೋಜನವಾಗುತ್ತದೆ. ಾರ ತುಂಗರಿಗಾಗಲೀ, ವಿಕ್ರಮಸಿಂಗೆ ರಿಗಾಗಲೀ ಬೇರೆ ದಾರಿಯಿಲ್ಲ. ಅವರು ಕತೆಗಳನ್ನು ನಡೆಸಲು ಒಂದು ರಂಗ ಡಿಸಿಕೊಳ್ಳಬೇಕು ಅಥವಾ ಒಂದು ಹೊಸ ದೇಶ ಪಡೆಯಲು ಸಂಸತ್ತಿಗೆ ಬೇಗನೇ ವಣೆಗಳನ್ನು ನಡೆಸಬೇಕು.

ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲೆ ಹಕ್ಕುಚ್ಯುತಿ ಎಂಬ ನಿರಂಕುಶ ಹಲ್ಲೆ

ಜನತೆಯ ಪ್ರಜಾಸತ್ತಾತ್ಮಕ ಹಕ್ಕುಗಳ ಮೇಲೆ ಧಾಳಿ ನಡೆಸುತ್ತಾ ಬಂದಿರುವ ಜಯಲಲಿತಾ ಸರ್ಕಾರ ಪತ್ರಿಕಾ ಸ್ವಾತಂತ್ರ್ಯದ ಮೇಲೆ ನಡೆಸಿದ ನಗ್ನ ಆಕ್ರಮಣ 'ದ ಹಿಂದೂ' ಪ್ರಕರಣ

ತಮಿಳುನಾಡಿನ ಮುಖ್ಯಮಂತ್ರಿ ಮತ್ತೊಮ್ಮೆ ತಮ್ಮ ನಿರಂಕುಶ ಅಧಿಕಾರದ ಕರಾಳ ದರ್ಶನ ತೋರಿಸಿದ್ದಾರೆ. ಖ್ಯಾತ 'ಹಿಂದೂ' ಹಾಗೂ 'ಮುರಸೋಳಿ' ಪತ್ರಿಕೆಗಳ ಹಿರಿಯ ಸಂಪಾದಕ ವರಿಷ್ಟರಿಗೆ ವಿಧಾನ ಸಭಾಧ್ಯಕ್ಷರು 15 ದಿನಗಳ ಕಾರಾಗೃಹವಾಸದ 'ಶಿಕ್ಷೆ' ವಿಧಿಸುವ ಮೂಲಕ ತಮಿಳುನಾಡಿನ ರಾಜಕೀಯ ಇತಿಹಾಸದಲ್ಲಿ ಬರ್ಬರ ಅಧ್ಯಾಯವೊಂದನ್ನು ಆರಂಭಿಸಿದ್ದಾರೆ.

ಅಖಿಲ ಭಾರತ ಅಣ್ಣಾ ದ್ರಾವಿಡ ಮುನ್ನೇತ್ರ ಕಳಗಂ ಹಾಗೂ ಅದರ ನಾಯಕಿಯವರ ಪ್ರಜಾಪ್ರಭುತ್ವ ವಿರೋಧಿ ಕ್ರಮಗಳು ಹೊಸತೇನಲ್ಲ. ನಾಗರಿಕ ಹಕ್ಕುಗಳ ದಮನ ಹಾಗೂ ಮೂಲಭೂತ ಹಕ್ಕುಗಳ ನಿರ್ಲಜ್ಜ ಉಲ್ಲಂಘನೆ ತಮಿಳು ನಾಡಿನಲ್ಲಿ ದಿನನಿತ್ಯ ಎಂಬಂತೆ ನಡೆಯುತ್ತಿವೆ. ಸರ್ಕಾರಿ ನೌಕರರ ನ್ಯಾಯಯುತ ಮುಷ್ಕರವನ್ನು ಹತ್ತಿಕ್ಕಲು ಸರ್ಕಾರ ತೆಗೆದುಕೊಂಡ ದಮನಕಾರಿ ಕ್ರಮಗಳು ಆ ಸರ್ಕಾರದ ಫ್ಯಾಸಿಸ್ಟ್ ಪ್ರವೃತ್ತಿಗೊಂದು ಜ್ವಲಂತ ನಿದರ್ಶನ.

ಅಸೀಮ ಅಸಹನೆಯ ನಿರಂಕುಶ ಪ್ರಭುತ್ವದ ಪ್ರತೀಕದಂತಿರುವ ತಮಿಳುನಾಡಿನ ಸರ್ಕಾರಕ್ಕೆ, ಜನ ಸಾಮಾನ್ಯರ ಬಗ್ಗೆಯಾಗಲಿ ಅಥವಾ ಅವರನ್ನು ಅತೀವವಾಗಿ ಕಾಡುತ್ತಿರುವ ಹತ್ತು ಹಲವು ಗಂಭೀರ ಸಮಸ್ಯೆಗಳ ಬಗ್ಗೆಯಾಗಲಿ, ಯೋಚಿಸಲೂ ಪುರಸೊತ್ತಿಲ್ಲ. ಅದರ ಶಕ್ತಿ ಸಾಮರ್ಥ್ಯಗಳೆಲ್ಲಾ ಏನಿದ್ದರೂ, ವಿಪಕ್ಷಗಳ ಮೇಲೆ, ಜನಪರ ಚಳುವಳಿಗಳ ಮೇಲೆ ಗದಾ ಪ್ರಹಾರ ನಡೆಸುವುದಕ್ಕೆ ಮಾತ್ರ ಮೀಸಲು. ದಮನಕಾರಿ ಕ್ರಮಗಳು ಹಾಗೂ ಬರ್ಬರ ದಾಳಿಗಳೇ ಅದರ ದಿನನಿತ್ಯದ ಕಾಯಕಗಳಾಗಿವೆ. ಪತ್ರಿಕಾ ಮಾಧ್ಯಮದ ವಿರುದ್ಧದ ಸೇಡಿನ ಕ್ರಮಗಳೂ ಸಹ, ಪ್ರಜಾಪ್ರಭುತ್ವ ವಿರೋಧಿ ಪ್ರವೃತ್ತಿಗೆ ನಿದರ್ಶನ.

ತಮಿಳುನಾಡು ವಿಧಾನಸಭೆಯ 'ಹಕ್ಕುಚ್ಯುತಿ' ಎಸಗಲಾಗಿದೆ ಎಂಬ ಆರೋಪ ಹೊರಿಸಿ, ನಾಡಿನ ಅತ್ಯಂತ ಹಿರಿಯ ಹಾಗೂ ಪ್ರತಿಷ್ಟಿತ ಪತ್ರಿಕೆಗಳಲ್ಲಿ ಒಂದಾದ 'ಹಿಂದೂ'ವಿನ ಮೇಲೆ ಕ್ರಮತೆಗೆದುಕೊಳ್ಳಲಾಗಿದೆ. ದಿನಾಂಕ 25.4.03ರ ಸಂಪಾದಕೀಯ ಲೇಖನ ಹಾಗೂ ಸದನದಲ್ಲಿ ತಮಿಳುನಾಡಿನ ಮುಖ್ಯಮಂತ್ರಿಯವರ ವರ್ತನೆ ಮತ್ತು ಅವರಾಡಿದ ಮಾತುಗಳ ವರದಿಗಳು, ವಿಧಾನಸಭೆಯ ಹಕ್ಕು ಬಾಧ್ಯತಾ ಸಮಿತಿಯ ಕೆಂಗಣ್ಣಿಗೆ ಗುರಿಯಾದವು. ಸಮಿತಿಯಲ್ಲಿ ನೆಪಮಾತ್ರಕ್ಕೆ ವಿಪಕ್ಷ ಸದಸ್ಯರನ್ನು ಸೇರಿಸಿಕೊಂಡಿದ್ದರೂ, ಅವರ ಅಭಿಪ್ರಾಯ, ಸಲಹೆಗಳನ್ನು ಗಣನೆಗೆ ತೆಗೆದುಕೊಳ್ಳಲಿಲ್ಲ. ಆಡಳಿತ ಪಕ್ಷದ ಹಿಡಿತದಲ್ಲೇ ಇದ್ದ ಸಮಿತಿ ಹಕ್ಕು ಚ್ಯುತಿ ಆಗಿದೆ ಎಂದು ನಿರ್ಣಯಿಸಿಯೇ ಬಿಟ್ಟಿತು. ವಿಧಾನ ಸಭಾಧ್ಯಕ್ಷರು ತಡಮಾಡದೆ ಹದಿನೈದು ದಿನಗಳ ಕಾರಾಗೃಹ ಶಿಕ್ಷೆ ವಿಧಿಸಿಯೂ ಬಿಟ್ಟರು.

ಇಷ್ಟಕ್ಕೂ 'ಹಿಂದೂ' ವಿನ ಸಂಪಾದಕೀಯದಲ್ಲಿ ಯಾವುದೇ ಆಕ್ಷೇಪಾರ್ಹ ಅಂಶಗಳು ಇರಲಿಲ್ಲ. ವಾಸ್ತವವಾಗಿ, ಮುಖ್ಯಮಂತ್ರಿ ಮತ್ತು ಅವರ ಪಕ್ಷದ ಸದಸ್ಯರು ಸದನದಲ್ಲಿ ತೋರುತ್ತಿರುವ ವರ್ತನೆಗೆ ಆ ಲೇಖನ ಕನ್ನಡಿಯಾಗಿತ್ತು. ಜನರ ನೂರೆಂಟು ಸಮಸ್ಯೆಗಳಿಗೆ ಮುಖವಾಣಿಯಾಗಲು ವಿಪಕ್ಷ ಸದಸ್ಯರು ಮಾಡುತ್ತಿದ್ದ ಪ್ರಯತ್ನಗಳಿಗೆಲ್ಲಾ ಸಲ್ಲದ ವಿಘ್ನಗಳನ್ನು ತಂದೊಡ್ಡಲಾಗುತ್ತಿತ್ತು. ಆಡಳಿತ ಪಕ್ಷದ ಬಹುಮತದ ಶಕ್ತಿಯನ್ನು ವಿಪಕ್ಷ ಸದಸ್ಯರ ಬಾಯಿ ಕಟ್ಟಿ ಹಾಕಲು ಪ್ರಯೋಗಿಸಲಾಗುತ್ತಿತ್ತು. ಸದನದ ಹೊರಗೆ ನಡೆವ ಜನಪರ ಚಳುವಳಿಗಳ ಉಗ್ರದಮನ. ಸದನದ ಒಳಗೆ ಮಾತನಾಡಲೂ ಸಹಾ ಆಗದಂತಹ ವಿಷಯ ಪರಿಸ್ಥಿತಿ. ಇದರ ಮೂಲಕ ತನ್ನ ನಿರಂಕುಶ ಅಧಿಕಾರವನ್ನು ಎಗ್ಗಿಲ್ಲದೆ ಮುಂದುವರೆಸಬಹುದು ಎಂಬ ಹುನ್ನಾರ ಸರ್ಕಾರದ್ದು.

ವಿಪಕ್ಷ ಸದಸ್ಯರು ಸದನದಲ್ಲಿ ಮಾತನಾಡಲು ಪ್ರಾರಂಭಿಸಿದ ಕೂಡಲೇ ಆಡಳಿತ ಸದಸ್ಯರಿಂದ ಕೂಗಾಟ, ಆರಚಾಟ. ಆ ಅಬ್ಬರದಲ್ಲಿ ವಿಪಕ್ಷ ಸದಸ್ಯರ ಮಾತುಗಳು ಮುಳುಗಿ ಹೋಗುವ ಪರಿಸ್ಥಿತಿ. ಮೇಲಾಗಿ ಸ್ವತಃ ಮುಖ್ಯಮಂತ್ರಿಯವರಿಂದ ಪ್ರತಿ ಧಾಳಿ ಬೇರೆ. ತೀವ್ರ ವಾಗ್ಪ್ರಹಾರದ ಮೂಲಕ ವಿಪಕ್ಷ ಸದಸ್ಯರ ತೇಜೋವಧೆ ಮಾಡಿ ಅವರ ಬಾಯಿ ಮುಚ್ಚಿಸುವ ಸತತ ಪ್ರಯತ್ನವನ್ನೇ ಆಕೆ ನಡೆಸುತ್ತಿದ್ದರು. ಇಂತಹ ಸಂದರ್ಭಗಳಲ್ಲಿ ಆಕೆ ಬಳಸುವ ಭಾಷೆ ಮತ್ತು ಮಾತಿನ ಧಾಟಿಯನ್ನೇ, ಹಿಂದೂವಿನ ವರದಿಗಳು ಮತ್ತು ಸಂಪಾದಕೀಯ ಉಲ್ಲೇಖಿಸಿದ್ದುದು. ಆಕೆಯ ವರ್ತನೆ ಮತ್ತು ಮಾತುಗಳನ್ನು ಕುರಿತಾಗಿ ಬಳಸಿದ ಪದಗಳು (ಉದಾಹರಣೆಗೆ 'ಸಿಡಿಮಿಡಿಗೊಂಡ', 'ರೋಷತಪ್ತ', 'ಕಟುನಿಂದೆ' 'ತೀವ್ರ ಖಂಡನೆ' 'ಸಹನೆ ಕಳೆದುಕೊಂಡ' ಇತ್ಯಾದಿ ಇತ್ಯಾದಿ) ವಾಸ್ತವಕ್ಕೆ ಕನ್ನಡಿ ಹಿಡಿದಿದ್ದರೂ ಸಹಾ, ಸದನದ ಹಕ್ಕುಬಾಧ್ಯತಾ ಸಮಿತಿ ಅಂತಹ ಪದಗಳು ಸದನದ 'ಹಕ್ಕುಚ್ಯುತಿ' ಎಸಗಿವೆ ಎಂಬ ನಿರ್ಧಾರಕ್ಕೆ ಬಂದೇ ಬಿಟ್ಟಿತು. 'ಮುರಸೋಳಿ' ಪತ್ರಿಕೆಯ 'ಅಪರಾಧ' ವೆಂದರೆ 'ಹಿಂದೂ' ಲೇಖನದ ತಮಿಳು ಭಾಷಾಂತರವನ್ನು ತನ್ನ ಪತ್ರಿಕೆಯಲ್ಲಿ ಪ್ರಕಟಿಸಿದ್ದು. ಹಕ್ಕುಚ್ಯುತಿಯ ಪ್ರಶ್ನೆ ಏಳುವುದು ಸದನದ ಘನತೆಗೆ ಕುಂದು ಉಂಟಾದ ಸಂದರ್ಭದಲ್ಲಿ ಮಾತ್ರ. ಅಧಿಕಾರದಲ್ಲಿರುವವರ ದುರ್ವರ್ತನೆಯನ್ನು ಟೀಕಿಸುವುದಾಗಲಿ ಅಥವಾ ಅಂತಹ ದುರ್ವರ್ತನೆಯ ವಾಸ್ತವಿಕ ವರದಿಯಾಗಲಿ ಹಕ್ಕುಚ್ಯುತಿಯ ವ್ಯಾಪ್ತಿಗೆ ಬರುವುದಿಲ್ಲ. ಟೀಕೆ ಮತ್ತು ವಿಮರ್ಶೆ ಮಾಡುವ ಹಕ್ಕು ಪ್ರಜಾಪ್ರಭುತ್ವದ ಚೌಕಟ್ಟಿನಲ್ಲಿಯೇ ಅಂತರ್ಗತವಾದದ್ದು. ಅಂತಹ ಹಕ್ಕುಗಳನ್ನು ದಮನ ಮಾಡಲು ಅಥವಾ ಕಸಿಯಲು ಮಾಡಿದ ಪ್ರಯತ್ನಗಳೆಲ್ಲಾ ಈವರೆಗೆ ನಿಷ್ಫಲವಾಗಿವೆ. ಪ್ರಸಕ್ತ ಪ್ರಯತ್ನ ಕೂಡಾ ಅದೇ ರೀತಿ ಮಣ್ಣುಗೂಡಲಿದೆ.



'ಹಿಂದೂ' ಪತ್ರಿಕೆ ಸಿಬ್ಬಂದಿಗಳ ಮನೆ ಅತಿಕ್ರಮ ಪ್ರವೇಶ ನೌಕರರನ್ನು ತಡೆ ವಿಚಾರಣೆಗೊಳಪಡಿಸುವ ಬೆದರಿಕೆ ಹಾಕುವ ಇತ್ಯಾದಿಗಳನ್ನು ಅಂಕೆಯಿಲ್ಲದೆ ಮುಂದುವರಿಸಿತು. 'ಹಿಂದೂ' ಸಂಪಾದಕರು ಕೇಂದ್ರ ಭದ್ರತಾ ಪಡೆಯ ನೆರವನ್ನು ಬಯಸಬೇಕಾದ ಪರಿಸ್ಥಿತಿ ಬಂದಿತ್ತು. ಕೇಂದ್ರ ಸರ್ಕಾರ ಈ ಮನವಿಯನ್ನು ಪುರಸ್ಕರಿಸಿತ್ತು ಕೂಡಾ. ಪರಿಸ್ಥಿತಿ ಬಿಗಡಾಯಿಸುತ್ತಿದೆ ಎಂಬುದನ್ನು ಗ್ರಹಿಸಿದ ಜಯಲಲಿತಾ ನ್ಯಾಯಾಲಯದ ಆದೇಶವನ್ನು ಪಾಲಿಸುವುದಾಗಿ ಬಹಿರಂಗವಾಗಿ ಸಾರಬೇಕಾಯಿತು.

ಪ್ರಜಾಪ್ರಭುತ್ವದ ಮೌಲ್ಯಗಳನ್ನು ಎಗ್ಗಿಲ್ಲದೆ ಧಿಕ್ಕರಿಸುವುದು ತಮಿಳುನಾಡಿನ ಮುಖ್ಯಮಂತ್ರಿಯ ಚಾಳಿಯಾಗಿಬಿಟ್ಟಿದೆ. ತಾನು ಏನು ಮಾಡಿದರೂ ನಡೆಯುತ್ತದೆ ಎಂಬ ದರ್ಪ ಆಕೆಯ ತಲೆಗೇರಿದೆ. ಅಧಿಕಾರಮದದಿಂದ ಆಕೆ ಬೇಕಾಬಿಟ್ಟಿಯಾಗಿಯೇ ವರ್ತಿಸುತ್ತಾರೆ. ಇಂತಹ ನಡೆವಳಿಕೆಯನ್ನು ಪ್ರಸ್ತಾಪಿಸುವ ಪತ್ರಿಕೆಗಳ ಮೇಲೆ ಗದಾ ಪ್ರಹಾರ ನಡೆಯುತ್ತದೆ. 2001ರಲ್ಲಿ ಅಧಿಕಾರಕ್ಕೆ ಬಂದಂದಿನಿಂದ ಜಯಲಲಿತಾ ಸರ್ಕಾರ ಹತ್ತು ಹಲವಾರು ಪತ್ರಿಕೆಗಳ ವಿರುದ್ಧ ಸೇಡಿನ ಕ್ರಮಗಳ ಸರಮಾಲೆಯನ್ನೇ ಕೈಗೊಂಡಿದೆ. 'ಹಿಂದೂ' ಪತ್ರಿಕೆಯ ಮೇಲೆ ಈಗಾಗಲೇ 16 ಮೊಕದ್ದಮೆಗಳನ್ನು ಹೂಡಲಾಗಿದೆ. 125 ವರ್ಷಗಳ ಧೀಮಂತ ಪತ್ರಿಕೋದ್ಯಮದ ಇತಿಹಾಸವಿರುವ 'ಹಿಂದೂ' ಇದರಿಂದ ಎದೆಗುಂದಿಲ್ಲ. ಬದಲಾಗಿ ವಸ್ತುನಿಷ್ಟತೆ, ಸತ್ಯ ಪರಿಪಾಲನೆ, ಮಾಧ್ಯಮ ಸ್ವಾತಂತ್ರ್ಯಗಳಲ್ಲಿ ತನಗಿರುವ ವಿಶ್ವಾಸವನ್ನು ಮತ್ತು ಅವುಗಳ ಬಗ್ಗೆ ತನಗಿರುವ ಬದ್ಧತೆಯನ್ನು ಮತ್ತೊಮ್ಮೆ ನಿಖರವಾದ ಮಾತುಗಳಲ್ಲಿ ಖಚಿತಪಡಿಸಿದೆ.

'ಹಿಂದೂ' ಪತ್ರಿಕೆ ವಿವಾದ ಮತ್ತು ಜಯಲಲಿತಾ ಸರ್ಕಾರದ ಸೇಡಿನ ರಾಜಕಾರಣ


'ಹಿಂದೂ' ಮೇಲಿನ ಧಾಳಿ ಕೇವಲ ಒಂದು ಪತ್ರಕೆಯ ಮೇಲಿನ ಧಾಳಿ ಮಾತ್ರವೇ ಅಲ್ಲ. ಅದು ಪತ್ರಿಕಾ ಸ್ವಾತಂತ್ರ್ಯ ಮತ್ತು ವಾಕ್ ಸ್ವಾತಂತ್ರ್ಯದಂತಹ ಮೂಲಭೂತ ಹಕ್ಕುಗಳ ಮೇಲೆಯೇ ನಡೆಸಿರುವ ಧಾಳಿ. ಆಡಳಿತ ಸೂತ್ರ ವಹಿಸಿಕೊಂಡಿರುವ ಪ್ರಜಾಪ್ರತಿನಿಧಿಯೊಬ್ಬರ ಉಚಿತವಲ್ಲದ ವರ್ತನೆ ಹಾಗೂ ಮಾತುಗಳ ವಾಸ್ತವಿಕ ವರದಿಯೊಂದು ಅತ್ಯಂತ ದಮನಕಾರಿ ಪ್ರತೀಕಾರಾತ್ಮಕ ಕ್ರಮಗಳಿಗೆ ಕಾರಣವಾಗಿರುವುದು ಇದೇ ಮೊದಲೇನಲ್ಲ. ನಿರಂಕುಶತೆ ಮತ್ತು ಸರ್ವಾಧಿಕಾರಗಳು ಯಾವುದೇ ರೀತಿಯ ವಿರೋಧವನ್ನು, ಟೀಕೆಯನ್ನು ಸಹಿಸಲಾರವು. ತಮಿಳುನಾಡು ಸರ್ಕಾರ ಇಂತಹ ನಿರಂಕುಶ ಸರ್ವಾಧಿಕಾರದ ಪ್ರವೃತ್ತಿಯನ್ನು ಪದೇ ಪದೇ ಪ್ರದರ್ಶಿಸುತ್ತಿದೆ.

ಈ ನಡುವೆ ಸರ್ವೋಚ್ಛ ನ್ಯಾಯಾಲಯ ಸಭಾಧ್ಯಕ್ಷರ ಆದೇಶಕ್ಕೆ ತಡೆಯಾಜ್ಞೆ ನೀಡಿದೆ. ಆದಾಗ್ಯೂ, ತಮಿಳು ನಾಡಿನ ಪೊಲೀಸ್ ವ್ಯವಸ್ಥೆ

ಜನರಿಂದ ಪಡೆದ ಅಧಿಕಾರದ ದುರುಪಯೋಗ ಮತ್ತು ಅಂತಹ ಅಧಿಕಾರವನ್ನು ನಿರಂಕುಶವಾಗಿ ಚಲಾಯಿಸುವ ಪ್ರವೃತ್ತಿಯನ್ನು ಪ್ರಜಾಪ್ರಭುತ್ವ ಎಂದಿಗೂ ಸಹಿಸದು. ತಮಿಳುನಾಡು ಸರ್ಕಾರದ ಸೇಡಿನ ಕ್ರಮಗಳನ್ನು ವಿರೋಧಿಸಿ ದೇಶಾದ್ಯಂತ ಭುಗಿಲೆದ್ದಿರುವ ಪ್ರತಿಭಟನಾ ಕಾರ್ಯಕ್ರಮಗಳು ಇದಕ್ಕೆ ಸಾಕ್ಷಿ. ಸಾರ್ವತ್ರಿಕ ಖಂಡನೆಗೆ ಗುರಿಯಾಗಿದ್ದರೂ ಸಹ, ಈ ಸರ್ಕಾರ 'ಹಿಂದೂ' ವಿರುದ್ಧ ಮತ್ತೊಂದು ಮೊಕದ್ದಮೆ ಹೂಡಿದೆ.

ನ್ಯಾಯಾಲಯ ಈಗಾಗಲೇ ಮಧ್ಯ ಪ್ರವೇಶ ಮಾಡಿದೆ. ಈ ನಡುವೆ ಮೂಲಭೂತ ಹಕ್ಕುಗಳ, ನಾಗರಿಕ ಹಕ್ಕುಗಳ ಮತ್ತು ಪ್ರಜಾಪ್ರಭುತ್ವದ ಮೇಲಿನ ದಾಳಿಯನ್ನು ಹಿಮ್ಮೆಟ್ಟಿಸುವ ಜವಾಬ್ದಾರಿ ಜನತೆಯ ಮೇಲಿದೆ. ಈ ಹಕ್ಕುಗಳನ್ನು ಕಸಿಯಬಯಸುವ ಶಕ್ತಿಗಳಿಗೆ ಸರಿಯಾದ ರಾಜಕೀಯ ಪಾಠವನ್ನು ಕಲಿಸಲೇಬೇಕಾಗಿದೆ.

ಎಂ. ರತ್ನಾಕರ ಶೆಣೈ



ಹುತಾತ್ಮರೇ.... ನಿಮ್ಮ ಕನಸುಗಳನ್ನು ನಾವು ನನಸಾಗಿಸುತ್ತೇವೆ

ಉಜ್ವಲ ದೇಶಪ್ರೇಮದ ಸ್ಪೂರ್ತಿ ಎಲ್ಲೆಲ್ಲೂ

ಅಪ್ರತಿಮ ಕ್ರಾಂತಿಕಾರಿಯ ನಾಡು ಪಂಜಾಬ್‌ನ ಅಮೃತಸರದಲ್ಲಿ ಜರುಗಿದ ಡಿವೈಎಫ್ಐ ರಾಷ್ಟ್ರ ಸಮ್ಮೇಳನ ಭಾರತದ ಯುವ ಆಂದೋಲನಕ್ಕೆ ಹೊಸ ತಿರುವು ನೀಡಲು ನಿರ್ಧರಿಸಿತು. ಜಾಗತೀಕರಣ-ಉದಾರೀಕರಣದ ಆರ್ಥಿಕ-ಸಾಂಸ್ಕೃತಿಕ ಧಾಳಿಗಳನ್ನು, ಕೋಮುವಾದದ ಅಪಾಯಗಳನ್ನು ಗುರುತಿಸಿ, ಸಾಮ್ರಾಜ್ಯಶಾಹಿ ವಿರುದ್ಧ ದೇಶಪ್ರೇಮಿ ಆಂದೋಲನ ಇನ್ನೂ ಪ್ರಬಲಗೊಳಿಸಿ ಬೆಳೆಸಲು ನಿರ್ಧರಿಸಿತು. ಈ ಸಮ್ಮೇಳನದ ಕಲಾಪಗಳ ಸ್ಪೂರ್ತಿಯುತ ವರದಿ

"ನನ್ನ ತಾಯ್ನಾಡಿಗಾಗಿ ಸಾಯುವಂತಹ ಅವಕಾಶ ಸಿಕ್ಕಿರುವುದು ನನಗೆ ದೊರೆತಿರುವ ಅತಿದೊಡ್ಡ ಗೌರವವೆಂದು ನಾನು ಭಾವಿಸುತ್ತೇನೆ.

ಹುತಾತ್ಮ ಉದಾಮ್‌ಸಿಂಗ್ ತನನ್ನು ಲಂಡನ್ನಿನಲ್ಲಿ ಬ್ರಿಟೀಷರು ಗಲ್ಲಿಗೇರಿಸುವ ಮುನ್ನ ಹೇಳಿದ ಮಾತುಗಳಿವು. 1919 ಏಪ್ರಿಲ್ 13 ರಂದು ಅಮೃತಸರ್‌ದ ಜಲಿಯನ್ ವಾಲಾಬಾಗ್‌ನಲ್ಲಿ ನಿಶಸ್ತ್ರಧಾರಿಗಳಾಗಿ ಶಾಂತಿಯುತ ಪ್ರತಿಭಟನೆ ನಡೆಸುತ್ತಿದ್ದ ಸುಮಾರು 2000 ಹೋರಾಟಗಾರರ ಮೇಲೆ ಜನರಲ್ ಡಯಾರ್ ನಿರ್ದಾಕ್ಷಿಣ್ಯವಾಗಿ ಗುಂಡಿನ ಮಳೆ ಸುರಿಸಿ ಮಾರಣ ಹೋಮ ನಡೆಸಿದ್ದಕ್ಕೆ ಪ್ರತಿಯಾಗಿ, ಯುವಕ ಉದಾಮ್‌ಸಿಂಗ್ ಅಂದೇ ಜನರಲ್ ಡಯಾರ್‌ನನ್ನು ಮುಗಿಸಲು ಪ್ರತಿಜ್ಞೆ ಮಾಡಿದ್ದ ಆದರೆ ಆ ಕೆಲಸ ಪೂರ್ಣಗೊಳಿಸಿದ್ದು 1939ರಲ್ಲಿ ಅದೂ ಜನರಲ್ ಡಯಾರ್ ನಿವೃತ್ತನಾಗಿ ಲಂಡನ್‌ಗೆ ಹೋದಾಗ ಅಲ್ಲಿಗೂ ವೇಷ ಮರೆಸಿಕೊಂಡು ಹೋದ ಉದಾಮ್‌ಸಿಂಗ್ ಕೊನೆಗೂ ತಾಯ್ನಾಡಿಗಾಗಿ ತಾನು ಮಾಡಿದ ಪ್ರತಿಜ್ಞೆಯನ್ನು ಪೂರೈಸಿದ್ದ!

ಅದೊಂದು ನವೆಂಬರ್ 6 ರ ಮುಂಜಾನೆ ಶಾಲೆಗೆ ಹೋಗಬೇಕಾಗಿದ್ದ ಭಗತ್‌ಸಿಂಗ್ ನೇರವಾಗಿ ಜಲಿಯನ್ ವಾಲಾಬಾಗ್‌ಗೆ ಬಂದು ನೆತ್ತರಿಂದ ನೆಂದಿದ್ದ ರಕ್ತ ಸಿಕ್ತ ಮಣ್ಣನ್ನು ತನ್ನ ಊಟದ ಡಬ್ಬಿಯಲ್ಲಿ ಹಾಕಿಕೊಂಡಿದ್ದನೋ ಆ ನೆಲದಲ್ಲಿ ಆಕಾಶದೆತ್ತರದ ಹುತಾತ್ಮರ ಚೌಕದೆದುರು ಸಹಸ್ರಾರು ಯುವಜನರು, ಸ್ವಾತಂತ್ರ್ಯ ಹೋರಾಟಗಾರರು ಒಂದಾಗಿ ಸೇರಿ ಒಕ್ಕೊರಲಿನ ಘೋಷಣೆಯನ್ನು ಕೂಗಿದರು. ಓ ಹುತಾತ್ಮರೇ ನಾವು ನಿಮ್ಮ ಕನಸುಗಳನ್ನು ನನಸಾಗಿಸುತ್ತೇವೆ. ದೇಶದ ಉದ್ದಗಲಗಳಿಂದ ಧಾವಿಸಿದ್ದ ಸುಮಾರು ಒಂದು ಸಾವಿರದಷ್ಟು ಪ್ರತಿನಿಧಿ ವೀಕ್ಷಕರು ಡಿ.ವೈ.ಎಫ್.ಐ. 7ನೇ ಅಖಿಲ ಭಾರತ ಸಮ್ಮೇಳನದ ಆರಂಭದ ಮೊದಲು ಜಲಿಯನ್ ವಾಲಾಬಾಗ್ ಹುತಾತ್ಮರಿಗೆ ಭಾವಪೂರ್ಣ ನಮನ ಸಲ್ಲಿಸಿದರು.

ಜಲಿಯನ್ ವಾಲಾಬಾಗ್ ಹುತಾತ್ಮರಿಗೊಂದು ಭಾವಪೂರ್ಣ ಶ್ರದ್ಧಾಂಜಲಿ

ಸಮ್ಮೇಳನದ ಅಂಗವಾಗಿ 1980 ರಲ್ಲಿ ಪ್ರಥಮ ಸಮ್ಮೇಳನ ನಡೆದ ಲೂದಿಯಾನದಿಂದ ಹೊರಟಿದ್ದ ಜಾಥಾವನ್ನು ಡಿವೈಎಫ್ಐ ಪ್ರ.ಕಾರ್ಯದರ್ಶಿ ಶ್ವೇತಪತಾಕೆಯನ್ನು ಸ್ವೀಕರಿಸುವ ಮೂಲಕ ಇದೇ ಸ್ಥಳದಲ್ಲಿ ಸ್ವಾಗತಿಸಿದರು.

ಈ ಶ್ರದ್ಧಾಂಜಲಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಸ್ವಾತಂತ್ರ್ಯ ಹೋರಾಟಗಾರ್ತಿ ಕ್ಯಾಪ್ಟನ್ ಲಕ್ಷ್ಮಿ ಸೆಹಗಲ್ ಈ ಘಟನೆ ನಡೆದ ಆ ದಿನಗಳನ್ನು ನೆನಪಿಸುತ್ತಾ, ನಾನು ಸಹಾ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಕರೆಯ ಮೇಲೆ ಇಲ್ಲಿಯ ಹುತಾತ್ಮರಿಗೆ ಸ್ಮಾರಕವನ್ನು ನಿರ್ಮಿಸಲು ಹಣ ಸಂಗ್ರಹದಲ್ಲಿ ತೊಡಗಿಸಿಕೊಂಡಿದ್ದ ಸ್ಪೂರ್ತಿಯನ್ನು, ಅನುಭವವನ್ನು ಹಂಚಿಕೊಂಡರು. ಡಿವೈಎಫ್‌ಐನ ಮಾಜಿ ಅಧ್ಯಕ್ಷರಾದ ಎಂ.ಎ.ಬೇಬಿ, ಸುನಿತ್ ಚೋಪ್ರಾ, ಮಾಜಿ ಪ್ರ.ಕಾರ್ಯದರ್ಶಿ ಮಹಮ್ಮದ್ ಸಲಿಂ, ಎನ್.ಎನ್.ಕೃಷ್ಣದಾಸ್, ಬೃಂದಾಕಾರಾಟ್ ಮೊದಲಾದವರು ಭಾಗವಹಿಸಿದ್ದರು.

ಡಿವೈಎಫ್‌ಐ ಏಳನೇ ಅಖಿಲ ಭಾರತ ಸಮ್ಮೇಳನ





ಮಹಾಂತೇಶ್

ವಾಘಾ ಗಡಿಯಲ್ಲಿ - ಭಾರತ - ಪಾಕ್ ಸ್ನೇಹಕ್ಕೆ ಮುನ್ನಡೆದ ಯುವಜನರು

ಅಮೃತಸರದಿಂದ ಕೇವಲ 28 ಕಿ. ಮಿ. ದೂರದಲ್ಲಿರುವುದೇ 'ವಾಘಾ ಗಡಿ'. ಭಾರತ ಪಾಕಿಸ್ತಾನ ಎರಡು ದೇಶಗಳ ಮಧ್ಯದಲ್ಲಿರುವ ಚೆಕ್‌ಪೋಸ್ಟ್ ಇದು. ಇಲ್ಲೊಂದು ಅನಧಿಕೃತ ಉದ್ರಿಕ್ತ ವಾತಾವರಣವನ್ನು ನಿರ್ಮಾಣ ಮಾಡಲಾಗಿದೆ. ಅಥವಾ ಅಲ್ಲಿರುವ ವ್ಯಾಪಾರಿಗಳು ತಮ್ಮ ಲಾಭಕ್ಕಾಗಿ ಇದನ್ನು ಸೃಷ್ಟಿಸಿದ್ದಾರೆ ಎನ್ನುವುದೇ ಸರಿ. ಇಂತಹ ಪರಿಸ್ಥಿತಿ ಕೇಂದ್ರದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದ ನಂತರ ಇನ್ನೂ ಹೆಚ್ಚಾಗಿದೆ.

ಅಲ್ಲಿರುವ ಪರಿಸ್ಥಿತಿಯಾದರೂ ಎಂತಹದು? ಪ್ರತಿನಿತ್ಯ ಸಾಮಾನ್ಯ ಕ್ರಿಯೆಯಂತೆ ನಡೆಯುತ್ತಿದ್ದ ಎರಡು ದೇಶಗಳ ಬಾವುಟಗಳನ್ನು ಕೆಳಗಿಳಿಸುವ ಪ್ರಕ್ರಿಯೆಗೆ ಇಂದು ವಿಪರೀತ ಬಣ್ಣ ಹಚ್ಚಲಾಗಿದೆ. ಮತ್ತು ಅದನ್ನು ಎರಡು ಕಡೆಗಳಿಂದಲೂ ಉದ್ರೇಕಗೊಳಿಸಲಾಗುತ್ತಿದೆ.

ಸಾಮಾನ್ಯವಾಗಿ ಪ್ರತಿದಿನ ಸಂಜೆ 4.30 ರಿಂದ 5 ಗಂಟೆಯ ಅವಧಿಯಲ್ಲಿ ಭಾರತದ ಗಡಿಭದ್ರತಾ ಪಡೆಯ ಯೋಧರು ಮತ್ತು ಪಾಕಿಸ್ತಾನದ ರೇಂಜರ್ಸ್‌ಗಳು ಎರಡೂ ಕಡೆಗಳಲ್ಲಿಯೂ ತಮ್ಮ ತಮ್ಮ ಗಡಿಗಳಾಚೆ ಸೇನಾ ತಾಲೀಮು ನಡೆಸಿ ಕೊನೆಗೆ ಗಡಿಯಲ್ಲಿ ಸ್ನೇಹದ ಹಸ್ತ ಲಾಘವದ ಮೂಲಕ ಆಚೆ-ಈಚೆ ಇರುವ ಅವರವರ ದೇಶಗಳ ರಾಷ್ಟ್ರಧ್ವಜಗಳನ್ನು ಕೆಳಗಿಳಿಸುವ ಸಂಪ್ರದಾಯ ಮೊದಲಿನಿಂದಲೂ ನಡೆದುಕೊಂಡು ಬಂದಿದೆ. ಆದರೆ ಇಂತಹ ಸಾಮಾನ್ಯ ಪ್ರಕ್ರಿಯೆಯಿಂದು ಎಂತಹ ಸ್ಥಿತಿ ತಲುಪಿದೆ ಎಂದರೆ ಪ್ರತಿನಿತ್ಯ ಸಾವಿರಾರು ಜನರು ಆ ಸಮಯದಲ್ಲಿ ಸೇರುತ್ತಾರೆ. ದೇಶಪ್ರೇಮದ ಹೆಸರಲ್ಲಿ ಎರಡೂ ಕಡೆಗಳಲ್ಲಿ ಅವರು ಉದ್ರೇಕಗೊಳ್ಳುತ್ತಾರೆ. ದೇಶದ ಬಗ್ಗೆ ಎಂದೂ ತಲೆಕೆಡಿಸಿಕೊಳ್ಳದ ಹಲವು ಸಾವಿರ ಜನ ಈ ಸ್ಥಳದಲ್ಲಿ ಇದಕ್ಕಿದ್ದಂತೆ ಉದ್ರೇಕಕ್ಕೊಳಗಾಗುತ್ತಾರೆ. ಪಾಕಿಸ್ತಾನದ ಜನರು ಗಡಿಯಾಚೆಗಿನ ಭಾರತವೇ ನಮ್ಮ ಶತ್ರು ಎಂದು ಭಾವಿಸಿದರೆ, ಗಡಿಯಲ್ಲಿ ನಿಂತ ಈ ಜನ ಪಾಕಿಸ್ತಾನವೇ ನಮ್ಮ ಪರಮ ಶತ್ರು ಎಂಬ ತೀರ್ಮಾನಕ್ಕೆ ಬಂದೇ ಬಿಟ್ಟಿರುತ್ತಾರೆ.

ಒಟ್ಟಿನಲ್ಲಿ ಅಲ್ಲಿ ಶಾಂತಿ, ಸ್ನೇಹಕ್ಕೆ ಯಾವುದೇ ಸ್ಥಳವೇ ಇಲ್ಲ. ನವೆಂಬರ್ 8 ರಂದು ಸಂಜೆ ಅದೇ ಸ್ಥಳದಲ್ಲಿ ಸಮಾವೇಶಗೊಂಡು 'ಶಾಂತಿಯಾತ್ರೆ ನಡೆಸಿದ' ಸಾವಿರಾರು ಪ್ರತಿನಿಧಿಗಳು ಕೂಗುತ್ತಿದ್ದ ಶಾಂತಿ ಸೌಹಾರ್ದತಾ ಘೋಷಣೆಗಳಿಗೆ ಅಲ್ಲಿ ನೆರೆದಿದ್ದ ಕೆಲವರು ತೀವ್ರ ಆಕ್ಷೇಪ ತೆಗೆದರು. ಈಗಾಗಲೇ ವಿವರಿಸಿದಂತೆ ಎರಡೂ ಕಡೆಯ ಸರ್ಕಾರಗಳು ಇಂತಹ ವಾತಾವರಣಕ್ಕೂ ಸೊಪ್ಪು ಹಾಕುತ್ತಿವೆ. ಪ್ರತಿನಿತ್ಯ ಸಾವಿರಾರು ಸಂಖ್ಯೆಯಲ್ಲಿ ಆಗಮಿಸುವ ಪ್ರವಾಸಿಗರಿಗೆ ಯಾವುದೇ ಮೂಲಭೂತ ಸೌಲಭ್ಯಗಳನ್ನು ಒದಗಿಸದ ಸರ್ಕಾರ ಪ್ರವಾಸೋದ್ಯಮ ಇಲಾಖೆ. ತಾಲೀಮು ವೀಕ್ಷಿಸಲು ಮತ್ತು ಈ ಪರಿಯ ದೇಶಪ್ರೇಮವನ್ನು ಉತ್ತೇಜಿಸಲು ಭಾರೀ ದೊಡ್ಡ ಕ್ರೀಡಾಂಗಣ ಮಾದರಿ ಆಸನಗಳನ್ನು ನಿರ್ಮಿಸಿದೆ. ಸಾಲದೆಂಬಂತೆ ಅಲ್ಲಿನ ವ್ಯಾಪಾರಸ್ಥರು 'ಕಿವಿಗಡಚಿಕ್ಕುವ' ರೀತಿಯಲ್ಲಿ ವಿಡಿಯೋ ಟೇಪ್‌ಗಳನ್ನು ಪ್ರದರ್ಶಿಸುತ್ತಾ ಲಾಭ ಮಾಡುತ್ತಿದ್ದಾರೆ.

ಶಾಂತಿ- ಗೆಳೆತನಕ್ಕಾಗಿ ಯುವಜನರ ಶಾಂತಿ ಯಾತ್ರೆ

ಈ ಮಧ್ಯೆ ಪರಸ್ಪರ ದೇಶಗಳ ವಿರುದ್ಧ ಉದ್ರೇಕಕಾರಿ ಘೋಷಣೆ ಕೂಗುವುದೇ ದೇಶಪ್ರೇಮವಲ್ಲ. ನಮ್ಮ ಗಡಿಗಳಾಚೆ ಇರುವ ಶಾಂತಿ, ಸೌಹಾರ್ದತೆ ಬಲಪಡಿಸಬೇಕು. ಭಾರತ-ಪಾಕ್‌ಗಳು ತಮ್ಮಲ್ಲ ಭಿನ್ನಾಭಿಪ್ರಾಯಗಳನ್ನು ದ್ವಿಪಕ್ಷೀಯ ಮಾತುಕತೆಯ ಮೂಲಕವೇ ಬಗೆಹರಿಸಿಕೊಳ್ಳಬೇಕು. ಈ ವಿಷಯದಲ್ಲಿ ಮೂರನೇಯವರ ಮಧ್ಯಸ್ಥಿಕೆಯನ್ನು ತಿರಸ್ಕರಿಸಬೇಕು. ನಮಗೆ ಬೇಕಿರುವುದು ಶಾಂತಿಯೇ ಹೊರತು- ಜಗಳವಲ್ಲ, ಈ ಹಿನ್ನೆಲೆಯಲ್ಲಿ ಭಾರ[illegible] ಪಾಕ್‌ನ ಶಾಂತಿ ಮಾತುಕತೆಗಳು ನಡೆಯಬೇಕು[illegible] ಎಂಬಿತ್ಯಾದಿ ಘೋಷಣೆಗಳು ನವೆಂಬರ್ -8 [illegible] ಸಂಜೆ 'ವಾಘಗಡಿಯಲ್ಲಿ' ಆಕಾಶದೆತ್ತರಕ್ಕೆ ವಿವಿ[illegible] ಭಾಷೆಗಳಲ್ಲಿ ಮೊಳಗಿದವು. ಇದುವರೆಗೂ ಆ[illegible] ಕಡೆಯಿಂದ ಕೇವಲ ಭಾರತ ಮಾತಾ ಕೀ ಜೈ[illegible] ಹಿಂದುಸ್ತಾನ್ ಕೀ ಜೈ ಆಕಡೆಯಿಂದ ಪಾಕಿಸ್ತಾನ್ ಕೀ ಜೈ ಎಂಬಿತ್ಯಾದಿ ಘೋಷಣೆಗಳಿಗೆ ಕಿವಿಯೊಡ್ಡಿ[illegible] ಗಡಿಯಲ್ಲಿನ ಪಾರಿವಾಳಗಳು ಶಾಂತಿಯ[illegible] ಘೋಷಣೆಗಳನ್ನು ಕೇಳಿದೊಡನೆ ಜೀವಬಂದಂ[illegible] ರೆಕ್ಕೆ ಬಿಚ್ಚಿ ಹಾರಿದವು. ನಿರ್ಮಲ ಆಕಾಶದ[illegible] ಸ್ತಬ್ಧಗೊಂಡು ನಿಂತಿದ್ದ ಮೋಡಗಳು ಸುಲಲಿತವಾ[illegible] ಆಕಾಶದ ತುಂಬೆಲ್ಲಾ ಹರಿದಾಡತೊಡಗಿದವು.

ಡಿ.ವೈ.ಎಫ್.ಐ ನ 7ನೇ ಅಖಿಲ ಭಾರ[illegible] ಸಮ್ಮೇಳನದ ಅಂಗವಾಗಿ ಡಿ.ವೈ.ಎಫ್.[illegible] ಕೇಂದ್ರಸಮಿತಿಯು ಅಂದು ವಾಘಗಡಿಯ[illegible] 'ಶಾಂತಿ- ಸ್ನೇಹತ್ಯಕ್ಕಾಗಿ - ಯುವಜನ[illegible]

ಸಮ್ಮೇಳನ ಚುನಾಯಿಸಿದ ನೂತನ ಮುಖಂಡತ್ವ

ಸರ್ವರಿಗೂ ಶಿಕ್ಷಣ- ಸರ್ವರಿಗೂ ಉದ್ಯೋ[illegible] ಸಾಮ್ರಾಜ್ಯಶಾಹಿಯನ್ನು ತಡೆಗಟ್ಟಿ[illegible] ಕೋಮುವಾದವನ್ನು ಹಿಮ್ಮೆಟ್ಟಿಸಿ ಎಂಬ[illegible] ಮಹತ್ವದ ಘೋಷಣೆಯೊಂದಿಗೆ ಸುಮಾರು[illegible] 6 ರಿಂದ 9,2003 ರವರೆಗೆ ಅಮೃತಸರದಲ್ಲಿ ನಡೆದ 7ನೇ ಅಖಿಲ ಭಾರತ ಸಮ್ಮೇಳನವ[illegible] 85 ಜನರ ನೂತನ ಕೇಂದ್ರ ಕಾರ್ಯಕಾರಿ ಸಮಿತಿಯನ್ನು ಸರ್ವಾನುಮತದಿಂದ ಚುನಾಯಿಸಿತು. 85 ಸದಸ್ಯರಲ್ಲಿ ಈ ಬಾರಿ [illegible] ಯುವತಿಯರನ್ನು ಕೇಂದ್ರ ಸಮಿತಿಗ[illegible] ಚುನಾಯಿಸಲಾಯಿತು. ನಂತರ ಕೇಂದ್ರ ಕಾರ್ಯಕಾರಿ ಸಮಿತಿ ಸಭೆ ಸೇರಿ 1[illegible] ಪದಾಧಿಕಾರಿಗಳು, 5 ಸದಸ್ಯರ ಸೆಕ್ರೆಟಾರಿಯೇಟ್‌ನ್ನು ಆಯ್ಕೆ ಮಾಡಿತು. ಕೇಂದ್ರ ಸಮಿತಿಯ ಸದಸ್ಯರಾಗಿ ಕರ್ನಾಟಕದಿಂದ ರಾಜ[illegible] ಕಾರ್ಯದರ್ಶಿ ಕೆ.ಮಹಾಂತೇಶ್ ಪುನರಾಯ್ಕೆ ಹೊಂದಿದರೆ, ಅಧ್ಯಕ್ಷರಾದ ಕೆ.ಎನ್[illegible] ಉಮೇಶ್ ನೂತನವಾಗಿ ಆಯ್ಕೆಗೊಂಡರು[illegible]

ಪದಾಧಿಕಾರಿಗಳು

ಅಧ್ಯಕ್ಷರು
ಕೆ.ಎನ್.ಬಾಲಗೋಪಾಲ್

ಉಪಾಧ್ಯಕ್ಷರು
ಪಿ.ಆರ್.ವಸಂತನ್ (ಕೇರಳ)
ಅಬ್ದುಲ್ ಹಾಯಿ (ಪ.ಬಂಗಾಳ)
ನರೇಶ್ ಜಮಾತಿಯ (ತ್ರಿಪುರ)
ಸಿ.ತರುವೆಟ್ಟೆ (ತಮಿಳುನಾಡು)
ತಿಕಂದರ್ ಸಿಂಗ್(ಹಿಮಾಚಲ ಪ್ರದೇಶ)

ಪ್ರಧಾನ ಕಾರ್ಯದರ್ಶಿ
ತಪಸ್ ಸಿನ್ಹಾ (ಪುನರಾಯ್ಕೆ)

ಸಹಕಾರ್ಯದರ್ಶಿಗಳು
ಅಶಿತಾಂಕರ್ ಗಂಗೂಲಿ (ಪ.ಬ)
ಎ.ಪ್ರದೀಪ್‌ಕುಮಾರ್ (ಕೇರಳ)
ಪಿ.ವಿ.ಶ್ರೀನಿವಾಸ್ (ಆಂಧ್ರ)
ಮೊಹಮದ್ ಯಾಕೂಬ್ (ಜಮ್ಮು-ಕಾಶ್ಮೀರ[illegible]
ತಪಸ್ ದತ್ತಾ (ತ್ರಿಪುರಾ)

ಖಜಾಂಚಿ
ಪುಷ್ಪೇದಾರ್ ತ್ಯಾಗಿ

ಕಾರ್ಯದರ್ಶಿ ಮಂಡಳಿ ಸದಸ್ಯರು
ಮಂಜುರಾಣಿ(ಹರಿಯಾಣ)
ಶೈವೇಂದ್ರ ಸಾಂಗಲಿ (ಮಹಾರಾಷ್ಟ್ರ)
ಉಮೇಶ್‌ಕುಮಾರ್ (ಬಿಹಾರ್)
ಆಶಾನಂದ (ಪಂಜಾಬ್)
ಗಗನ್ ಬರ್ಮಾನ್ (ಅಸ್ಸಾಂ)

ಬಹುಮುಖ ಧಾಳಿ ಎದುರಿಸಲು ಬಲಿಷ್ಟ ಯುವಜನ ಸಂಘಟನೆ

ಹೊಸ ವಿಭಾಗ ವಿಸ್ತರಿಸಲು ವಿಶೇಷ ಒತ್ತು

ಕೆ.ಎಸ್.ಉಮೇಶ್

ಶಾಂತಿಯಾತ್ರೆಯನ್ನು ವ್ಯವಸ್ಥೆಗೊಳಿಸಿತ್ತು. ಗಡಿಯಲ್ಲಿ ನಡೆದ ಸರಳ ಸಮಾರಂಭದಲ್ಲಿ ಡಿ.ವೈ.ಎಫ್.ಐ ಪ್ರಧಾನ ಕಾರ್ಯದರ್ಶಿ, ತಪಸ್ ಸಿನ್ಹಾ, ಅಧ್ಯಕ್ಷರಾದ ಎನ್.ಎನ್.ಕೃಷ್ಣದಾಸ್, ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಕಾಂ.ಹರಿಕಿಶನ್ ಸಿಂಗ್ ಸುರ್ಜಿತ್, ಪಾಲಿಟ್ ಬ್ಯೂರೋ ಸದಸ್ಯರಾದ ಕಾಂ.ಸೀತಾರಾಂ ಯೆಚೂರಿ, ಕ್ಯಾಪ್ಟನ್ ಲಕ್ಷ್ಮಿ ಸೆಹಗಲ್, ಮಹಮ್ಮದ್ ಸಲೀಂ ಮೊದಲಾದವರು ಭಾಗವಹಿಸಿದ್ದರು.

ಕಾಂ.ಸುರ್ಜಿತ್ ಮಾತನಾಡುತ್ತಾ, ಭಾರತ-ಪಾಕ್, ವಿಭಜನೆಯ ಸಂದರ್ಭದಲ್ಲಿ ನಡೆದ ಭೀಕರ ಮಾರಣ ಹೋಮವನ್ನು ನೆನಪಿಸುತ್ತಾ ದೇಶಪ್ರೇಮಿ ಯುವಜನರು ಮತ್ತೆ ನಮ್ಮ ದೇಶದ ಯಾವುದೇ ಪ್ರದೇಶದಲ್ಲಿ ಇಂತಹ ಭೀಕರ ಪರಿಸ್ಥಿತಿ ನಡೆಯದಂತೆ ನೋಡಿಕೊಳ್ಳುವ ಪ್ರತಿಜ್ಞೆ ಸ್ವೀಕರಿಸಲು ಕರೆ ನೀಡಿದರು. ಮತ್ತು ಭಾರತ-ಪಾಕ್ ಮಧ್ಯೆ ಮತ್ತಷ್ಟು ವೈಷಮ್ಯವನ್ನು ಬಿತ್ತಲು ಸಾಮ್ರಾಜ್ಯಶಾಹಿ ಶಕ್ತಿಗಳು ನಡೆಸುತ್ತಿರುವ ಪ್ರಯತ್ನಗಳನ್ನು ಹತ್ತಿಕ್ಕಿ ಸಹೋದರತ್ವ ಸ್ಥಾಪನೆಗೆ ಶ್ರಮಿಸಲು ಯುವಜನರಿಗೆ ಕರೆ ನೀಡಿದರು.

ಕ್ಯಾಪ್ಟನ್ ಲಕ್ಷ್ಮಿ ಸೆಹಗಲ್ ಮಾತನಾಡಿ ಯುವಜನರು ಮಾತ್ರವೇ ಎರಡು ಕಡೆಯ ಉಗ್ರ ಮೂಲಭೂತವಾದವನ್ನು ತಡೆಯಲು ಸಾಧ್ಯ. ಈ ದಿಶೆಯಲ್ಲಿ ಎರಡು ದೇಶಗಳ ಮಧ್ಯೆ ಸ್ನೇಹಕ್ಕಾಗಿ ಯುವಜನರನ್ನು ಪ್ರೇರೇಪಿಸುತ್ತಿರುವ ಡಿ.ವೈ.ಎಫ್.ಐ.ನ ಪ್ರಯತ್ನಗಳನ್ನು ಶ್ಲಾಘಿಸಿದರು.

ಸಿಪಿಐ(ಎಂ) ಪೊಲಿಟ್ ಬ್ಯೂರೋ ಸದಸ್ಯರಾದ ಕಾಂ.ಸೀತಾರಾಂ ಯೆಚೂರಿಯವರು ತಮ್ಮ ಭಾಷಣದಲ್ಲಿ ಸ್ವಾತಂತ್ರ್ಯ ನಂತರದ ಯುಜನಾಂಗವಾದ ನಮಗೆ ಹೇಗೆ ದೇಶ ಇಬ್ಭಾಗವಾಯಿತು ಎಂಬ ಬಗ್ಗೆ ಗೊತ್ತಿಲ್ಲ. ಆದರೆ ಸತ್ಯವೆಂದರೆ ಸುಮಾರು 10 ಲಕ್ಷ ಜನರು ಆ ಸಮಯದಲ್ಲಿ ಸಾವಿಗೀಡಾಗಿದ್ದಾರೆ. ಸುಮಾರು -80 ಲಕ್ಷದಷ್ಟು ಎರಡೂ ಕಡೆಯ ಜನರು ಮನೆಗಳನ್ನು ಬಂಧುಗಳನ್ನು ಬಿಟ್ಟು ವಲಸೆ ಹೋಗಿದಾರೆ. ಇಂತಹ ಪರಿಸ್ಥಿತಿ ಮರುಕಳಿಸದಂತೆ ತಡೆಯಬೇಕಾಗಿರುವುದು ಎರಡು ದೇಶಗಳ ಯುವಜನರ ಜವಾಬ್ದಾರಿ. ಇಂತಹ ವಿಷಯದಲ್ಲಿ ಡಿ.ವೈ.ಎಫ್.ಐ ಅತ್ಯಂತ ಮಹತ್ವದ ಪಾತ್ರವನ್ನು ವಹಿಸಬೇಕಿದೆ ಎಂದರು.

ಶೋಷಣೆಯ ವಿರುದ್ಧ ಬಂಡಾಯ ಯುವಜನರಿಗೆ ಕರೆ

ದೇಶವನ್ನು ಲೂಟಿ ಮಾಡುತ್ತಿರುವ ಶೋಷಕ ಶಕ್ತಿಗಳ ವಿರುದ್ಧ ತೀವ್ರತರನಾದ ಹೋರಾಟವನ್ನು ನಡೆಸಿ ದೇಶವನ್ನು ರಕ್ಷಿಸುವ ಹೊಣೆಗಾರಿಕೆಯನ್ನು ಯುವಜನರು ವಹಿಸಿಕೊಳ್ಳಬೇಕೆಂದು 7ನೇ ಸಮ್ಮೇಳನದ ಅಂಗವಾಗಿ ನಡೆದ ಬಹಿರಂಗ ಸಭೆಯ ಮೂಲಕ ವಿವಿಧ ಕ್ಷೇತ್ರಗಳ ಗಣ್ಯರು ಯುವಜನರಿಗೆ ಕರೆ ನೀಡಿದರು.

ಸಮ್ಮೇಳನದ ಅಂಗವಾಗಿ ನವೆಂಬರ್ -9 ರಂದು ಅಮೃತಸರದಲ್ಲಿ ನಡೆದ ಬೃಹತ್ ಯುವಜನರ ರ‍್ಯಾಲಿಯಲ್ಲಿ ಸಾವಿರಾರು ಜನರು ಪಾಲ್ಗೊಂಡಿದ್ದರು. ಅಂದು ಮಧ್ಯಾಹ್ನ ಶಾಹೀದ್ ಭಗತ್‌ಸಿಂಗ್ ಮೈದಾನದಲ್ಲಿ ನಡೆದ ಬಹಿರಂಗಸಭೆಯನ್ನುದ್ದೇಶಿಸಿ ಮಾಜಿ ಪ್ರಧಾನಮಂತ್ರಿ ಶ್ರೀ.ಹೆಚ್.ಡಿ.ದೇವೇಗೌಡ, ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಹರಕಿಶನ್‌ಸಿಂಗ್ ಸುರ್ಜಿತ, ಪಾಲಿಟ್ ಬ್ಯೂರೋ ಸದಸ್ಯರಾದ ಕಾಂ.ಸೀತಾರಾಂ ಯೆಚೂರಿ, ಪಶ್ಚಿಮ ಬಂಗಾಳದ ಯುವಜನ ಮಂತ್ರಿ ಮಹಮ್ಮದ್ ಸಲೀಂ ಡಿ.ವೈ.ಎಫ್.ಐ ನೂತನ ಅಧ್ಯಕ್ಷರಾದ ಕೆ.ಎನ್.ಬಾಲಗೋಪಾಲ ಪ್ರಧಾನ ಕಾರ್ಯದರ್ಶಿ ತಪಸ್ ಸಿನ್ಹಾ ಮಾತನಾಡಿದರು.

ಶ್ರೀ ಹೆಚ್.ಡಿ.ದೇವೇಗೌಡ ಮಾತನಾಡುತ್ತಾ ಕಳೆದ ಒಂದು ದಶಕದಿಂದ ದೇಶದಲ್ಲಿ ಜಾರಿಯಾಗುತ್ತಿರುವ ಕಾಂಗ್ರೆಸ್- ಹಾಗೂ ಬಿಜೆಪಿಯ ನೂತನ ಆರ್ಥಿಕ ನೀತಿಗಳು

ಪುಟ 11 ಕ್ಕೆ



ಡಿ.ವೈ.ಎಫ್.ಐ ಪ್ರಧಾನ ಕಾರ್ಯದರ್ಶಿ ತಪಸ್ ಸಿನ್ಹಾರವರು ಕರಡು ರಾಜಕೀಯ-ಸಂಘಟನಾ ವರದಿಯನ್ನು ಸಮ್ಮೇಳನದಲ್ಲಿ ಮಂಡಿಸಿದರು. 2000 ದ ಏಪ್ರಿಲ್ 6-10 ರವರೆಗೆ ತಿರುವನಂತಪುರದಲ್ಲಿ ನಡೆದ ಡಿ.ವೈ.ಎಫ್.ಐ 6ನೇ ಅಖಿಲ ಭಾರತ ಸಮ್ಮೇಳನದಿಂದೀಚೆಗೆ ನಡೆದಿರುವ ರಾಷ್ಟ್ರೀಯ - ಅಂತಾರಾಷ್ಟ್ರೀಯ ಬೆಳವಣಿಗೆ ಹಾಗೂ ಸಂಘಟನಾ ಪರಿಸ್ಥಿತಿ, ಸಂಘಟನೆ ನಡೆಸಿದ ಹೋರಾಟ, ಪ್ರಚಾರ, ಚಟುವಟಿಕೆಗಳನ್ನು ಕರಡು ವರದಿ ಪರಿಚಯಿಸಿತು.

ತೀವ್ರ ಹೋರಾಟ

ಸಾಮ್ರಾಜ್ಯಶಾಹಿ ಜಾಗತೀಕರಣದ ವಿರುದ್ಧ ಅಭಿವೃದ್ಧಿ ಹೊಂದಿದ ಹಾಗೂ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಮೂಡಿ ಬರುತ್ತಿರುವ ವಿನೂತನ ಮಾದರಿಯ ಹೋರಾಟಗಳು ಹಾಗೂ ಬೆಳೆಯುತ್ತಿರುವ ಪ್ರತಿರೋಧವನ್ನು ಅವಲೋಕಿಸಿದ ವರದಿಯು ರಾಷ್ಟ್ರದಲ್ಲಿ ಬಲಿಷ್ಠ ಸಾಮ್ರಾಜ್ಯಶಾಹಿ ವಿರೋಧಿ ಚಳುವಳಿಯ ಅಗತ್ಯವನ್ನು ಒತ್ತಿ ಹೇಳಿದೆ.

ರಾಷ್ಟ್ರೀಯ ಪರಿಸ್ಥಿತಿಯನ್ನು ಅವಲೋಕಿಸುತ್ತಾ ಜನಸಾಮಾನ್ಯರ ಮೇಲೆ ನಡೆದಿರುವ ಸರ್ವಾಂಗೀಣ ದಾಳಿ, ಕೋಮುವಾದಿ ಅಪಾಯ, ರಾಷ್ಟ್ರೀಯ ಐಕ್ಯತೆಗೆ ಒಡ್ಡಲಾಗಿರುವ ಸವಾಲು, ಬಿಜೆಪಿ ನೇತೃತ್ವದ ಸರ್ಕಾರದ ದಿವಾಳಿಕೋರ ಆರ್ಥಿಕ ನೀತಿ- ಜನತೆಯ ಮೇಲಿನ ಅದರ ಪರಿಣಾಮ, ಸಾಮ್ರಾಜ್ಯಶಾಹಿ ಜಾಗತೀಕರಣ ಮತ್ತು ಸಂಘಪರಿವಾರದ ಸಾಂಸ್ಕೃತಿಕ ದಾಳಿಯ ಅಂಶಗಳನ್ನು ವರದಿಯು ವಿವರಿಸಿದೆ. ಜ್ವಲಂತವಾಗಿರುವ ನಿರುದ್ಯೋಗ ಸಮಸ್ಯೆ ಕುರಿತು ಸವಿವರವಾಗಿ ವಿವರಿಸಿರುವ ವರದಿಯು ಪ್ರಸ್ತುತ ದುಡಿಯುವ ಜನತೆಯ ಶೋಷಕ ವ್ಯವಸ್ಥೆಯ ವಿರುದ್ಧ ಹೋರಾಡುತ್ತಲೇ, ಹೊಸ ಉದ್ಯೋಗಾವಕಾಶಗಳಿಗಾಗಿ ಹೋರಾಟವನ್ನು ತೀವ್ರಗೊಳಿಸಲು ಡಿ.ವೈ.ಎಫ್.ಐ ಕ್ರಿಯಾಶೀಲ ಪಾತ್ರವಹಿಸಬೇಕೆಂದಿದೆ. ಜನತೆಯ ಸಮಸ್ಯೆಗಳ ಆಧಾರದಲ್ಲಿ ನಿರಂತರ ಹೋರಾಟ ನಡೆಸುವ ಮೂಲಕ ಯುವಜನತೆಯ ವಿವಿಧ ಹೊಸ ವಿಭಾಗಗಳನ್ನು ಸೆಳೆದುಕೊಳ್ಳುವ ಅಗತ್ಯವನ್ನು ಹೇಳಿರುವ ವರದಿಯು, ಎಡ-ಜನಪರ ಪರ್ಯಾಯಕ್ಕಾಗಿ ಜನತೆಯನ್ನು ಅಣಿನೆರೆಸಲು ಅದು ಅನುವುಗೊಳಿಸಲಿದೆ ಎಂದಿದೆ.

6ನೇ ಸಮ್ಮೇಳನದಿಂದೀಚೆಗೆ ನಡೆಸಲಾದ ಪ್ರಚಾರ ಪ್ರಕ್ಷೋಭೆ ಹಾಗೂ ಹೋರಾಟಗಳನ್ನು ವಿವರಿಸಿರುವ ವರದಿಯು ಕೇರಳದಲ್ಲಿ ಆದಿವಾಸಿಗಳ ಮೇಲೆ ಸರ್ಕಾರ ನಡೆಸಿದ ದಾಳಿ, ಅದನ್ನು ವಿರೋಧಿಸಿ ನಡೆಸಿದ ಹೋರಾಟ, ಕೋಮು ಶಕ್ತಿಗಳ ವಿರುದ್ಧದ ಪ್ರಚಾರ, ತ್ರಿಪುರಾ ಸೌಹಾರ್ದತಾ ಪ್ರಚಾರಾಂದೋಲನ ಮುಂತಾದವುಗಳು ಪ್ರಮುಖ. ಪ್ರಚಾರ ಮತ್ತು ಯುವಜನತೆಯನ್ನು ಅಣಿನೆರೆಸುವಲ್ಲಿ ಸಂಘಟನೆಗೆ ವಿವಿಧ ರಾಜ್ಯಗಳಲ್ಲಿರುವ ದೌರ್ಬಲ್ಯಗಳನ್ನು ಗುರುತಿಸಿರುವ ವರದಿಯು ಅವುಗಳನ್ನು ಬಲಹೀನ ರಾಜ್ಯಗಳಲ್ಲಿ ತೀವ್ರತರವಾಗಿ - ಯೋಜನಾಬದ್ಧವಾಗಿ ಪರಿಹರಿಸಿಕೊಳ್ಳಬೇಕಿದೆ ಎಂದಿದೆ. ಪ್ರಸಕ್ತ ಚಾಲ್ತಿಯಿರುವ ಸೈದ್ಧಾಂತಿಕ ದಾಳಿಗಳನ್ನು ಎದುರಿಸಲು ಸಮರ್ಪಕ ಹಾಗೂ ಪ್ರಬಲವಾದ ನಿರಂತರ ಪ್ರಚಾರಾಂದೋಲನ ನಡೆಸಬೇಕಾದ ಅನಿವಾರ್ಯತೆ ಮತ್ತು ಅದಕ್ಕಾಗಿ ಸಂಘಟನಾ ಶಕ್ತಿಯನ್ನು ಹೆಚ್ಚಿಸಿಕೊಳ್ಳುವ ಅಗತ್ಯತೆಯನ್ನು ವರದಿಯು ಒತ್ತಿ ಹೇಳಿದೆ.

ಅಸಮಾನ ಬೆಳವಣಿಗೆ


ಸಂಘಟನಾ ವಿಷಯಗಳ ಕುರಿತು ವಿಮರ್ಶಿಸಿರುವ ವರದಿಯು ಕಳೆದ ಸಮ್ಮೇಳನದಿಂದೀಚೆಗೆ ಸದಸ್ಯತ್ವ ಏರಿಕೆಯ ಪ್ರಮಾಣದಲ್ಲಿ ನಿರಂತರತೆಯನ್ನು ಗುರುತಿಸಿದೆ. ಸದಸ್ಯತ್ವದ ವ್ಯಾಪಕತೆಯಲ್ಲಿ ವಿವಿಧ ರಾಜ್ಯಗಳಲ್ಲಿ ಅಸಮಾನವಾಗಿರುವುದನ್ನು ಒತ್ತಿ ಹೇಳಿದೆ. ಡಿ.ವೈ.ಎಫ್.ಐ ನ ಒಟ್ಟು ಸದಸ್ಯತ್ವವಾದ 1,25,98,135 ರಲ್ಲಿ ಶೇ.85.04 ರಷ್ಟು ಅಂದರೆ 1,07,08,544 ಕೇವಲ ಪಶ್ಚಿಮ ಬಂಗಾಳ ಮತ್ತು ಕೇರಳ ರಾಜ್ಯಗಳದ್ದಾಗಿದೆ. ಈ ಕುರಿತ ವಿಮರ್ಶೆಯಲ್ಲಿ ವರದಿಯು "ಸದಸ್ಯತ್ವ ನೋಂದಾವಣೆಯಲ್ಲಿ ಹಿಂದಿ ರಾಜ್ಯಗಳಲ್ಲಿ ದೌರ್ಬಲ್ಯವಿರುವುದನ್ನು ಗುರುತಿಸುತ್ತಾ, ದುರ್ಬಲ ರಾಜ್ಯಗಳಲ್ಲಿರುವ ಈ ದೌರ್ಬಲ್ಯಗಳನ್ನು ಸರಿಪಡಿಸುವ ಮೂಲಕ ವಿವಿಧ ರಾಜ್ಯಗಳಲ್ಲಿನ ಸದಸ್ಯತ್ವದಲ್ಲಿನ ಅಸಮಾನತೆಯನ್ನು ಸರಿಪಡಿಸಬೇಕೆಂದಿದೆ". ಅಂತೆಯೇ ಸಮರ್ಪಕ ಯೋಜನೆ ಮತ್ತು ಸ್ಥಳೀಯ ಪ್ರಶ್ನೆಗಳ ಆಧಾರದ ನಿರಂತರ ಹೋರಾಟದ ಮೂಲಕ ಜಮ್ಮು ಮತ್ತು ಕಾಶ್ಮೀರದಲ್ಲಿ ಸದಸ್ಯತ್ವದಲ್ಲಿನ ಸ್ಥಗಿತತೆಯನ್ನು ಹೋಗಲಾಡಿಸಿಕೊಂಡು, ಸಾಧಿಸಲಾಗಿರುವ ಬೆಳವಣಿಗೆ ಅನುಕರಣೀಯ ಎಂದಿದೆ ವರದಿ.

ಬಲಹೀನ ರಾಜ್ಯಗಳಲ್ಲಿನ ಸಮಸ್ಯೆಗಳ ಬಗ್ಗೆ ನಿರ್ದಿಷ್ಟವಾಗಿ ಚರ್ಚಿಸುತ್ತಾ ಸಮರ್ಪಕ ಯೋಜನೆಯ ಮೂಲಕ, ನಿರ್ದಿಷ್ಟ ವಿಭಾಗ ಮತ್ತು ಪ್ರದೇಶಗಳನ್ನು ಆದ್ಯತೆಯಾಗಿರಿಸಿಕೊಂಡು ಸಂಘಟನೆ ಬೆಳೆಸುವ ಮೂಲಕ, ಅದನ್ನು ಇತರೆ ಪ್ರದೇಶಗಳಿಗೆ ವಿಸ್ತರಿಸುವ ಆ ಮೂಲಕ ಸಂಘಟನೆಯನ್ನು ಬಲಗೊಳಿಸಬೇಕೆಂದಿದೆ ವರದಿ.

ಕೇಂದ್ರದ ಪಾತ್ರ

ವರದಿಯ ಮೇಲೆ 25 ರಾಜ್ಯಗಳ 45 ಪ್ರತಿನಿಧಿಗಳು ವರದಿಯನ್ನು ಸಲಹೆ, ವಿಮರ್ಶೆ, ಅನುಭವ ಹಂಚಿಕೊಳ್ಳುವ ಮೂಲಕ ಬಲಗೊಳಿಸಿದರು. ದುರ್ಬಲ ರಾಜ್ಯಗಳಲ್ಲಿನ ಸಂಘಟನೆ ಬಲಗೊಳಿಸಿ, ಚಳುವಳಿ ಬಲಗೊಳಿಸಲು ಕೇಂದ್ರದ - ಸಿಇಸಿಯ ಮಾರ್ಗದರ್ಶನದ ಅಗತ್ಯತೆಯನ್ನು ಒತ್ತಿ ಹೇಳಿದರು. ಯುವತಿಯರ, ಹಾಗೂ ಆದಿವಾಸಿ ಯುವಜನರ ಸಮಾವೇಶ ಸಂಘಟಿಸುವ ನಿಟ್ಟಿನಲ್ಲಿ ಸಿಇಸಿ ಹಾಗೂ ಅಖಿಲ ಭಾರತ ಕೇಂದ್ರದ ಮಧ್ಯಪ್ರವೇಶವನ್ನು ಪ್ರತಿನಿಧಿಗಳು ಸ್ವಾಗತಿಸಿ, ಮುಂದೆಯೂ ಇಂತಹ ಮಧ್ಯಪ್ರವೇಶದ ಅಗತ್ಯತೆಯನ್ನು ಒತ್ತಿ ಹೇಳಿದರು.

ನವೆಂಬರ್ 9 ರಂದು ವರದಿಯ ಮೇಲಿನ ಚರ್ಚೆಗೆ ಉತ್ತರಿಸಿದ ತಪಸ್ ಸಿನ್ಹಾರವರು, ಚರ್ಚೆಯ ಸಾರವನ್ನು ಸ್ವೀಕರಿಸುವ ಅಂಶವನ್ನು ಹೇಳುತ್ತಾ ವಿವಿಧ ವಿಭಾಗಗಳ ಜನತೆ ನಡುವೆ ಸಂಘಟನೆ ಕೊಂಡೊಯ್ಯುವ ಅಗತ್ಯವನ್ನು ಒತ್ತಿ ಹೇಳಿದರು. ಪ್ರಧಾನ ಕಾರ್ಯದರ್ಶಿಯವರ ಉತ್ತರದ ನಂತರ ಸಮ್ಮೇಳನವು ಕರಡು ರಾಜಕೀಯ-ಸಂಘಟನಾ ವರದಿಯನ್ನು ಸರ್ವಾನುಮತದಿಂದ ಅಂಗೀಕರಿಸಿತು.



ವಾಘಾಗಡಿಯಲ್ಲಿನ ಕಾರ್ಯಕ್ರಮ

ರೈತರ ಜಾಥಾಗಳು ಬೆಂಗಳೂರಿನತ್ತ! ಭೂಮಸೂದೆ ಜ್ಯಾರಿಗೊಳಿಸಲು ಒತ್ತಾಯ




ಹಳೆಯ ಮೈಸೂರು ಕೈಗಾರಿಕಾ ರಂಗದಲ್ಲಿ ಸರ್.ಎಂ.ವಿಶ್ವೇಶ್ವರಯ್ಯನವರ ಕಾಲದಲ್ಲಿಯೇ ಸರಕಾರಿ ಕ್ಷೇತ್ರದಲ್ಲಿ ಕೈಗಾರಿಕೆಗಳನ್ನು ಕಟ್ಟಿ ಬೆಳೆಸಲಾಗಿತ್ತು. ಆದರೆ ರೈತರ ಹಿತ ರಕ್ಷಣೆ ಮಾಡುವ ಯಾವುದೇ ಕಾನೂನು ಗಟ್ಟದ ಮೇಲಿನ ಪ್ರದೇಶದಲ್ಲಿ ಇರಲಿಲ್ಲ. ನಮ್ಮ ದಕ್ಷಿಣ ಕನ್ನಡ ಜಿಲ್ಲೆ ಹಿಂದೆ ಮದ್ರಾಸು ಪ್ರಾಂತ್ಯದಲ್ಲಿ ಸೇರಿದ್ದುದರಿಂದ ತಂಜಾವೂರು ಟೆನಿನ್ಸ್ ಬಿಲ್ಲು ಮತ್ತು ನ್ಯಾಯ ಗೇಣಿ ನಿರ್ಣಯದ ಕಾನೂನುಗಳು ಜ್ಯಾರಿಯಲ್ಲಿದ್ದವು. ಆದರೂ ಬಲಾತ್ಕಾರದಲ್ಲಿ ರೈತರನ್ನು ಒಕ್ಕಲೆಬ್ಬಿಸುವುದು ನಗರಗಳಿಂದ ದೂರದ ಗ್ರಾಮಾಂತರದಲ್ಲಿ ನಡೆದೇ ಇತ್ತು. ಕೆಲವು ಕಡೆಗಳಲ್ಲಿ ಆಗಾಗ ಭೂಮಿಯನ್ನು ಬದಲಾಯಿಸಿ ಒಕ್ಕಲುಗಳಿಗೆ ನೀಡುವ ಪದ್ಧತಿಯೂ ಇಲ್ಲಿತ್ತು. ಶ್ರೀಮಂತ ಭೂಮಾಲಿಕರ ಪರವಾಗಿ ಯಾವ ಕಾನೂನು ಇರದಿದ್ದರೂ ಕಾರುಬಾರು ಅವರದ್ದೆ ಆಗಿತ್ತು. ಅವರು ಮಾಡಿದ್ದು ನಡೆಯುತ್ತಿತ್ತು. ಒಂದು ದಿನ ರಾತ್ರಿ ಬೆಳಗಾಗುವುದರೊಳಗೆ ರೈತನ ಮನೆಯಿದ್ದ ಸ್ಥಳ ಗದ್ದೆಯಾಗಿ ಮಾರ್ಪಾಡಾಗುತ್ತಿತ್ತು. ಗೂಂಡಾಗಳು ಒಕ್ಕಲುಗಳನ್ನು ದೂರದ ಊರುಗಳಿಗೆ ವಾಹನಗಳಲ್ಲಿ ಕೊಂಡೊಯ್ದು ಬಿಟ್ಟು ಬರುವ ಉದಾಹರಣೆಗಳಿದ್ದವು.

ಬೆಳೆದ ಹೋರಾಟಗಳು

ಕಾರವಾರ, ಉತ್ತರಕನ್ನಡ ಜಿಲ್ಲೆ ಮತ್ತು ಮುಂಬಯಿ ಕರ್ನಾಟಕಕ್ಕೆ ಸೇರಿದ್ದ ಬಿಜಾಪುರ, ದಕ್ಷಿಣ ಕನ್ನಡ ಜಿಲ್ಲೆಗಳಿಗೆ ಹಿಂದೆ ಮುರಾರ್ಜಿ ದೇಸಾಯಿಯವರು ಮುಖ್ಯಮಂತ್ರಿಯಾಗಿದ್ದಾಗಲೇ ಉತ್ಪನ್ನದ 6ನೇ ಒಂದು ಭಾಗವನ್ನು ಗೇಣಿಯಾಗಿ ಕೊಡುವ ನ್ಯಾಯಗೇಣಿ ಶಾಸನ ಮತ್ತು ಒಕ್ಕಲು ಎಬ್ಬಿಸದಂತೆ ತಡೆಯುವ ಕಾನೂನು ಜ್ಯಾರಿಯಾಗಿತ್ತು. ಅದರಿಂದಾಗಿ ಆದಾಗಲೇ, ಸಂಗಾತಿಗಳಾದ ಎನ್.ಎಲ್.ಉಪಾಧ್ಯಾಯ, ಎನ್.ಕೆ.ಉಪಾಧ್ಯಾಯ, ನಬಿ ಸಾಹೇಬ ಬಾಲಸಿಂಗ್ ಮಾಸ್ತರ್, ಮಾಳ್ಸೇಕರ್, ಗಣೂ ಮಹಾಬಲ ನಾಯ್ಕ, ಡಿ.ವಿ.ಸಿಂಗ್ ಮೊದಲಾದವರು ರೈತ ಚಳುವಳಿ ಕಟ್ಟಿ ಬೆಳೆಸಲು ಪ್ರಾರಂಭಿಸಿದ್ದರು. ಮತ್ತದು ಪ್ರಬಲ ಚಳುವಳಿಯಾಗಿ ಬೆಳೆದಿತ್ತು. ಸಾವಿರಾರು ಗಾಡಿಗಳಲ್ಲಿ ರೈತರ ಮೆರವಣಿಗೆಗಳ ವರದಿಗಳು ಹೋರಾಟದ ವಿವರಗಳೂ ನಮಗೆ ತಲುಪುತ್ತಿದ್ದವು. 1947 ಮೇ ತಿಂಗಳಲ್ಲಿ ಪ್ರಾರಂಭವಾದ "ಜನಶಕ್ತಿ" ಪತ್ರಿಕೆಯಲ್ಲಿ ಈ ಬಗ್ಗೆ ವರದಿಗಳನ್ನು ನೋಡಿದ ನೆನಪು ನನಗಿದೆ. ಹೇಗಿದ್ದರೂ ರೈತ ಸಂಘಟನೆ ಚಳುವಳಿ ಉತ್ತರಕನ್ನಡ ಜಿಲ್ಲೆ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ 3-4 ತಾಲೂಕುಗಳಲ್ಲಿ ಪ್ರಬಲವಾಗಿ ಸಂಘಟನೆ ಬೆಳೆದಿತ್ತು.

1956 ನವೆಂಬರ್ 1 ರಂದು ಕರ್ನಾಟಕ ರಾಜ್ಯದ ರಚನೆಯಾದಾಗ ರಾಜ್ಯಮಟ್ಟದಲ್ಲಿ ರೈತ ಸಂಘಟನೆ ಕಟ್ಟುವ ಯೋಚನೆ ಪಕ್ಷದ ಮುಖಂಡರಲ್ಲಿ ಬೆಳೆದು ಕಾಂ.ಬಿ.ವಿ.ಕಕ್ಕಿಲ್ಲಾಯ ರಾಜ್ಯಕೇಂದ್ರದಲ್ಲಿ ರೈತ ಸಂಘಟನೆಗಾಗಿ ಕೆಲಸ ಮಾಡಬೇಕೆಂದು ನಿರ್ಣಯಿಸಲಾಯಿತು. ಕೋಲಾರದಂತಹ ಜಿಲ್ಲೆಗಳಲ್ಲಿ ಗೇಣಿದಾರರ ಮೂಲಕ ಸಾಗುವಳಿ



ಡೇವಿಡ್ ಕರ್ಕಡ, ಉಡುಪಿ

ಮಾಡಿಸುವ ಕ್ರಮವಿದ್ದರೆ, ಹೈದರಾಬಾದ್ ಕರ್ನಾಟಕದಲ್ಲಿ ಇನಾಂದಾರ್, ದೇಶಪಾಂಡೆ, ಜಹಗೀರ್‌ದಾರ್ ಪದ್ದತಿ ಮೂಲಕ ಉಳಿಗಮಾನ್ಯ ಮತ್ತು ಪಾಳೆಯಗಾರರ ರಾಜ್ಯವೇ ಆಗಿತ್ತೆಂದರೂ ತಪ್ಪಾಗಲಾರದು. ಪ್ರಾರಂಭದಿಂದಲೂ ರೈತ ಚಳುವಳಿಯಲ್ಲಿ ಭೂಮಾಲಕ ಪದ್ಧತಿ ನಾಶವಾಗಲಿ, ಊಳುವವನೇ ಹೊಲದೊಡೆಯ ಎಂಬ ಘೋಷಣೆಗಳ ಮೂಲಕವೂ ತಾತ್ಕಾಲಿಕ ವ್ಯವಸ್ಥೆಯಾಗಿ "ನ್ಯಾಯಗೇಣಿ" ಜಿಲ್ಲಾ ಮಟ್ಟಗಳಲ್ಲಿ ಭೂಸುಧಾರಣೆಯ ಒತ್ತಾಯ ಬರುತ್ತಿದ್ದರೂ ಅದು ಪರಿಣಾಮಕಾರಿಯಾಗಿರಲಿಲ್ಲ. ಕರ್ನಾಟಕ ಏಕೀಕರಣದ ನಂತರ ರಾಜ್ಯವ್ಯಾಪಿ ಚಳುವಳಿ ಕಟ್ಟಬೇಕಾದ ಅಗತ ಕಂಡುಬಂತು.

ರೈತ ಸಮ್ಮೇಳನ

ದಕ್ಷಿಣ ಕನ್ನಡ ಜಿಲ್ಲೆಯ ಉಡುಪಿ, ಬಂಟ್ವಾಳ, ಬೆಳ್ತಂಗಡಿ, ಪುತ್ತೂರುಗಳಲ್ಲಿಯೂ, ಮಂಗಳೂರು ತಾಲೂಕು ಮಟ್ಟದಲ್ಲಿ ಆದಾಗಲೇ ಸಮ್ಮೇಳನಗಳನ್ನು ಸೇರಿಸಲಾಗಿತ್ತು. 1955-56 ಸರಿಯಾಗಿ ನೆನಪಿಲ್ಲ. ಕರ್ನಾಟಕ ಪ್ರಾಂತ ರೈತ ಸಮ್ಮೇಳನ ಸೇರಿಸಲಾಯಿತು. ಉಡುಪಿಯಿಂದಲೂ ಪ್ರತಿನಿಧಿಗಳು ಭಾಗವಹಿಸುವಂತೆ ಹಣಸಂಗ್ರಹ ಮಾಡಿಕೊಟ್ಟೆವು. ಈ ಸಮ್ಮೇಳನದಲ್ಲಿ ಕೋಲಾರದ ಕಾಂ.ವೆಂಕಟಗಿರಿಯಪ್ಪ ಅಧ್ಯಕ್ಷರಾಗಿ, ಕಾಂ.ಬಿ.ವಿ.ಕಕ್ಕಿಲ್ಲಾಯರನ್ನು ರವರು ಪ್ರಧಾನ ಕಾರ್ಯದರ್ಶಿಯಾಗಿ ಆರಿಸಲಾಯಿತು. ಕಾಂ.ಎ.ಕೃಷ್ಣ ಶೆಟ್ಟಿ ಮತ್ತುಉಪಾಧ್ಯಾಯ ಮೊದಲಾದವರು ಉಪಾಧ್ಯಕ್ಷ ರಾಗಿಯೂ ಕಾಂ.ಎಂ.ಎಚ್.ಕೃಷ್ಣಪ್ಪ ಜತೆ ಕಾರ್ಯದರ್ಶಿಗಳಾಗಿ ಆಯ್ಕೆಯಾದರೆಂದು ನೆನಪಿದೆ.


ಸ್ಫೂರ್ತಿ ತುಂಬಿದ ಜಾಥಾಗಳು

ಸ್ಥಳೀಯ ಮಟ್ಟದ ಸಮಸ್ಯೆಗಳನ್ನೆತ್ತಿ ಕರ್ನಾಟಕದ ಎಲ್ಲೆಡೆ ಜಾಥಾಗಳನ್ನು ನಡೆಸಲಾಗುತ್ತಿತ್ತು. ಉಡುಪಿ, ಮಂಗಳೂರು, ಬಂಟ್ವಾಳ, ಪುತ್ತೂರು, ಬೆಳ್ತಂಗಡಿಗಳಲ್ಲಿಯೂ ಜಾಥಾ ತಂಡಗಳು ಸಂಚರಿಸಿ ರೈತರಲ್ಲಿ ಸ್ಫೂರ್ತಿ ತುಂಬಿಸಲು ಸಹಕಾರಿಯಾಯಿತು. ಇದೆಲ್ಲದರ ಫಲವಾಗಿ ಕರ್ನಾಟಕ ರಾಜ್ಯದಲ್ಲಿ ಭೂಸುಧಾರಣೆ ಜ್ಯಾರಿಯಾಗುವಂತೆ ಸರಕಾರದ ಮೇಲೆ ಒತ್ತಡ ತರಲು ಸಂಘಟನೆ ಬೆಳೆದು ಬಂದ ಎಲ್ಲಾ ಕಡೆಗಳಿಂದಲೂ ಬೆಂಗಳೂರಿಗೆ ಕಾಲ್ನಡಿಗೆ ಜಾಥಾಗಳನ್ನು ಸಂಘಟಿಸಲಾಯಿತು. ಪ್ರಾರಂಭದಲ್ಲಿ ದಕ್ಷಿಣಕನ್ನಡ ಜಿಲ್ಲೆಯಿಂದ ಒಂದು ಜಾಥಾ ಮಾತ್ರ ಕಾಂ. ಎಂ.ಹೆಚ್.ಕೃಷ್ಣಪ್ಪರ ನೇತೃತ್ವದಲ್ಲಿ ಹೊರಡಿಸ ಲಾಯಿತು. ಎಲ್ಲಾ ತಾಲೂಕಿನಿಂದಲೂ ರೈತಸಂಘದ ಕಾರ್ಯಕರ್ತರು ಇದರಲ್ಲಿ ಭಾಗವಹಿಸಿ ಯಶಸ್ವಿ ಗೊಳಿಸಿದರು. 15-16 ದಿನಗಳ ಕಾಲ್ನಡಿಗೆ ಜಾಥಾ ದಿನಕ್ಕೆ 20-25 ಮೈಲಿ ನಡೆಯಬೇಕಾಗಿಯೂ ಬರುತ್ತಿತ್ತು. ಚಳುವಳಿ ಇದ್ದೆಡೆಗೆಲ್ಲ ಸುತ್ತುಬಳಸಿ ಹೋಗಬೇಕಾಗುತ್ತಿತ್ತು. ಅಲ್ಲಲ್ಲ ಸ್ವಾಗತ ಸಮಾರಂಭಗಳೂ ಹಲವೆಡೆ ಜರುಗಿಸ ಲಾಯಿತು. ಈ ಒತ್ತಡ ಸಾಕಾಗಲಿಲ್ಲವೆಂದು ಅನುಭವದಿಂದ ತಿಳಿದುಬಂದು ನಂತರದಲ್ಲಿ ಎಲ್ಲಾ ಮಾರ್ಗಗಳಿಂದಲೂ ಬೆಂಗಳೂರು ತಲುಪಬೇಕೆಂದು ನಿರ್ಧಾರ ಮಾಡಿದ ನಂತರ ದಕ್ಷಿಣ ಕನ್ನಡ ಜಿಲ್ಲೆಯಿಂದ 4 ತಂಡಗಳು ಎಲ್ಲಾ ಮಾರ್ಗಗಳಿಂದಲೂ ಕಾಲ್ನಡಿಗೆಯಲ್ಲೇ ಹೊರಡಿಸಲಾಯಿತು. ತಂಡಗಳು ತಲುಪುವಾಗ ಮುಂದಿನಿಂದ ಮುಂದಾಳುಗಳು ಎಲ್ಲೆಡೆ ಸ್ವಾಗತ ಸಮಾರಂಭಗಳ ಮೂಲಕವೂ ಸಹಾಯ ಸಂಗ್ರಹಕ್ಕೂ ಕಾರಣರಾಗಿ ಈ ಬಾರಿಯ ಜಾಥಾ ತಂಡಗಳು ಹೆಚ್ಚಿನ ಪ್ರಚಾರ ಗಳಿಸುವಲ್ಲಿ ಯಶಸ್ವಿಯಾಯಿತು. 1972 ರಲ್ಲಿ "ಜತ್ತಿ ಸಮಿತಿ" ವರದಿಯನ್ನು ಮಸೂದೆಯಾಗಿ ಜ್ಯಾರಿಗೊಳಿಸಲು ಹೆಚ್ಚಿನ ಒತ್ತಡ ಬರುವಂತಾಗಿ ಶ್ರೀಮಾನ್ ದೇವರಾಜ ಅರಸರ ಕಾಲದಲ್ಲಿ ಮಸೂದೆ ಮಂಡನೆಯಾಗಿ ಜ್ಯಾರಿಗೆ ತರುವ ಪ್ರಯತ್ನ ನಡೆಯಿತು.

ಶಾಸಕರ ಆಯ್ಕೆ

1967 ರ ಚುನಾವಣೆಯಲ್ಲಿ ಪಕ್ಷದ ಶಾಸಕರುಗಳಾಗಿ ಆಯ್ಕೆಗೊಂಡಿದ್ದ ಸಂಗಾತಿಗಳಾದ ಎ.ಕೃಷ್ಣಶೆಟ್ಟಿ, ಗುಲ್ಬರ್ಗಾದ ಗಂಗಾಧರ ನಮೋಶಿ, ಕಾರವಾರದಿಂದ ಬಿ.ಪಿ.ಕದಂ, ಕೋಲಾರದ ವೆಂಟಕಗಿರಿಯಪ್ಪ ಮೊದಲಾದವರು ಪಟ್ಟ ಶ್ರಮವಿದೆ. 1972 ರಲ್ಲಿ ವಿಧಾನ ಸಭೆಗೆ ಬಂಟ್ವಾಳ ಕ್ಷೇತ್ರದಿಂದ ಆಯ್ಕೆಯಾದ ಕಾಂ.ಬಿ.ವಿ.ಕಕ್ಕಿಲಾಯ ರವರು ಮುಂದುವರಿಸಿದ ಪ್ರಯತ್ನ ಮತ್ತು ಹೋರಾಟಗಳು ಭೂಸುಧಾರಣಾ 'ಮಸೂದೆ' ರೂಪುಗೊಳ್ಳಲು ಕಾರಣವಾದವು.

ಶಿಫ್ಟ್‌ಗಳಲ್ಲಿ ಕೆಲಸ - ದೇಹ ಮನಸ್ಸುಗಳಿಗೆ ಆಯಾಸ





ಹಿಂದೆ ಶಿಫ್ಟ್‌ಗಳಲ್ಲಿ ಕೆಲಸ ಮಾಡುವವರು ನಿದ್ರೆ ಹೋಗಲು ಕೆಲವು ಸೂತ್ರಗಳನ್ನು ಚರ್ಚಿಸಿದ್ದೇವೆ. ಈ ವಾರ ಶಿಫ್ಟ್ ಕೆಲಸ ಮಾಡುವವರು ಆರೋಗ್ಯದಿಂದಿರಲು ಆಹಾರದ ಬಗ್ಗೆ ಯಾವ ಮುಂಜಾಗ್ರತೆ ವಹಿಸಬೇಕೆಂಬುದನ್ನು ಚರ್ಚಿಸೋಣ.

ಸಮಯವಿಲ್ಲದ್ದರಿಂದ ಕೆಲವು ಬಾರಿ ಕಾರ್ಮಿಕನಿಗೆ ಆಹಾರ ಸೇವಿಸಲು ಆಗುವುದಿಲ್ಲ. ಬೆಳಗಿನ ಜಾವ ಬೇಗನೆ ಶಿಫ್ಟಿಗೆ ಹೋಗುವವರಿಗೆ ಯಾವ ಆಹಾರವೂ ತಿನ್ನಲು ಆಗುವುದಿಲ್ಲ ಕಾರಣ ಅಭ್ಯಾಸವಿರುವುದಿಲ್ಲ. ಶಿಫ್ಟ್ ಕೆಲಸದ ಸಮಯ ಆಹಾರವೂ ದೊರಕಲಾರದು. ಆದ್ದರಿಂದ ಆಹಾರ ಸೇವನೆಗೆ ಕೆಲವು ಸುಲಭಸೂತ್ರಗಳನ್ನು ಅರಿಯಬಹುದಾಗಿದೆ.

ಸಾಧ್ಯವಾದಾಗ ಒಮ್ಮೆಯಾದರೂ ಎಲ್ಲ ಆಹಾರದ ಘಟಕಗಳುಳ್ಳ ಆಹಾರವನ್ನು ಸೇವಿಸುವುದು ಅಗತ್ಯ. ಆಹಾರಸೇವನೆ ಮಧ್ಯಾಹ್ನವೇ ಆಗಬೇಕು, ಆಹಾರದಲ್ಲಿ ಅನ್ನ, ಸಾರು, ಮುದ್ದೆ ಇರಲೇಬೇಕು ಎಂಬ ಅನೇಕ ನಂಬಿಕೆಗಳು ನಮ್ಮಲ್ಲಿವೆ. ಆಹಾರವೆಂದರೆ ಪೌಷ್ಟಿಕವಾಗಿರಬೇಕು. ಆ ಪೌಷ್ಟಿಕತೆ ಯಾವುದೇ ಆಹಾರದಿಂದ ಒದಗಬಹುದು.

ಮನೆಯಲ್ಲಿ ಆಹಾರಸೇವನೆ ಸಾಧ್ಯವಿಲ್ಲದ ಸಮಯದಲ್ಲಿ, ಪೌಷ್ಟಿಕತೆ ಒದಗಿಸುವ ಸಾಕಷ್ಟು ಹಣ್ಣುಗಳನ್ನು ಸೇವಿಸಬೇಕು.

ಶಿಫ್ಟ್‌ಗಳಲ್ಲಿ ಕೆಲಸ ಮಾಡುವವರು ಮಧ್ಯೆ ಮಧ್ಯೆ ಲಘು ಉಪಹಾರ ಮಾಡುವ ಅಭ್ಯಾಸ ಮಾಡಿಕೊಳ್ಳಬೇಕು. ಈ ಆಹಾರ ಪೌಷ್ಟಿಕವಾಗಿದೆಯೇ ಸ್ವಚ್ಛವಾಗಿದೆಯೇ ತೀರ್ಮಾನಿಸಿ ಸೇವಿಸಿ ಇಲ್ಲದಿದ್ದಲ್ಲಿ ಹಣ್ಣು ಹಂಪಲು ಸೇವಿಸಿ.

ಶಿಫ್ಟ್ ಕೆಲಸ ಮಾಡುವಾಗ ಹೊಟ್ಟೆತುಂಬ ಆಹಾರಸೇವನೆ (ಜಿಡ್ಡುಯುಕ್ತ ಪ್ರೋಟೀನ್‌ಯುಕ್ತ) ಮಾಡದಿರಿ. ಇದರಿಂದ ಶಿಫ್ಟ್ ಸಮಯದಲ್ಲಿ ನಿದ್ದೆ ಬರಬಹುದು. ಕೆಲವೊಮ್ಮೆ ಅಜೀರ್ಣವಾಗಬಹುದು. ಆದ್ದರಿಂದ ಲಘು ಆಹಾರ ಅಥವಾ ತಿಂಡಿ ಹೆಚ್ಚು ಆರೋಗ್ಯಕರ.

ರಾತ್ರಿ ಶಿಫ್ಟ್‌ಕೆಲಸ ಮಾಡುವವರಿಗೆ ನಿದ್ರೆ ಬರುವ ಸಾಧ್ಯತೆ ಇದೆ. ಆದ್ದರಿಂದ ಅವರಿಗೆ ಕಾಫಿ, ಸಿಗರೇಟ್, ಕೋಕಾ ಮುಂತಾದವುಗಳು ಪ್ರಯೋಜಕ ಎನಿಸಲು ಸಾಧ್ಯ, ಕಾರಣ ಅದರಲ್ಲಿರುವ ಕೆಫಿನ್ (caffin) ರಾತ್ರಿ ಹೊತ್ತು ಕೆಫಿನ್ ಉಪಯೋಗಿಸಿದಲ್ಲಿ ಅದು ತಾತ್ಕಾಲಿಕವಾಗಿ ನಿದ್ರೆಯನ್ನು ತಡೆಯುತ್ತದೆ. ಅದರೆ ಅದೇ ಕೆಫಿನ್ ನಂತರ ನಿದ್ರಾಹೀನತೆಯನ್ನು ಉಂಟುಮಾಡುತ್ತದಲ್ಲದೆ ವ್ಯಕ್ತಿಗೆ ಕೆಫಿನ್ ಚಟ ಉಂಟಾಗುತ್ತದೆ.

ಇದರಿಂದ ಅನಾರೋಗ್ಯ ಉಂಟಾಗುತ್ತದೆ.

ಕೆಲವು ಸಾರ್ವಜನಿಕ ಉದ್ಯಮಗಳಲ್ಲಿ ಆಹಾರ ತಯಾರಿಸಲು ಗ್ಯಾಸ್ ಉಪಯೋಗಿಸುತ್ತಾರೆ. ಆದ್ದರಿಂದ ಇಂತಹ ಆಹಾರ ಸೇವನೆಯಿಂದ ಗ್ಯಾಸ್ ಟ್ರಬಲ್ ಉಂಟಾಗುತ್ತದೆ ಎಂಬ ನಂಬಿಕೆ ಕೆಲವರಲ್ಲಿದೆ. ಇದೊಂದು ಮೂಢನಂಬಿಕೆ, ಗ್ಯಾಸ್‌ಟ್ರಬಲ್ ಆಹಾರ ಸೇವನೆಯಿಂದ ಉಂಟಾಗುವುದಿಲ್ಲ. ಆಹಾರ ಸೇವಿಸದೆ ಇರುವುದರಿಂದ ಉಂಟಾಗುತ್ತದೆ. ಫ್ಯಾಕ್ಟರಿಗಳಲ್ಲಿ ಬಿಸಿಯಾದ, ಸ್ವಚ್ಛವಾದ ಪೌಷ್ಟಿಕ ಆಹಾರ ದೊರಕುತ್ತಿದ್ದಲ್ಲಿ, ಮನೆಯಿಂದ ಆಹಾರ ತೆಗೆದುಕೊಂಡು ಹೋಗಿ ತಂಪಾದ ಆಹಾರ ಸೇವಿಸುವ ಅಗತ್ಯವಿಲ್ಲ. ಎಲ್ಲರೊಂದಿಗೆ ಬೆರೆತು ಬಿಸಿ ಆಹಾರ ಸೇವನೆ ಹೆಚ್ಚು ಹಿತಕರ. ಆಹಾರದೊಂದಿಗೆ ನೀರು ಉಪಯೋಗವನ್ನು ಹೆಚ್ಚಿಸಿಕೊಳ್ಳಿ.

ಪೌಷ್ಟಿಕ ಆಹಾರ - ಹಣ್ಣು ತರಕಾರಿ, ಹಾಲು, ಮೊಟ್ಟೆ, ಮಾಂಸ, ಮೀನು ಇತ್ಯಾದಿ.

ನೀವೂ ಪ್ರಶ್ನೆ ಕಳಿಸಿ



ಹೊಟ್ಟೆಗೆ ಹಿಟ್ಟಿಲ್ಲದಿದ್ದರೂ ಜುಟ್ಟಿಗೆ ಮಲ್ಲಿಗೆ

ಇದು ಬಂಡವಾಳಿಗರ ನೀತಿ. ಭಾರತದ ಆರ್ಥಿಕ ಅಲ್ಲೋಲಕಲ್ಲೋಲವನ್ನು ಅನುಭವಿಸುತ್ತಿದೆ. ಹಲವು ಕಡೆ ಕ್ಷಾಮವಿದೆ. ಬಡತನ ಹೆಚ್ಚಾಗುತ್ತಿದೆ. ಬಡತನ ಮತ್ತು ಶ್ರೀಮಂತರ ನಡುವಿನ ಅಂತರ ತೀವ್ರವಾಗಿ ಹೆಚ್ಚಾಗುತ್ತಿದೆ. ಬಂಡವಾಳಶಾಹಿಗಳು ಭವಿಷ್ಯತ್ತಿನ ಕನಸನ್ನು ಮಾರುವ ಪ್ರಯತ್ನ ಮಾಡುತ್ತಿದ್ದಾರೆ.

ಈಗ ಅವರು ಮಾರುತ್ತಿರುವ ಕನಸು ಇದು. 2050ನೇ ಇಸವಿಯ ವೇಳೆಗೆ ಭಾರತ ಮೂರನೇ ಅತ್ಯಂತ ದೊಡ್ಡ ಆರ್ಥಿಕವಾಗಲಿದೆಯಂತೆ. ಗೋಲ್ಡ್‌ಮ್ಯಾನ್ ಸಾಕ್ಸ್ ಎಂಬಾತ ವಾಲ್‌ಸ್ಟ್ರೀಟ ಜರ್ನಲ್ ಎಂಬ ಪತ್ರಿಕೆಯಲ್ಲಿ ತಯಾರಿಸಿರುವ ಈ ವರದಿಯ ಪ್ರಕಾರ ಚೀನಾ ಮೊದಲ ಸ್ಥಾನದಲ್ಲಿದ್ದರೆ ಅಮೇರಿಕ ಎರಡನೇ ಸ್ಥಾನದಲ್ಲಿದ್ದು ಭಾರತ ಮೂರನೇ ಸ್ಥಾನದಲ್ಲಿರುತ್ತದೆ. ಚೀನಾದ ಬೆಳವಣಿಗೆ ದರ ಶೇ 4.7ರಷ್ಟಿದ್ದರೆ, ಭಾರತದಲ್ಲಿ ಅದು ಶೇ.6 ಮತ್ತು ಬ್ರೆಜಿಲ್‌ನಲ್ಲಿ ಶೇ 3.8 ರಷ್ಟಿರುತ್ತದಂತೆ.

ಇಂತಹ ವರದಿಯನ್ನು ತಯಾರಿಸಲು ಹಲವು ತರಹದ ಗಣನೆಗಳನ್ನು ಮಾಡಿದ್ದಾರೆ ಅವರು ಇರಲಿ. ಭಾರತದ ಇಂದಿನ ವಾಸ್ತವವೆಂದರೆ ನಾವು ಉದಾರೀಕರಣದ ಹೆಸರಿನಲ್ಲಿ ನಮ್ಮ ಆರ್ಥಿಕ ಸ್ವಾಯತ್ತತೆಯನ್ನೇ ಕಳೆದುಕೊಳ್ಳಹೊರಟಿದ್ದೇವೆ. ಉದಾರೀಕರಣ, ಜಾಗತೀಕರಣ ಮತ್ತು ಖಾಸಗೀಕರಣದ ಪ್ರಕ್ರಿಯೆಗೆ ಸಿಕ್ಕು ಹಲವು ಹೊಸ ಹೊಸ ತರಹದ ಸಮಸ್ಯೆಗಳಿಗೆ ಬುನಾದಿ ಹಾಕಿಕೊಂಡಿದ್ದೇವೆ. ಈಗಿನ ಮೂಲಭೂತ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ಬದಲು ಅವು ಹೆಚ್ಚು ಉಲ್ಬಣಗೊಳ್ಳುವಂತಾಗಿದೆ. ಹೀಗಿರುವಾಗ ಭಾರತ 2050 ರ ವೇಳೆಗೆ ಜಗತ್ತಿನ ಮೂರನೇ ಅತಿ ದೊಡ್ಡ ಆರ್ಥಿಕವಾಗುತ್ತದೆ ಎಂಬ ವರದಿಗೆ ಎಂತಹ ಬೆಲೆ ನೀಡಬೇಕು? ಬಹುಶಃ ಇದು ಒಂದು ಕೆಲಸವನ್ನು ಮಾಡಬಹುದು ಉಪಪ್ರಧಾನಿ ಎಲ್.ಕೆ. ಅಡ್ವಾಣಿಯವರ 2020 ರ ವೇಳೆಗೆ ಭಾರತ ಮುಂದುವರಿದ ದೇಶವಾಗಿರುತ್ತದೆ ಎಂಬ ಮಾತಿಗೆ ದೃಢೀಕರಣ ನೀಡಬಹುದು. ಕೋಮು ಸಮಸ್ಯೆಗಳಲ್ಲಿ ಬಡತನದಲ್ಲಿ ಪೈಪೋಟಿ ನಡೆಸಿ ದೇಶವನ್ನು ಮುನ್ನಡೆಸ ಬಯಸುವ ಎನ್.ಡಿ.ಎ ಸರ್ಕಾರ ದೇಶವನ್ನು ನಿಜಕ್ಕೂ ಹಿಂದಕ್ಕೊಯ್ಯುತ್ತಿರುವಾಗ 2050 ರ ಕನಸುಗಳು ಜುಟ್ಟಿಗೆ ಮಲ್ಲಿಗೆಯಂತಲ್ಲವೆ?

ಇಟಲಿಯಲ್ಲಿ ಸಾರ್ವತ್ರಿಕ ಮುಷ್ಕರ

ಸರ್ಕಾರ ಪದಚ್ಯುತಗೊಳಿಸುವತ್ತ ಪುನಃ ಸಾಗಿರುವ ಕಾರ್ಮಿಕ ವರ್ಗ

ಶರತ್‌ಚಂದ್ರ

ಅಕ್ಟೋಬರ್ 24 ರಂದು ಇಟಲಿಯ ಕಾರ್ಮಿಕ ವರ್ಗ ಅರ್ಧದಿನದ ಸಾರ್ವತ್ರಿಕ ಮುಷ್ಕರ ನಡೆಸಿತು. ಇಟಲಿಯಲ್ಲಿ ಅರ್ಧದಿನ ಜೀವನ ಸ್ತಬ್ದಗೊಂಡಿತ್ತು. ಒಂದು ಕೋಟಿಗೂ ಹೆಚ್ಚು ಕಾರ್ಮಿಕರು ಭಾಗವಹಿಸಿದ್ದು, ಅವರು ಪೆನ್ಶನ್ ಪದ್ಧತಿಯಲ್ಲಿ ಜನ-ವಿರೋಧಿ ಬದಲಾವಣೆಗಳನ್ನು ವಿರೋಧಿಸುತ್ತಿದ್ದರು. ಇಟಲಿಯ ಪ್ರಧಾನಿ ಬೆರ್ಲುಸ್ಕೋನಿ ಕಾರ್ಮಿಕ ವರ್ಗದ ಜತೆ ಘರ್ಷಣೆಯ ಹಾದಿ ಹಿಡಿದಿದ್ದು, ಕಾರ್ಮಿಕರ ಪ್ರತಿರೋಧದಿಂದ ಸರ್ಕಾರದ ರಾಜಕೀಯ ಬಿಕ್ಕಟ್ಟು-ಪದಚ್ಯುತಿಯತ್ತ ನಡೆದಿದೆ. 1994 ರಲ್ಲಿ ಕಾರ್ಮಿಕರ ಸಾರ್ವತ್ರಿಕ ಮುಷ್ಕರ ಮತ್ತು ಆ ಮೇಲಿನ ರಾಜಕೀಯ ಬೆಳವಣಿಗೆಗಳಿಗೆ ಇದೇ ಬೆರ್ಲುಸ್ಕೋನಿ ಸರ್ಕಾರ ಬಲಿಯಾಗಿತ್ತು ಎಂದು ಇಲ್ಲಿ ನೆನಪಿಸಿಕೊಳ್ಳಬಹುದು.

ಅಕ್ಟೋಬರ್ 24 ರಂದು ಇಟಲಿಯ ಕಾರ್ಮಿಕ ವರ್ಗ (ಮೂರು ಪ್ರಮುಖ ಟ್ರೇಡ್‌ಯೂನಿಯನ್‌ಗಳು - CGIL, CISL ಮತ್ತು UIL ನಾಯಕತ್ವದಲ್ಲಿ) ಸರ್ಕಾರದ ನೀತಿಗಳ ವಿರುದ್ಧ ಯುದ್ಧ ಘೋಷಿಸಿದೆ. ಇಟಲಿಯ ಬೆಲುಕಸ್ಕೋನಿ ಸರ್ಕಾರದ ಪೆನ್ಶನ್ ಯೋಜನೆಯಲ್ಲಿ ಕಾರ್ಮಿಕ-ವಿರೋಧಿ ಬದಲಾವಣೆಗಳನ್ನು ವಿರೋಧಿಸಿ ಈ ಮುಷ್ಕರ ಘೋಷಿಸಲಾಗಿತ್ತು. ಪೆನ್ಶನ್ ಯೋಜನೆಯಲ್ಲಿ ಬದಲಾವಣೆಗಳು, 2004 ಬಜೆಟ್ ಪ್ರಸ್ತಾವಗಳ ಭಾಗವಾಗಿರುವುದರಿಂದ ಮುಷ್ಕರ ಬಜೆಟ್ ವಿರುದ್ಧವೂ ಆಗಿತ್ತು.

ಪೆನ್ಶನ್ ಪಡೆಯಲು ಕೆಲಸ ಮಾಡಬೇಕಾಗಿರುವ ವರ್ಷಗಳನ್ನು 35 ರಿಂದ 40 ವರ್ಷಗಳಿಗೆ ಏರಿಸುವುದು ಬೆರ್ಲುಸ್ಕೋನಿ ಸರ್ಕಾರ ಮಾಡಬೇಕೆಂದಿರುವ ಪ್ರಮುಖ ಬದಲಾವಣೆ. ಈಗಿನ ಪೆನ್ಶನ್ ಯೋಜನೆ 2003 ರಲ್ಲೇ ಪೆನ್ಶನ್‌ಗೆ ಅರ್ಹರಾಗಿರುವವರು ಇನ್ನೂ ಐದು ವರ್ಷ ಕೆಲಸ ಮಾಡಬೇಕು. ಇನ್ನು ಐದು ವರ್ಷ ಕೆಲಸ ಮಾಡದಿದ್ದರೆ ಅಥವಾ ಕೆಲಸ ಸಿಗದಿದ್ದರೆ ಪೆನ್ಶನ್‌ನಿಂದ ವಂಚಿತರಾಗುತ್ತಾರೆ. ಈಗಿರುವ ನಿಯಮಗಳನ್ನು ಬದಲಾಯಿಸುವುದು, ಇಟಲಿಯ ಕಾರ್ಮಿಕರ ದೊಡ್ಡ ವಿಭಾಗವನ್ನು ಪೆನ್ಶನ್‌ನಿಂದ ವಂಚಿತರಾಗಿಸುವ ಸಂಚು ಎನ್ನುತ್ತಾರೆಕಾರ್ಮಿಕರು.

ಅದೂ ಈ ಪೆನ್ಶನ್ ಯೋಜನೆಯಲ್ಲಿ ಬದಲಾವಣೆಗಳು ತರುತ್ತಿರುವ ಸಂದರ್ಭ, ಗಾಯದ ಮೇಲೆ ಉಪ್ಪು ಹಚ್ಚಿದಂತಾಗಿದೆ. ಆರ್ಥಿಕತೆ ಸ್ಥಗಿತವಾಗಿದೆ. ಹಲವು ಕಾರ್ಖಾನೆಗಳು (ಅದರಲ್ಲೂ ಇಟಲಿಯ ಪ್ರಸಿದ್ಧ ಕಾರು ಕಾರ್ಖಾನೆಗಳು) ಮುಚ್ಚುತ್ತಿವೆ. ಸಾವಿರಾರು ಕಾರ್ಮಿಕರು ಉದ್ಯೋಗ ಕಳೆದುಕೊಳ್ಳುತ್ತಿದ್ದಾರೆ. ಎರಡನೇ ಮಹಾಯುದ್ಧ ನಂತರದ ಅವಧಿಯಲ್ಲಿ ಇಟಲಿ ಅತ್ಯಂತ ದೀರ್ಘ ಆರ್ಥಿಕ ಸ್ಥಗಿತತೆ ಎದುರಿಸುತ್ತಿದೆ. 2001ರ ವರ್ಷದ ಮೊದಲಿನಿಂದ ಆರ್ಥಿಕ ಸ್ಥಗಿತತೆ ಅವ್ಯಾಹತವಾಗಿ ಮುಂದುವರೆದಿದೆ. ಸಾಲದೆಂಬಂತೆ ಅವಶ್ಯಕ ಸಾಮಗ್ರಿಗಳ ಬೆಲೆ ಏರುತ್ತಿದೆ. ಯುವಜನರಿಗೆ ಟೆಂಪರರಿ, ಪಾರ್ಟ್‌ಟೈಂ ಕೆಲಸ ಮಾತ್ರ ದೊರಕುತ್ತಿದೆ. ಈ ಎಲ್ಲಾ ಸಾರ್ವತ್ರಿಕ ಮುಷ್ಕರದ ಮಹತ್ವವನ್ನು ಹೆಚ್ಚಿಸಿವೆ. ಅದು ಬರಿ ಸಾಂಕೇತಿಕ ಕಾರ್ಯಕ್ರಮ ಆಗಿಲ್ಲ.

ಸಾರ್ವತ್ರಿಕ ಮುಷ್ಕರದ ಸಫಲತೆ ಸರ್ಕಾರವನ್ನು ನಡುಗಿದೆ. ಹೆಚ್ಚಿನ ನಗರಗಳ ಕೈಗಾರಿಕೆಗಳಲ್ಲಿ ಮುಷ್ಕರದಲ್ಲಿ ಭಾಗವಹಿಸಿದ ಕಾರ್ಮಿಕ ಸಂಖ್ಯೆ ಶೇಕಡ 70 ರಿಂದ 100 ರವರೆಗೆ ಇತ್ತು. ಒಟ್ಟು ಒಂದು ಕೋಟಿಗೂ ಹೆಚ್ಚು ಕಾರ್ಮಿಕರು ಭಾಗವಹಿಸಿದ್ದರು. ಎಲ್ಲಾ ನಗರ, ಪಟ್ಟಣಗಳಲ್ಲಿ ಭಾರಿ ಕಾರ್ಮಿಕರ ಪ್ರದರ್ಶನಗಳು ಜರುಗಿದವು. ಪ್ರತಿ ಪ್ರದರ್ಶನ ಎಲ್ಲಾ ಟ್ರೇಡ್ ಯೂನಿಯನ್‌ಗಳ ಜಂಟಿ ಕಾರ್ಯಕ್ರಮ ಗಳಾಗಿದ್ದವು. ದೇಶಾದ್ಯಂತ 30 ಲಕ್ಷಕ್ಕೂ ಹೆಚ್ಚು ಕಾರ್ಮಿಕರು ಪ್ರದರ್ಶನಗಳಲ್ಲಿ ಭಾಗವಹಿಸಿದ್ದರು ಎಂದು ವರದಿಯಾಗಿದೆ. ಮಿಲನ್ ಪ್ರಧಾನಿ ಬೆರ್ಲುಸ್ಕೋನಿಯವರ ತವರೂರು. ಆದರಿಂದಾಗಿಯೇ ಏನೋ ಅಲ್ಲಿನ ಪ್ರದರ್ಶನ ದೇಶದಲ್ಲೇ ಅತ್ಯಂತ ದೊಡ್ಡ ಪ್ರದರ್ಶನವಾಗಿತ್ತು. ಎರಡು ಲಕ್ಷ ಕಾರ್ಮಿಕರು ಪ್ರದರ್ಶನದಲ್ಲಿ ಭಾಗವಹಿಸಿದ್ದರು.



ಆರ್ಥಿಕ ಸ್ಥಗಿತತೆ, ಬಿಕ್ಕಟ್ಟಿಗೆ ಪರಿಹಾರವಾಗಿ ಸಾಮಾಜಿಕ ಕಲ್ಯಾಣ ವೆಚ್ಚಗಳನ್ನು ಕಡಿತ ಮಾಡುವುದು, ಶ್ರೀಮಂತರಿಗೆ ಭಾರಿ ತೆರಿಗೆ- ಕಡಿತ ಮುಂತಾದ ಉತ್ತೇಜಗಳನ್ನು ನೀಡುವುದು - ಇವು ಎಲ್ಲೆಡೆ ಬಲಪಂಥೀಯ ಬೂರ್ಜ್ವಾ ಸರ್ಕಾರಗಳು ನಡೆಯುತ್ತಿರುವ ಹಾದಿ. ಇಟಲಿಯಲ್ಲಿ ಬೆರ್ಲುಸ್ಕೋನಿ ಸರ್ಕಾರ ಸಹ ಇದೇ ಹಾದಿಯಲ್ಲಿ ಸಾಗಿದೆ. ಆದರೆ ಒಂದೇ ವ್ಯತ್ಯಾಸವೆಂದರೆ ಇಟಲಿ ಕಾರ್ಮಿಕ ವರ್ಗ ಅತ್ಯಂತ ಬಲಾಢ್ಯವಾಗಿರುವ ದೇಶ. ಹಲವು ಸರ್ಕಾರಗಳನ್ನು ಪದಚ್ಯುತ ಗೊಳಿಸಿರುವ ಕೀರ್ತಿ ಅದರದು. ಇಂತಹ ಕಾರ್ಮಿಕ ವರ್ಗದ ಜತೆ ನೇರ ಘರ್ಷಣೆಗೆ ಇಳಿದಿರುವುದು ಪ್ರಧಾನಿ ಬೆರ್ಲುಸ್ಕೋನಿಯ ದಾಷ್ಟ್ರ್ಯ. ಸ್ವತಃ ಟಿ.ವಿ.ಸ್ಟೇಷನ್ ಸೇರಿದಂತೆ ಹಲವು ಮಾಧ್ಯಮ ಕಂಪನಿಗಳ ಒಡನೆಯನಾಗಿರುವ ಹಾಗೂ ಸರ್ಕಾರಿ ಶಕ್ತಿಯನ್ನು ತನ್ನ ವಹಿವಾಟಿಗೆ ಬಳಸಿ ಕುಖ್ಯಾತ 'ಭ್ರಷ್ಟ ಪ್ರಧಾನಿ' ಎನಿಸಿಕೊಂಡಿರುವನು.

ಕುಖ್ಯಾತ ಪೆನ್ಶನ್ ಯೋಜನೆ ಬದಲಾವಣೆಗಳನ್ನು ದೇಶಕ್ಕೆ 'ಮಾರು'ವಲ್ಲಿ ಪ್ರಧಾನಿ ಭಾರಿ ಪ್ರಯತ್ನ ನಡೆಸಿದ್ದಾರೆ. ಟಿ.ವಿ. ಸ್ಟೇಷನ್‌ಗಳ ಮೇಲೆ ತನ್ನ ನಿಯಂತ್ರಣ ಬಳಸಿ, ಪೆನ್ಶನ್ 'ಸುಧಾರಣೆ'ಗಳು ಹೇಗೆ ಒಳ್ಳೆಯವು ಎಂದು ನಂಬಿಸಲು ಪ್ರಯತ್ನಿಸಿದ. ಇದಲ್ಲದೆ 1.8 ಕೋಟಿ ಮನೆಗಳಿಗೆ ಪತ್ರ ಬರೆದು ಈ ಬದಲಾವಣೆ ಹೇಗೆ ಅನಿವಾರ್ಯ ಎಂದು ನಂಬಿಸಲು ಪ್ರಯತ್ನಿಸಿದ. ಇದಕ್ಕೆ ತೆರಿಗೆದಾರರ ಹಣವನ್ನು ಬಳಸಲಾಯಿತು ಎಂದು ಬೇರೆ ಹೇಳಬೇಕಾಗಿಲ್ಲ. ಈ ಪ್ರಸ್ತಾವಗಳನ್ನು ಕ್ಯಾಬಿನೆಟ್ ಮಾತ್ರ ಮಂಜೂರು ಮಾಡಿದ್ದು, ಇನ್ನೂ ಪಾರ್ಲಿಮೆಂಟು ಮುಂದೆಬಂದಿಲ್ಲ. ಈ ಹಿನ್ನೆಲೆಯಲ್ಲಿ ಪ್ರಧಾನಿ, ಸರ್ಕಾರದ ಉದ್ಧಟ, ಆಕ್ರಮಕ ನೀತಿ ಕಾರ್ಮಿಕ ವರ್ಗ ಮಾತ್ರವಲ್ಲ, ಜನತೆಯನ್ನು ರೊಚ್ಚಿಗೆಬ್ಬಿಸಿದೆ.

ಪ್ರಧಾನಿಯ ಟಿ.ವಿ. ಭಾಷಣದ ನಂತರದ ಟಿ.ವಿ.ಸ್ಟೇಷನ್‌ವೊಂದು 'ಲೈವ್' ಸರ್ವೇಕ್ಷಣ ನಡೆಸಿತು. ಸರ್ವೇಕ್ಷಣೆ ಯಾವ ಐದನ್ನು ನೀವು ಸಂಪೂರ್ಣವಾಗಿ ಕೊನೆಗೊಳಿಸಬಯಸುತ್ತೀರಿ ಅಂತ ಕೇಳಿತ್ತು. ಮೊದಲ ಎರಡು ಸ್ಥಾನ ಗಳಿಸಿದವರೆಂದರೆ ಪ್ರಧಾನಿ ಬೆರ್ಲುಸ್ಕೋನಿ ಮತ್ತು ಆತನ ಪಕ್ಷ 'ಫೋರ್ಜಾ ಇಟಲಿಯಾ'. ಸರ್ವೇಕ್ಷಣೆ ನಡೆಸಿದ ಟಿ.ವಿ. ಸ್ಟೇಷನ್ ತಬ್ಬಿಬ್ಬಾಗಿತ್ತು. ಟಿ.ವಿ.ಬಳಸಿ ಪ್ರಧಾನಿಯಾದ ಬೆರ್ಲುಸ್ಕೋನಿ, ಟಿ.ವಿ.ಯೇ ಕೊನೆಗೊಳಿಸುತ್ತದೆ ಎಂಬುದು ಜನತೆಯ ತೀರ್ಪಾಗಿತ್ತು.

ಪಾರ್ಟ್‌ಟೈಂ ಮುಷ್ಕರವೋ? ಸರ್ಕಾರವೋ?

ಪ್ರಧಾನಿ ಮಾತ್ರವಲ್ಲ, ಆತನ ಹಲವು ಮಂತ್ರಿಗಳು ಉದ್ಧಟತನದ ಮಾತನಾಡಿದ್ದಾರೆ. ಅರ್ಧದಿನದ ಸಾರ್ವತ್ರಿಕ ಮುಷ್ಕರವನ್ನು ಪಾರ್ಟ್ ಟೈಂ ಮುಷ್ಕರ ಎಂದು ಲೇವಡಿ ಮಾಡಿದ್ದಾರೆ. ಕಾರ್ಮಿಕರು ಫುಲ್‌ಟೈಂ ಮುಷ್ಕರ ಮಾಡಲು ತಯಾರಿ ನಡೆಸಿದ್ದಾರೆ. ಸರ್ಕಾರ ಈ ಎಚ್ಚರಿಕೆಗೆ ಕಿವಿಗೊಡದಿದ್ದರೆ ಈ ಬಾರಿಯ ಮುಷ್ಕರದ ನಂತರ ಪಾರ್ಟ್‌ಟೈಮ್ ಆಗಿರುವುದು ಸರ್ಕಾರ. ಸರ್ಕಾರ ಈ ಎಚ್ಚರಿಕೆಗೆ ಕಿವಿಗೊಡದಿದ್ದರೆ, ಅದರ ಟೈಮ್ ಮುಗಿಯಲಿದೆ ಎಂದು ಎಡಪಂಥೀಯ ವಿರೋಧ ಪಕ್ಷಗಳ ನಾಯಕರೊಬ್ಬರು ಹೇಳಿದ್ದಾರೆ.

1994 ರ ಪುನರಾವರ್ತನೆಯಾಗುವುದೇ?

ಪ್ರಧಾನಿ ಮತ್ತು ಆತನ ಆಳುವ ಪಕ್ಷ ಕಾರ್ಮಿಕ ವರ್ಗದ ಜತೆ ಘರ್ಷಣೆಗೆ ಇಳಿದಿದೆ. ಆದರೆ ಆತನ ಕಿಚಡಿ 'ಸಮ್ಮಿಶ್ರ' ಸರ್ಕಾರದ ಇತರ ಪಕ್ಷಗಳಿಗೆ ಭಯ ಆದಂತಾಗಿದೆ - ಮುಷ್ಕರದ ನಂತರ ಪ್ರಧಾನಿ ಮತ್ತು ಮಂತ್ರಿಮಂಡಲದ ಮೇಲೆ ಪೆನ್ಶನ್ ಯೋಜನೆಯಲ್ಲಿ ಬದಲಾವಣೆಗಳನ್ನು ಹಿಂತೆಗೆಯುವಂತೆ ಅವು ಒತ್ತಡ ಹೇರುತ್ತಿವೆ. ಇಲ್ಲದಿದ್ದರೆ ಪ್ರಧಾನಿ ಬೆರ್ಲುಸ್ಕೋನಿಗೆ 1994 ಅಕ್ಟೋಬರ್‌ನ ಚರಿತ್ರೆ ಪುನರಾವರ್ತನೆಯಾಗುವುದು ಎಂದು ವಿರೋಧ ಪಕ್ಷಗಳು ಎಚ್ಚರಿಸಿವೆ. ಆಗಲೂ ಇದೇ ಪೆನ್ಶನ್ ಯೋಜನೆ ಬಗ್ಗೆ ವಿವಾದಕ್ಕೆ ಸಾರ್ವತ್ರಿಕ ಮುಷ್ಕರ ನಡೆದು, ಸರ್ಕಾರ ತನ್ನ ಉದ್ಧಟತನ ಮುಂದುವರಿಸಿತ್ತು. ಆದರೆ ಸಮ್ಮಿಶ್ರ ಸರ್ಕಾರದ ಇತರ ಪಕ್ಷಗಳು ಬೆಂಬಲ ವಾಪಸು ಪಡೆದು ಸರ್ಕಾರ ಬಿದ್ದುಹೋಗಿತ್ತು.

ಚರಿತ್ರೆಯ ಪುನರಾವರ್ತನೆಯಾಗುವುದೇ?

.... ನಿಮ್ಮ ಕನಸುಗಳನ್ನು ನಾವು ನನಸಾಗಿಸುತ್ತೇವೆ

ಪುಟ 9 ರಿಂದ

ಜನಸಾಮಾನ್ಯರನ್ನು ಶಕ್ತಿಹೀನರನ್ನಾಗಿ ಮಾಡಿವೆ. ವರ ನೀತಿಗಳು ದೊಡ್ಡ ಬಂಡವಾಳಗಾರ ಹಾಗೂ ಕಾರ್ಪೊರೇಟ್ ಕಂಪನಿಗಳಿಗೆ ಮಾತ್ರ ಅನುಕೂಲ ದಗಿಸಿವೆ. ಇಡೀ ದೇಶದ ಬಹುಪಾಲು ಸಮಾಜ ೀವ್ರತರನಾದ ಸಂಕಷ್ಟವನ್ನು ಈ ನೀತಿಗಳ ರಿಣಾಮವಾಗಿ ಎದುರಿಸುತ್ತಿರುವಾಗ ್ರಧಾನಮಂತ್ರಿ ವಾಜಪೇಯಿಯವರು ನಮ್ಮ ೇಶದ ಆರ್ಥಿಕ ಸ್ಥಿತಿ ಉತ್ತಮವಾಗಿಯೇ ಇದೆ ನ್ನುತ್ತ ಮುಂಬರುವ ದಿನಗಳಲ್ಲಿ ನಾವು ಶೇ6.7 ಷ್ಟು ಜಿ.ಡಿ.ಪಿ ಸಾಧಿಸುತ್ತೇವೆ ಎಂದು ೇಳುತ್ತಿರುವುದನ್ನು ದೇವೇಗೌಡರು ಕಟುವಾಗಿ ೀಕಿಸಿದರು. ದೇಶದ ಕೃಷಿ ವ್ಯವಸ್ಥೆಯನ್ನು ಶಮಾಡಿ ರೈತರನ್ನು ಆತ್ಮಹತ್ಯೆಗೆ ದೂಡುವ ರ್ಮಿಕ ವರ್ಗವನ್ನು ಬೀದಿಪಾಲು ಮಾಡುತ್ತಿರುವ ೀತಿಗಳನ್ನು ಕೈಬಿಡಬೇಕೆಂದು ಅಂದು ಗ್ರಹಪಡಿಸಿದರು.

ನಾನು ಕಳೆದ ಹಲವಾರು ವರ್ಷಗಳಿಂದ ಎಡಪಕ್ಷಗಳ ಜೊತೆ ಅದರಲ್ಲೂ ಸಿಪಿಐ(ಎಂ) ಬೆಂಬಲದೊಂದಿಗೆ ಪಾರ್ಲಿಮೆಂಟಿನ ಒಳಗೂ ಹೊರಗೂ ಈ ನೀತಿಗಳ ವಿರುದ್ಧ ಹೋರಾಡುತ್ತಿದ್ದೇನೆ. ನನ್ನ ಅಧಿಕಾರಾವಧಿಯಲ್ಲಿ ಎಡಪಕ್ಷಗಳ ಮಾರ್ಗ ದರ್ಶನದೊಂದಿಗೆ ರೈತರಿಗೆ ಮತ್ತು ಶೋಷಿತ ಜನರ ಪರವಾದ ನೀತಿಗಳನ್ನು ಜಾರಿಗೊಳಿಸಿದ್ದನ್ನು ಅವರು ಈ ಸಂದರ್ಭದಲ್ಲಿ ನೆನಪಿಸಿಕೊಂಡರು.

ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸುರ್ಜಿತ್ ಮಾತನಾಡುತ್ತಾ ಕೋಮುವಾದಿ ಶಕ್ತಿಗಳ ವಿರುದ್ಧ ಯುವಜನರು ಪ್ರಭಲ ಹೋರಾಟ ನಡೆಸಲು ಕರೆ ನೀಡಿದರು. ಪಂಜಾಬ್‌ನಲ್ಲಿ ಕಾಂಗ್ರೆಸ್ ಮತ್ತು ಅಕಾಲಿ ದಳ ಆಡಳಿತದಲ್ಲಿ ಜನಸಾಮಾನ್ಯರು ಅತ್ಯಂತ ನಿರ್ಲಕ್ಷ್ಯಕ್ಕೊಳಗಾಗಿದ್ದಾರೆ. ರಾಜ್ಯದಲ್ಲಿ ಉಂಟಾಗಿರುವ ರಾಜಕೀಯ ಶೂನ್ಯವನ್ನು ಹೋಗಲಾಡಿಸಲು ಕೋಮುವಾದದ ವಿರುದ್ಧ ಹೋರಾಡುತ್ತಿದ್ದು ರಾಜಕೀಯ ಶಕ್ತಿಗಳು ಶ್ರಮಿಸಲು ಕರೆ ನೀಡಿದರು.

ಕೋಮುವಾದಿ ಶಕ್ತಿಗಳ ಜೊತೆ ಅಕಾಲಿದಳದ ಸಖ್ಯತೆಯನ್ನು ವಿಶ್ಲೇಷಿಸಿದ ಸುರ್ಜಿತ್ ಇದು ಸಿಖ್ ಧರ್ಮದ ಮೌಲ್ಯಗಳಿಗೆ ವಿರುದ್ಧವಾದುದಾಗಿದೆ ಎಂದರು. ಯುವಜನರ ಮಧ್ಯೆ ಏಕೈಕ ಪ್ರಬಲ ಶಕ್ತಿಯಾಗಿರುವ ಡಿ.ವೈ.ಎಫ.ಐ ಪಂಜಾಬ್‌ನಲ್ಲಿ ಪ್ರಮುಖ ಸಂಘಟನೆಯಾಗಿ ಬೆಳೆಸಲು ಕರೆ ನೀಡಿದರು.

ಭಯ, ಹಸಿವು ಹಾಗೂ ಭ್ರಷ್ಟಾಚಾರವನ್ನು ನಿರ್ಮೂಲನೆ ಮಾಡುವ ಭರವಸೆಯೊಂದಿಗೆ ಅಧಿಕಾರಕ್ಕೆ ಬಂದ ವಾಜಪೇಯಿ ಸರ್ಕಾರ ಸಂಪೂರ್ಣ ಅದಕ್ಕೆ ತದ್ವಿರುದ್ಧವಾಗಿ ನಡೆದುಕೊಂಡಿದೆ ಎಂದು ಸಿಪಿಐ(ಎಂ) ಪಾಲಿಟ್ ಬ್ಯೂರೋ ಸದಸ್ಯರಾದ ಕಾಂ. ಸಿತಾರಾಂ ಯೆಚೂರಿ ಆರೋಪಿಸಿದರು. ದೇಶದ ಜನತೆಯಿಂದ ಅತಂತ್ರ ಬದುಕು ಸಾಗಿಸುತ್ತಿರುವ ಈ ಸಂದರ್ಭದಲ್ಲಿ ದೇಶದ ಪ್ರಧಾನಿ ಮಾತ್ರ ಇದ್ಯಾವುದನ್ನು ಲಕ್ಷಿಸದೇ ತನ್ನ ಖುರ್ಚಿ ಭದ್ರಪಡಿಸಿಕೊಳ್ಳುತ್ತಿದ್ದಾರೆ ಎಂದು ಯೆಚೂರಿ ವ್ಯಂಗ್ಯ ಮಾಡಿದರು.

ಪಂಜಾಬ್‌ನಲ್ಲಿ 7ನೇ ಅಖಿಲ ಭಾರತ ಸಮ್ಮೇಳನ ನಡೆದಿರುವ ಸಂದರ್ಭವನ್ನು ನೆನಪಿಸಿದ ಯೆಚೂರಿ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಅಪಾರ ತ್ಯಾಗ- ಬಲಿದಾನಗಳ ಮೂಲಕ ಕ್ರಾಂತಿಕಾರಿ ಪರಂಪರೆಯೂ ಸೃಷ್ಟಿಸಿರುವ ಪಂಜಾಬ್, ಕ್ರಾಂತಿಕಾರಿಗಳ ಪಾಲಿಗೆ ಮಾತ್ರ ಕೇಂದ್ರವಾಗಿದೆ. ದೇಶದ ವಿವಿಧ ಭಾಗಗಳಲ್ಲಿ ಅಪಾರವಾದ ತ್ಯಾಗ-ಬಲಿದಾನಗಳ ಪರಂಪರೆಯನ್ನು ಹೊಂದಿರುವ ದೇಶಪ್ರೇಮಿ ಸಂಘಟನೆಯಿದ್ದರೆ ಅದು ಡಿ.ವೈ.ಎಫ್.ಐ ಮಾತ್ರವೇ ಎಂದು ಸೀತಾರಾಂ ಯೆಚೂರಿ ಹೇಳಿದರು.



ಬಾಂಧವ್ಯ ಬೆಸೆದ ಆಫ್ರೋ - ಏಶ್ಯನ್ ಕ್ರೀಡಾ ಕೂಟ


ಪ್ರಥಮ ಆಫ್ರೋ-ಏಶಿಯನ್ ಕ್ರೀಡಾಕೂಟ ಹೈದ್ರಾಬಾದ್‌ನಲ್ಲಿ ಯಶಸ್ವಿಯಾಗಿ ಜರುಗುವುದರೊಂದಿಗೆ ಎರಡೂ ಖಂಡಗಳ ನಡುವೆ ಕ್ರೀಡಾ ಬಾಂಧವ್ಯ ಬೆಸೆಯುವುದಕ್ಕೆ ನಾಂದಿ ಹಾಡಿದೆ. ಹಲವಾರು ಓರೆ-ಕೋರೆ, ಏಳುಬೀಳುಗಳ ಹೊರತಾಗಿಯೂ ಇಂತಹ ಯತ್ನಗಳು ಸ್ವಾಗತಾರ್ಹ...

80 ರ ದಶಕದಿಂದ ಆಫ್ರಿಕಾ-ಏಷ್ಯಾಖಂಡಗಳ ಸಂಯುಕ್ತ ಕ್ರೀಡಾಕೂಟ ನಡೆಸಲು ಭಾರತ ಆರಂಭಿಸಿದ ಪ್ರಾರಂಭಿಕ ಹೆಜ್ಜೆಯೊಡನೆ ಅನೇಕ ವರ್ಷಗಳ ಏಳುಬೀಳುಗಳ ಪ್ರಯತ್ನದೊಂದಿಗೆ ಪ್ರಥಮ ಆಫ್ರೊ-ಏಷ್ಯನ್ ಕ್ರೀಡಾಕೂಟ ಹೈದರಾಬಾದ್‌ನಲ್ಲಿ ನಡೆಯಿತು. ಗುಣಮಟ್ಟದಲ್ಲಿ ಸೊರಗಿದ ಈ ಕ್ರೀಡಾಕೂಟ ವಸಾಹತುಶಾಹಿಗಳ ಹಿಡಿತದಲ್ಲಿ ಶತಮಾನಗಳ ಕಾಲ ನಲುಗಿದ ಈ ಎರಡೂ ಖಂಡಗಳ ನಡುವೆ ಒಂದು ಹೊಸ ಕ್ರೀಡಾ ಬಾಂಧವ್ಯ ಬೆಸೆಯುವಲ್ಲಿ ಸಹಕಾರಿಯಾಯಿತು. ವಾಸ್ತವವಾಗಿ ಭಾರತ 2010 ರ ಕಾಮನ್‌ವೆಲ್ತ್ ಕ್ರೀಡಾಕೂಟ ನಡೆಸಲು ಪ್ರಯತ್ನಿಸುತ್ತಿದೆ. ಇದಕ್ಕೆ ಪೂರಕವಾಗಿ ಬೃಹತ್ ರೀತಿಯ ಅಂತಾರಾಷ್ಟ್ರೀಯ ಮಟ್ಟದ ಈ ಆಫ್ರೊ-ಏಷ್ಯನ್ ಕ್ರೀಡಾಕೂಟವನ್ನು ಯಶಸ್ವಿಯಾಗಿ ನಡೆಸಿಕೊಡುವ ಮೂಲಕ ತನಗೆ ಬೃಹತ್ ಕ್ರೀಡಾಕೂಟಗಳನ್ನು ನಡೆಸುವ ಸಾಮರ್ಥ್ಯವಿದೆ ಎಂದು ಸಾಬೀತುಪಡಿಸಿತು. ಹೈದರಾಬಾದ್‌ನಲ್ಲಿ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಹೊಸ ಆರ್ಥಿಕ ನೀತಿಯ ಭಾಗವಾಗಿ ವಿಶ್ವದ ಬಂಡವಾಳಗಾರರನ್ನು ಸೆಳೆಯುವ ಸಲುವಾಗಿ ಈ ಆಫ್ರೊ-ಏಷ್ಯನ್ ಕ್ರೀಡಾಕೂಟವನ್ನು ಒಂದು ಅಸ್ತ್ರವನ್ನಾಗಿ ಉಪಯೋಗಿಸಿಕೊಂಡರು.

AFRO-ASIAN GAMES COUNCIL

ಏಷ್ಯನ್ ಕ್ರೀಡಾಕೂಟವನ್ನು ಆರಂಭಿಸುವಲ್ಲಿ ಪ್ರಥಮ ಹೆಜ್ಜೆ ಇರಿಸಿ ಇತಿಹಾಸ ನಿರ್ಮಿಸಿದ ಭಾರತ ಇಂದು ಪ್ರಥಮ ಆಫ್ರೊ ಏಷ್ಯನ್ ಕ್ರೀಡಾಕೂಟ ನಡೆಸಿ ಕ್ರೀಡಾ ಇತಿಹಾಸದಲ್ಲಿ ಇನ್ನೊಂದು ಪುಟ ತೆರೆಯಿತು.

ಆಫ್ರಿಕಾ ಖಂಡ ಇಂದು ಕ್ರೀಡೆಯಲ್ಲಿ ದೈತ್ಯ ಶಕ್ತಿ, ಕೀನ್ಯಾ, ಅಲ್ಜೀರಿಯಾ, ಮೊರಕ್ಕೋ, ಇಥಿಯೋಪಿಯಾ, ಉಗಾಂಡಾ ದೇಶಗಳ ದೂರ ಓಟಗಾರರು, ಇಡೀ ಆಫ್ರಿಕಾ ಖಂಡದ ಎಲ್ಲಾ ದೇಶಗಳ ಕಾಲ್ಚೆಂಡು ಆಟಗಾರರು ಇಂದು ವಿಶ್ವ ಶ್ರೇಷ್ಠರು. ಆದರೆ ಈ ಎಲ್ಲಾ ದೇಶಗಳ ಶ್ರೇಷ್ಠ ಕ್ರೀಡಾಪಟುಗಳು ಈ ಕ್ರೀಡಾಕೂಟಕ್ಕೆ ಗೈರು ಹಾಜರಾಗಿದ್ದರು. ಇದೇ ರೀತಿ ಚೀನಾ ಕೂಡಾ ತನ್ನ ಮೊದಲನೇ ಹಾಗೂ ಎರಡನೇ ದರ್ಜೆಯ ಕ್ರೀಡಾಪಟುಗಳನ್ನು ಈ ಕ್ರೀಡಾಕೂಟಕ್ಕೆ ಕಳುಹಿಸಿಕೊಡದೆ ಇದೀಗ ಅರಳುತ್ತಿರುವ ಹೊಸ ಯುವ ಪ್ರತಿಭೆಗಳನ್ನು ಈ ಕ್ರೀಡಾಕೂಟಕ್ಕೆ ಕಳುಹಿಸಿಕೊಟ್ಟರೂ ಸಹಾ ಚಿನ್ನದ ಪದಕ ಗಳಿಕೆಯಲ್ಲಿ ಪ್ರಥಮ ಸ್ಥಾನ ಪಡೆಯಿತು. ಭಾರತ ಪದಕ ಗಳಿಕೆಯಲ್ಲಿ ಎರಡನೇ ಸ್ಥಾನ ಪಡೆಯಿತು. ವಿಶ್ವ ಶ್ರೇಷ್ಠ ಓಟಗಾರರ ಗೈರು ಹಾಜರಿಯಲ್ಲೂ ಸಹಾ ಆಫ್ರಿಕಾ ಖಂಡದ ಕ್ರೀಡಾಪಟುಗಳು ದೂರ ಹಾಗೂ ವೇಗದ ಓಟದ ಸ್ಪರ್ಧೆಗಳಲ್ಲಿ ಏಕಸ್ವಾಮ್ಯ ಸಾಧಿಸಿದರು.



ಭಾರತಯುಲ್ಲಿ ತನ್ನ ಸಾಂಪ್ರದಾಯಿಕ ಎದುರಾಳಿ ಪಾಕಿಸ್ತಾನವನ್ನು ಮತ್ತೊಮ್ಮೆ ಸೋಲಿಸಿ ತನ್ನ ಪ್ರಾಬಲ್ಯ ಮೆರೆಯಿತು. ಭಾರತದ ಮಹಿಳೆಯರೂ ಹಾಕಿಯಲ್ಲಿ ಪ್ರಬಲ ಎದುರಾಳಿ ದಕ್ಷಿಣ ಕೋರಿಯಾವನ್ನು ಸೋಲಿಸಿ ಚಿನ್ನದ ಪದಕ ಪಡೆದದ್ದು ಇನ್ನೊಂದು ವಿಶೇಷ. ಜೊತೆಯ... ಅಥ್ಲೆಟಿಕ್ಸ್, ಟೆನಿಸ್, ಶೂಟಿಂಗ್, ಭಾರ ಎತ್ತು... ಸ್ಪರ್ಧೆಯಲ್ಲಿ ಭಾರತದ ಕ್ರೀಡಾಪಟುಗಳು ಪದ... ಗಳಿಸಿದರು. ಫುಟ್ಬಾಲ್‌ನಲ್ಲಿ ಕೂಡ... ಭಾರತ ಬೆಳ್ಳಿಯ ಪದಕ ಗಳಿಸಿ... ವಿಶೇಷ ಸಾಧನೆ.

ಭಾರತ ಆರಂಭಿಸಿದ ಏಷ್ಯ... ಕ್ರೀಡಾಕೂಟ ಇಂದ... ಯಶಸ್ವಿಯಾಗಿ ಮುಂದುವ... ದಿರುವ ರೀತಿಯಲ್ಲಿ ಇದಿ... ಭಾರತದಿಂದಲೇ ಉದ... ವಾಗಿರುವ ಆಫ್ರೋ- ಏಷ್ಯ... ಕ್ರೀಡಾಕೂಟ ಮುಂದ... ಯಶಸ್ವಿಯಾಗಿ ಮುನ್ನಡೆ... ಬೇಕಾಗಿದೆ.

ಮೆಲ್ಕಿಯೋರ್.ಆರ್...



ಭರವಸೆಯ ಟೆನಿಸ್ ಪಟು ಸನಿಯಾ



ಕರ್ನಾಟಕದ ಹೆಮ್ಮೆಯ ಶೋಭಾ

ಮುಖ್ಯಮಂತ್ರಿ ಗೋವಿಂದ...

ಗೋವಿಂದ, ಗೋವಿಂದ
ಮುಖ್ಯಮಂತ್ರಿ ಗೋವಿಂದ ॥ ಗೋವಿಂದ...

ಶಂಖ ಜಾಗಟೆ ಹೊಡೆಯುತ ಬಂದ
ಪಾದಯಾತ್ರೆಯಲಿ ಬೂದಿ ಉಗ್ಗಿದ
ಜನಸ್ಪಂದನದಿ ಜನಮರುಳು ಮಾಡಿದ
ಅಮ್ಮನ ಹೆಸರಲಿ ಆಳುವೆನೆಂದ ॥ ಗೋವಿಂ...

ವಾಸ್ತುಪುರುಷನ ಔರಸ ಪುತ್ರನು
ಇನ್ಫೋಸಿಸ್‌ನ ಬಾಡಿಗೆ ಸಖನು
ಕೊಜೆಂಟ್ರಿಕ್ಸ್‌ಗೆ ಕೊಡುಗೈ ದಾನಿ
ಪ್ರಜೆಗಳ ಪ್ರಶ್ನೆಗೆ ಮಹಾ ಮೌನಿ ॥ ಗೋವಿಂ...

ಬಲಗೈಯಲ್ಲಿ ವಿಷದ ಬಾಟಲಿ
ಎಡಗೈಯಲ್ಲಿ ಪರಿಹಾರದ ಚೆಕ್ಕು
ರೈತರ ಬದುಕಿನ ಕೊರಳಿಗೆ ನೇಣು
ಕೂಲಿ ಜನಗಳ ಹೈಟೆಕ್ 'ಯಮ'ನು ॥ಗೋವಿ...

ಕೆರೆ ಕೇಳಿದರೆ ಹೊಳೆ ತೋರಿಸಿ...
ಮಳೆ ಎಂದರೆ ಮುಗಿಲು ತೋರಿಸಿದ
ವಿದೇಶದಿಂದ ವಿಮಾನ ತರಿಸಿ
ಹನಿ ಉದುರಿಸುವ ಆಟ ಆಡಿದ ॥ ಗೋವಿಂದ...

ಅಮೇರಿಕಾಕ್ಕೆ ಸಲಾಮು ಹೊಡೆದ
ಬಿಲ್‌ಗೇಟ್ಸ್‌ನ ಕಾಲನು ಹಿಡಿದ
ಕಂಪನಿಗಳಿಗೆ ಪಂಪನು ಹೊಡೆದು
ಪರ್ಸೆಂಟೇಜಲಿ ಪಾಲನು ಪಡೆದ ॥ ಗೋವಿಂ...

ಉಂಡರು, ಹೇತರೂ ಕಂಪ್ಯೂಟರ್ರು
ಕನಸಿನ ತುಂಬ ಸಾಫ್ಟ್‌ವೇರು
ಬಾಯಿಬಿಟ್ಟರೆ ಸಿಂಗಾಪೂರು
ಈ ಹೈಟೆಕ್ ಹೈದನ ಕಾರುಬಾರು ॥ ಗೋವಿಂ...

ಇವನ ಕೂದಲಿಗೆ ಲಕ್ಷ ರೂಪಾಯಿ
ಹಲ್ಲಿನ ಸೆಟ್ಟು ತೆಗೆದರೆ ಬೊಚ್ಚುಬಾಯಿ
ದೊರೆಸಾನಿಯ (ಸೋನಿಯಾ) ನಿಷ್ಠೆಯ ನಾಯಿ...
ಕಳ್ಳಗಂಟಿನ ಶಿಸ್ತಿನ ಸಿಪಾಯಿ ॥ ಗೋವಿಂ...

ಬಿನ್ನಮತದ ಬಾಯಿ ಮುಚ್ಚಿಸಿದ
ಬದಲಿ ನಾಯಕರ ಬೀಜ ಹಿಚುಕಿದ
ಮಧ್ಯರಾತ್ರಿಯಲಿ ದಿಲ್ಲಿಗೆ ಹಾರಿ
ಕಾಣಿಕೆ ಕೊಟ್ಟು ವರವನು ಪಡೆದ ॥ ಗೋವಿಂ...

ಕಾಡುಗಳ್ಳನಿಗೆ ರತ್ನಗಂಬಳಿ
ತೆರಿಗೆಗಳ್ಳರಿಗೆ ರಾಜ್ಯ ಉಂಬಳಿ
ಇಂಥ ರಾಜ್ಯದಲಿ ಸುಮ್ಮನಿದ್ದರೆ
ಉಳಿಯುವುದೊಂದೇ ಸುಡುಗಾಡಿಗೆ ದಾ...
ಗೋವಿಂದ ॥

ಗುತ್ತಿಗೆದಾರರ ಸರಕಾರದಲ್ಲಿ
ಕೂಲಿಜನಗಳ ಗೋರಿಗೆ ಪ್ಲ್ಯಾನು
ಏಳಿರಿ ಜನರೇ ಕೇಳಿರಿ ಪ್ರಶ್ನೆ
ದುಡಿದ ಜನರು ಇಲ್ಲಿ ಪಡೆದದ್ದೇನು? ॥ ಗೋವಿ...

- ಪೀರ್‌ಬಾ...
ಹೂವಿನ ಹ...

ಪ್ರಖ್ಯಾತ ರಂಗಕರ್ಮಿ ಸಪ್ದರ್ ಹಷ್ಮಿ ಕೊಲೆ ಪ್ರಕರಣ


ಕೊನೆಗೂ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಸಂದ ಜಯ

ಹದಿನಾಲ್ಕು ವರುಷಗಳ ಹಿಂದೆ, ಹೊಸ ವರುಷದ ದಿನ 'ಹಲ್ಲಾ ಬೋಲ್' ನಾಟಕ ಪ್ರದರ್ಶನ ನೀಡುತ್ತಿರುವಾಗಲೇ ಧಾಳಿ ನಡೆಸಿದ ಕಾಂಗ್ರೆಸ್ ಗೂಂಡಾಗಳು ಖ್ಯಾತ ನಾಟಕಕಾರ ಕ್ರಾಂತಿಕಾರಿ ಸಪ್ದರ್ ಹಷ್ಮಿ ಮತ್ತು ಸಂಗಾತಿಯೊಬ್ಬನನ್ನು ಕೊಂದರು. ಈ ಕೊಲೆ ಮೊಕದ್ದಮೆ ತೀರ್ಪು ಇದೀಗ ಹೊರಬಂದಿದೆ. ಜೀವಾವಧಿ ಶಿಕ್ಷೆ ವಿಧಿಸಿದೆ. ತಡವಾದರೂ ಸರಿಯಾದ ಈ ತೀರ್ಪು ಸ್ವಾಗತಾರ್ಹ

ಕೋಮು ಸಾಮರಸ್ಯ ಮತ್ತು ಸಾಮಾಜಿಕ ನ್ಯಾಯಕ್ಕಾಗಿ ಹೋರಾಡುತ್ತಿದ್ದ ಎಡಪಂಥೀಯ ವಿಚಾರಧಾರೆಯ ಪ್ರಸಿದ್ಧ ರಂಗಕರ್ಮಿ ಸಿಪಿಐ(ಎಂ) 35 ರ ಹರೆಯ ಸಪ್ದರ್ ಹರ್ಷಿಯನ್ನು ಹತ್ಯೆಗೈದ ರಾಜಕಾರಣಿ ಮುಖೇಶ್ ಶರ್ಮಾ ಹಾಗೂ ಇವನ 9 ಮಂದಿ ಬೆಂಬಲಿಗರಿಗೆ ಗಾಜಿಯಾಬಾದ್ ನ್ಯಾಯಾಲಯ ಜೀವಾವಧಿ ಶಿಕ್ಷೆ ನೀಡಿದೆ. ಇದು ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಕಾನೂನು ಕೊಟ್ಟ ಮಾನ್ಯತೆಯಾಗಿದೆ.

ಸಪ್ದರ್ ಹಷ್ಮಿ ದೆಹಲಿ ಹೊರವಲಯದ ಶಾಹಿದಾಬಾದ್‌ನ ಝುಂಡಾಪುರದಲ್ಲಿ 1989 ರ ಹೊಸ ವರ್ಷದ ಮೊದಲದಿನ "ಹಲ್ಲಾ ಬೋಲ್" ಎಂಬ ಬೀದಿನಾಟಕ ಪ್ರದರ್ಶನದ ಸಂದರ್ಭದಲ್ಲಿ, ಮುಖೇಶ್ ಶರ್ಮ ಎಂಬಾತ ಒಂದು ಗುಂಪು ಸಹಿತ ದಾಳಿ ನಡೆಸಿ ಸಪ್ದರ್ ಹಷ್ಮಿಯನ್ನು ಆಯುಧಗಳಿಂದ ಹೊಡೆದು, ಬಡಿದು ಕೊಂದಿದ್ದನು. ನಾಟಕ ನೋಡುತ್ತಿದ್ದ ಅಮಾಯಕ ಪ್ರೇಕ್ಷಕನೊಬ್ಬನು ಈ ದಾಳಿಗೆ ಸಿಕ್ಕಿ ಪ್ರಾಣ ಕಳೆದುಕೊಂಡಿದ್ದನು.

ಗಾಜಿಯಾಬಾದ್ ಮತ್ತು ದೆಹಲಿಯ ಒಟ್ಟು 10ಕ್ಕೂ ಅಧಿಕ ಕಾರ್ಮಿಕರ ದೀರ್ಘ ಮುಷ್ಕರದ ಸಂದರ್ಭದಲ್ಲಿ ಹಷ್ಮಿಯಾರ ನಾಟಕ ಹೋರಾಟಕಾರರಿಗೆ ಚೈತನ್ಯ, ಸ್ಫೂರ್ತಿ ನೀಡಿತ್ತು. ಮಾಲೀಕ ವರ್ಗದ ಕೆಂಗಣ್ಣಿಗೆ ಬಿದ್ದುತ್ತು ಬಳಿಕ ಗಾಜಿಯಾಬಾದ್‌ನ ಗ್ರಾಮವೊಂದರ ಮುನಿಸಿಪಾಲಿಟಿ ಚುನಾವಣೆಯ ಸಿಪಿಐ(ಎಂ) ಅಭ್ಯರ್ಥಿಯ ಪರ ಬೀದಿನಾಟಕದ ಮೂಲಕ ಪ್ರಚಾರ ನಡೆಸುತ್ತಿದ್ದ ಹಷ್ಮಿಯ ಬೀದಿನಾಟಕಗಳಿಗೆ ಉತ್ತರ ಪ್ರದೇಶದ ಜನತೆ ಮುಗಿಬೀಳುತ್ತಿದ್ದರು. ಜನ ಮನ್ನಣೆಗೆ ಪಾತ್ರನಾಗಿದ್ದ ಹಷ್ಮಿಯನ್ನು ಮುಗಿಸದಿದ್ದರೆ ನಮಗೆ ಸೋಲು ಖಚಿತವೆಂಬ ಭಾವನೆ ಯಿಂದ, ರಾಜಕೀಯ ದ್ವೇಷದ ವಕ್ರದೃಷ್ಟಿಗೆ ಹಷ್ಮಿ ಬಲಿಯಾಗಬೇಕಾಯಿತು.



ಪ್ರಜಾತಂತ್ರದಲ್ಲಿ 'ರಾಜಕೀಯ ದ್ವೇಷ - ಅಸೂಯೆಗಳಿಗೆ ಜಾಗವಿಲ್ಲ ಎಂಬ ಸಂದೇಶವನ್ನು ಹೊತ್ತು ತಂದ ಈ ತೀರ್ಪು " 14 ವರ್ಷಗಳ ನಂತರವಾದರೂ 'ಅಭಿವ್ಯಕ್ತಿ ಸ್ವಾತಂತ್ರ್ಯ' ವನ್ನು ಎತ್ತಿಹಿಡಿದಿದೆ ಎಂಬ ಸಮಾಧಾನ. ರಾಜಕೀಯ ಸವಾಲುಗಳನ್ನು ರಾಜಕೀಯವಾಗಿ ಸ್ವೀಕರಿಸದೆ, ಹಿಂಸಾತ್ಮಕ ಕೃತ್ಯಗಳಿಂದಲೇ ರಾಜಕೀಯ ನಡೆಸುವ ಇಂದಿನ ದಿನಗಳಲ್ಲಿ, ಉತ್ತಮ ಪ್ರಾಮಾಣಿಕ ರಾಜಕೀಯ ನಡೆಸುವವರಿಗೆ ಸಿಕ್ಕ ಜಯವಿದಾಗಿದೆ. ಇದರಿಂದ ಕಲಿಯಬೇಕಾದ್ದು, ಪ್ರಜಾಪ್ರಭುತ್ವದಲ್ಲಿ ರಾಜಕೀಯ ಸವಾಲುಗಳನ್ನು ರಾಜಕೀಯವಾಗಿಯೇ ಎದುರಿಸಬೇಕೇ ವಿನಃ ಹಿಂಸಾತ್ಮಕ ಕೃತ್ಯಗಳಿಂದಲ್ಲ ಎಂಬ ಎಚ್ಚರಿಕೆಯ ಪಾಠ. ಅದರಲ್ಲಿಯೂ ಕಾನೂನು ಬಾಹಿರವಾಗಿ ವರ್ತಿಸುವ ಕೋಮುವಾದಿಗಳಿಗೆ - ಮೂಲಭೂತ ವಾದಿಗಳಿಗೆ ಎಚ್ಚರಿಕೆಯ ಗಂಟೆಯಾಗಿದೆ.

ನ್ಯಾಯಾಲಯಗಳ ಈ ಪರಂಪರೆ ಹೀಗೆಯೇ ಮುಂದುವರಿಯಬೇಕು. ತಡವಾಗಿಯಾದರೂ ಸ್ವಾಗತಾರ್ಹ ತೀರ್ಪು ಎಂದು ಸಿಪಿಐ(ಎಂ) ಪ್ರ. ಕಾರ್ಯದರ್ಶಿಯವರು ಕಾಂ. ಸುರ್ಜಿತ್ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2003-05

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ.12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462.
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.

Printed & Published by Communist Party of India(Marxist), Karnataka State Committee. Editor: S.Y.GURUSHANTH